
ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಪುಟಗಳು : 36 ರೂ. 28/- ಕನ್ನಡ-ಇಂಗ್ಲೀಷ್ ಮಾಸಿಕ

ಬಾಪು ಪ್ರಪಂಚ

BAPU PRAPANCHA

ಸಂಪುಟ-05 • ಸಂಚಿಕೆ-06 • ನವೆಂಬರ್ 2023







"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ" CMofKarnataka https://dipr.karnataka.gov.in/ ಕರ್ನಾಟಕ ವಾರ್ತೆ

ರೂ. 28/- BAPU PRAPANCHA

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ

ಕನ್ನಡ-ಇಂಗ್ಲೀಷ್ ಮಾಸಿಕ ಸಂಪುಟ-05 • ಸಂಚಿಕೆ-06 • ನವೆಂಬರ್ 2023

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಬಾಪು ಪ್ರಪಂಚ
ಕನ್ನಡ-ಇಂಗ್ಲೀಷ್ ಮಾಸಿಕ

BAPU PRAPANCHA
(A monthly Kannada English Magazine of Gandhian Thoughts)

ಪ್ರಧಾನ ಸಂಪಾದಕರು
ನಾಡೋಜ ಡಾ. ವೂಡೇ ಪಿ. ಕೃಷ್ಣ

Chief Editor :
Nadoja Dr Wooday P Krishna

ಸಂಪಾದಕರು :
ಎನ್. ಆರ್. ವಿಶುಕುಮಾರ್

Editor :
N R Vishukumar

ಪ್ರಕಾಶಕರು :
ಕಾರ್ಯದರ್ಶಿ,
ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು - 560 001

Published by :
Secretary
Karnataka Gandhi Smaraka Nidhi
Gandhi Bhavana, Kumara Park East
Bangalore - 560 001

080 22261967 / 9738605799
gandhibhavanabengaluru@gmail.com

Printed at :
Printastic
272, 2nd Main Road, 6th Cross,
Lavakushanagar, Laggere Bangalore-58
Ph : +91 9886747417
E-mail : printastic.21@gmail.com

Design : **Ujwal Creations**, Bangalore

ಪತ್ರಗಳು

ಮಾನ್ಯರೆ ,

ಜೈಪುರದಲ್ಲಿ ಆರಂಭವಾಗಿರುವ ' ಗಾಂಧಿ ವಾಟಿಕಾ 'ಮ್ಯೂಸಿಯಂ ಬಗ್ಗೆ ಲೇಖನ ಚೆನ್ನಾಗಿದೆ. ಈ ರೀತಿಯ ಮ್ಯೂಸಿಯಂಗಳು ಪ್ರತಿ ರಾಜ್ಯದಲ್ಲಿ ಆಗಬೇಕು. ಮುಂದಿನ ಪೀಳಿಗೆಯವರಿಗೆ ನಾವು ಗಾಂಧಿ ಪರಿಚಯವನ್ನು ಉಳಿಸಿಯೇ ಹೋಗಬೇಕು. ಈ ನಿಟ್ಟಿನಲ್ಲಿ ರಾಜಸ್ತಾನ ಸರ್ಕಾರದ ಸಾಧನೆ ಅಭಿನಂದನೀಯ. ಮುಖ್ಯಮಂತ್ರಿ ಅಶೋಕ್ ಗೆಹಲೋಟ್ ಮತ್ತು ಮ್ಯೂಸಿಯಂ ಪರಿಕಲ್ಪನೆ ಮಾಡಿದ ಕುಮಾರ್ ಪ್ರಶಾಂತ್ ಅವರ ಕೊಡುಗೆಗಾಗಿ ಗಾಂಧಿ ಬಳಗದ ಧನ್ಯವಾದಗಳು.

ಗಾಂಧಿ ಬಳಗ, ಮಂಡ್ಯ

* * *

ಮಾನ್ಯರೆ,

ನಾಗೇಶ್ ಹೆಗಡೆಯವರ 'ಬಿಸಿ ಪ್ರಳಯದ ಹೊಸ್ತಿಲಲ್ಲಿ ಗಾಂದೀ ನೆರಳು' ಲೇಖನ ಭವಿಷ್ಯದ ಜಗತ್ತಿನ ಚಿತ್ರಣವನ್ನು ನೀಡಿದೆ. ಪರಿಸರ ಕಾಪಾಡಿಕೊಳ್ಳಲು ಗಾಂಧಿ ಮಾರ್ಗದಲ್ಲಿ ನಡೆಯದೆ ನಮಗೆ ಅನ್ಯ ಮಾರ್ಗವೇ ಇಲ್ಲ. ಪ್ರಕೃತಿ ನಮ್ಮ ಆಸೆಗಳನ್ನು ಈಡೇರಿಸಬಲ್ಲದೆ ಹೊರತು ನಮ್ಮ ದುರಾಸೆಗಳನ್ನು ಈಡೇರಿಸಲಾಗದು ಎನ್ನುವ ಗಾಂಧಿ ಮಾತು ನಮಗೆ ಈಗ ಎಚ್ಚರಿಕೆಯ ಗಂಟೆಯಾಗಿದೆ. ಜಾಗತಿಕ ಬಿಸಿ ಹೆಚ್ಚಳ ತರುವ ಅನಾಹುತಗಳನ್ನು ಎದುರಿಸಲು ನಮ್ಮಿಂದ ಸಾಧ್ಯವಿಲ್ಲ.

ಮಹಾಂತೇಶ್, ಬೆಂಗಳೂರು


* * *

ಮಾನ್ಯರೆ ,

ಅಮೇರಿಕಾದ ಮುಕ್ತ ಅಂತರ್ ಜಾಲ ಪ್ರವರ್ತಕ ಕಾರ್ಲ್ ಮಲ್ಮಡ್ ಅವರ ಭಾಷಣ ಕಣ್ಣು ತೆರೆಸುವಂತಿದೆ.

ಡಿ. ಉಮಾಪತಿಯವರ ಕನ್ನಡ ಅನುವಾದ ಸರಳವಾಗಿ ಸೊಗಸಾಗಿದೆ. ಜಗತ್ತಿನ ಜ್ಞಾನವನ್ನು ಜನರಿಗೆ ಮುಕ್ತವಾಗಿ ಉಚಿತವಾಗಿ ಹಂಚಬೇಕು. ಈ ನಿಟ್ಟಿನಲ್ಲಿ ಸರ್ಕಾರಗಳು ಮೊದಲ ಹೆಜ್ಜೆ ಇಡಬೇಕು ಎನ್ನುವ ಕಾಳಜಿಯಿಂದ ಅವರು ನಡೆಸುತ್ತಿರುವ ಅಭಿಯಾನಕ್ಕೆ ಯಶಸ್ಸು ದೊರೆಯಲಿ ಎಂದು ಹಾರೈಸುತ್ತೇವೆ.

ಮುಕ್ತ ಅಂತರ್ಜಾಲ ವೇದಿಕೆ ಗೆಳೆಯರು, ಬೆಂಗಳೂರು




ಪ್ರಿಯರೆ,


ಬಾಪೂ ಪ್ರಪಂಚ ಸಂಚಿಕೆಯ ಬಗ್ಗೆ ಓದುಗರು ವ್ಯಕ್ತಪಡಿಸುತ್ತಿರುವ ಸದಭಿಪ್ರಾಯಗಳಿಗೆ ಗಾಂಧಿ ಸ್ಮಾರಕ ನಿಧಿ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ನಿಮ್ಮ ಅಪೇಕ್ಷೆಯಂತೆ ಬಾಪೂ ಪ್ರಪಂಚ ಪತ್ರಿಕೆಯನ್ನು ಹೆಚ್ಚು ಜನರಿಗೆ ತಲುಪಿಸಲು ಪ್ರಯತ್ನಿಸುತ್ತೇವೆ.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು ಮತ್ತು ಬಾಪೂ ಪ್ರಪಂಚದ ಇತ್ತೀಚಿನ ಸಂಚಿಕೆಗಳನ್ನು
https://gandhibhavan.in
ಜಾಲತಾಣದಲ್ಲಿ ವೀಕ್ಷಿಸಿ.

ಚಂದಾ ಕಳುಹಿಸುವ ಮತ್ತು ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯ ತಿಳಿಸುವ ವಿಳಾಸ :
ಸಂಪಾದಕರು, ಬಾಪು ಪ್ರಪಂಚ
ಗಾಂಧಿ ಭವನ
ಕುಮಾರ ಪಾರ್ಕ್ ಪೂರ್ವ,
ಬೆಂಗಳೂರು –560001
gandhibhavanabengaluru@gmail.com

ಬಾಪು ಪ್ರಪಂಚ ಪತ್ರಿಕೆಯ ವಾರ್ಷಿಕ ಚಂದಾ ಹಣ 250 ರೂಗಳನ್ನು ಈ ಕೆಳಗಿನ ಕ್ಯೂಆರ್ ಕೋಡ್ ಮೂಲಕ ಪಾವತಿಸಿ, ನಿಮ್ಮ ಅಂಚೆ ವಿಳಾಸವನ್ನು ಗಾಂಧಿ ಭವನದ ಮೇಲಿನ ವಿಳಾಸಕ್ಕೆ ಹಣ ಪಾವತಿ ವಿವರಗಳ ಜೊತೆ ಕಳುಹಿಸಿ.





ಗಾಂಧೀಜಿಯವರ ಹಿಂದ್ ಸ್ವರಾಜ್ ಮತ್ತು ಕುವೆಂಪುರವರ ವಿಶ್ವಮಾನವತೆಯ ಸಪ್ತಸೂತ್ರಗಳು....

~ರವಿಚಂದ್ರ ಜಂಗಣ್ಣವರ

ಶ್ರೀ ಕುವೆಂಪು ಅವರ ವಿಶ್ವಮಾನವತೆಯ ಸಪ್ತಸೂತ್ರಗಳು ಸಾಹಿತ್ಯ ಆಸಕ್ತರಿಗೆ ಪರಿಚಿತ.ಕುವೆಂಪುರವರ ಮೇಲೆ ಮಹಾತ್ಮ ಗಾಂಧೀಜಿಯವರ ಗಾಢವಾದ ಪ್ರಭಾವ ಇರುವುದನ್ನು ನಾವು ಅವರ ಸಾಹಿತ್ಯ ರಚನೆಯಲ್ಲಿ ಕಾಣಬಹುದು. ವಿಶ್ವದ ಮಹಾನ್ ಚೇತನಗಳ ಬಗ್ಗೆ ಕುವೆಂಪುರವರು ಹಲವಾರು ಕವನಗಳನ್ನು ರಚಿಸಿದ್ದಾರೆ . ಅಂತೆಯೇ ಗಾಂಧೀಜಿಯವರ ಜೀವನದ ಪ್ರಮುಖ ಘಟನೆಗಳಿಗೆ ಸಂಬಂಧಿಸಿದಂತೆ ಕುವೆಂಪು ಅವರು ಬರೆದಿದ್ದಾರೆ. ಸ್ವಾತಂತ್ರ್ಯ ಲಕ್ಷ್ಮೀಗೆ_ ; ಶ್ರೀರಾಮಪುರದಲ್ಲಿ ಗಾಂಧೀಜಿ_; ಕುಳದ ಕಲಿಗೆ, ಗಾಂಧೀಜಿ ಕುರಿತು_ ಇವು ಕುವೆಂಪು ವಿರಚಿತ ಕೆಲವು ಗಾಂಧಿ ಕವನಗಳು .

ಬೆಳಗಾವಿಯ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಲು ಗಾಂಧೀಜಿ 1927 ರಲ್ಲಿ ಬೆಳಗಾವಿಗೆ ಬಂದಿದ್ದಾಗ ಅವರನ್ನು ನೋಡಲೆಂದೇ ಕುವೆಂಪು ಬೆಳಗಾವಿಗೆ ಹೋಗಿ ಬಂದಿದ್ದರು. ಈ ಬಗ್ಗೆ ತಮ್ಮ ಆತ್ಮಕಥೆ ನೆನಪಿನ ದೋಣಿಯಲ್ಲಿ ಕೂಡಾ ಅವರು ಬರೆದು ಕೊಂಡಿದ್ದಾರೆ. ವಿಚಾರ ಕ್ರಾಂತಿಗೆ ಆಹ್ವಾನ ಮುಂತಾದ ಬರಹಗಳಲ್ಲಿ ಕೂಡಾ ಕುವೆಂಪುರವರ ಗಾಂಧೀ ಅಭಿಮಾನ ಮತ್ತು ಪ್ರೀತಿಯನ್ನು ಕಾಣಬಹುದು.ಯರವಾಡ ಜೈಲಿನಲ್ಲಿ ಗಾಂಧೀಜಿ ಉಪವಾಸ ನಿರತರಾದಾಗ ಕುವೆಂಪು ಅವರು ಸಹ ಇಲ್ಲಿ ಉಪವಾಸ ಮಾಡಿದ್ದನ್ನು ಸ್ಮರಿಸಬಹುದು. ಈ ರೀತಿ ಗಾಂಧೀಯವರಿಂದ ಪ್ರಭಾವಿತರಾದ ಕುವೆಂಪು ಅವರ ವಿಶ್ವಮಾನವತೆಯ ಸಪ್ತಸೂತ್ರಗಳಲ್ಲಿ ಗಾಂಧಿ ಪ್ರಭಾವವನ್ನು ನಾವು ಗುರುತಿಸ ಬಹುದು . ಸಪ್ತ ಸೂತ್ರದ ಮೊದಲನೇ ಸೂತ್ರ ಮತ್ತು ಆರನೇಯ ಸೂತ್ರಗಳು ಹೀಗಿವೆ.

ಮೊದಲ ಸೂತ್ರ : ಮನುಷ್ಯಜಾತಿ ತಾನೊಂದೆ ವಲಂ" ಎಂಬುದನ್ನು ನಿರುಪಾಧಿಕವಾಗಿ ಸ್ವೀಕರಿಸಬೇಕು.

ಗಾಂಧೀಜಿ ಕೂಡ ಜಗತ್ತಿನ ಎಲ್ಲ ಮಾನವರು ಒಂದೇ. ಅವರ ನಡುವೆ ಬೇಧ ಭಾವ ಇರಕೂಡದು ಎಂದೇ ಪ್ರತಿಪಾದಿಸುತ್ತಿದ್ದರು . ದಕ್ಷಿಣ ಆಫ್ರಿಕಾದಲ್ಲಿ ಅವರು ಬಿಳಿಜನರ ವರ್ಣಬೇಧ ನೀತಿಯ ವಿರುದ್ಧ ಆರಂಭಿಸಿದ ಹೋರಾಟವೇ ಇದಕ್ಕೆ ಸಾಕ್ಷಿ. ಕುವೆಂಪುರವರ ನಿಲುವು ಕೂಡಾ ಇದೇ ಆಗಿದೆ.

ಆರನೇ ಸೂತ್ರ : ಮತ ಗುಂಪು ಕಟ್ಟುವ ವಿಷಯವಾಗಬಾರದು. ಯಾರೂ ಯಾವ ಒಂದು ಮತಕ್ಕೆ ಸೇರದೆ, ಪ್ರತಿಯೊಬ್ಬನೂ ತಾನು ಕಂಡುಕೊಳ್ಳುವ 'ತನ್ನ'

ಮತಕ್ಕೆ ಮಾತ್ರ ಸೇರಬೇಕು. ಅಂದರೆ ಜಗತ್ತಿನಲ್ಲಿ ಎಷ್ಟು ವ್ಯಕ್ತಿಗಳಿದ್ದಾರೋ ಅಷ್ಟೇ ಸಂಖ್ಯೆಯ ಮತಗಳಿರುವಂತಾಗುತ್ತದೆ. ಯಾರೊಬ್ಬರೂ ಇನ್ನೊಬ್ಬರ ಮತಕ್ಕೆ ಸೇರಿ ಗುಂಪು ಕಟ್ಟಿ ಜಗಳ ಹಚ್ಚುವಂತಾಗಬಾರದು.

ಈ ಮೇಲಿನ ಸೂತ್ರಗಳಲ್ಲಿರುವ ಎಷ್ಟು ವ್ಯಕ್ತಿಗಳಿದ್ದಾರೋ ಅಷ್ಟು ಮತ ಎಂಬ ಮಾತಿಗೆ ಹೋಲುವ ಮಾತುಗಳನ್ನು ನಾವು ಗಾಂಧೀಯವರ ಹಿಂದ್ ಸ್ವರಾಜ್ ನಲ್ಲಿ ಕೂಡ ನೋಡಬಹುದು. ಆ ಸಂಭಾಷಣೆ ಕೆಳಗಿನಂತಿದೆ

ಓದುಗ : ಮುಸಲ್ಮಾನರು ಈ ದೇಶಕ್ಕೆ ಬಂದುದರಿಂದ ನಮ್ಮ ರಾಷ್ಟ್ರೀಯತೆಯ ಭಂಗವಾಗಲಿಲ್ಲವೇ ?

ಸಂಪಾದಕ : ಬೇರೆ ಬೇರೆ ಧರ್ಮದ ಜನರು ಇದ್ದರೆ ಹಿಂದೂಸ್ಥಾನ ಒಂದು ರಾಷ್ಟ್ರವಾಗದೇ ಹೋದೀತೆ? ಬೇರೆ ಬೇರೆ ದೇಶಗಳಿಂದ ಹೊಸಬರು ಬಂದರೆ ರಾಷ್ಟ್ರೀಯತೆ ನಾಶವಾಗದು; ಬಂದವರು ಇಲ್ಲಿ ಬೆರೆತು ಹೋಗುತ್ತಾರೆ. ಆ ಸ್ಥಿತಿ ಬಂದಾಗಲೇ ಒಂದು ದೇಶ ರಾಷ್ಟ್ರವಾಗುತ್ತದೆ. ಆ ದೇಶಕ್ಕೆ ಹೊರಗಿನವರನ್ನು ಜೀರ್ಣಿಸಿಕೊಳ್ಳುವ ಶಕ್ತಿ ಬೇಕು. ಹಿಂದೂಸ್ಥಾನ ಯಾವಾಗಲೂ ಹೀಗೆಯೆ ಇದೆ. ನಿಜವಾಗಿ "ಎಷ್ಟು ಜನ ಮನುಷ್ಯರೋ ಅಷ್ಟು ಧರ್ಮ". ಆದರೆ ರಾಷ್ಟ್ರೀಯತೆ ಭಾವನೆಯುಳ್ಳವರು ಪರಸ್ಪರ ಧರ್ಮದಲ್ಲಿ ಕೈ ಹಾಕುವುದಿಲ್ಲ . ಹಾಕಿದರೆ ಅವರು ಒಂದು ರಾಷ್ಟ್ರವಾಗಲು ಯೋಗ್ಯರಲ್ಲ. ಈ ದೇಶವನ್ನು ತಮ್ಮದಾಗಿ ಮಾಡಿಕೊಂಡ ಹಿಂದೂ, ಮುಸಲ್ಮಾನ, ಈಸಾಯಿಗಳು ಎಲ್ಲರೂ ದೇಶಭ್ರಾತೃಗಳು. ತಮ್ಮ ಹಿತಕ್ಕಾಗಿಯಾದರೂ ಅವರು ಐಕ್ಯಮತದಿಂದ ಬಾಳಬೇಕು. ಒಂದೇ ಧರ್ಮವಿದ್ದರೇನೇ ಒಂದು ರಾಷ್ಟ್ರ ಎಂಬುದು ಲೋಕದಲ್ಲಿ ಎಲ್ಲೂ ಇಲ್ಲ. ಹಿಂದೂಸ್ಥಾನದಲ್ಲಂತೂ ಹಾಗೆ ಇಲ್ಲವೇ ಇಲ್ಲ. ಹಿಂದೂ ಮುಸಲ್ಮಾನರಲ್ಲಿ ಹರಿಯುತ್ತಿರುವುದು ಒಂದೇ ರಕ್ತ.

ಗಾಂಧೀಜಿ ಮತ್ತು ಕುವೆಂಪು ಅವರ ವಿಚಾರ ಮತ್ತು ಮಾತುಗಳಲ್ಲಿ ಬಹಳ ಸಾಮ್ಯತೆ ಕಂಡುಬರುತ್ತದೆ. ಇದನ್ನು ಅರ್ಥಮಾಡಿಕೊಂಡು ಇಂದಿನ ಮುಸ್ಲಿಂ ವಿರೋಧಿ, ಹಿಂದೂ ವಿರೋಧಿ ಮತ್ತು ಇನ್ನಿತರ ಧರ್ಮವಿರೋಧಿ ಜನರು ಸುಖದಿಂದ ಬಾಳುವಂತಾಗಲಿ...



"ಮಹಿಳೆಯರು ನಾವು ಪುರುಷರಿಗಿಂತ ಕಡಿಮೆ ಅಥವಾ ಪುರುಷರ ಅಧೀನದಲ್ಲಿರಬೇಕು ಎಂದು ಭಾವಿಸಿಕೊಳ್ಳಬೇಕಾದ ಯಾವ ಸಂದರ್ಭವೂ ಇಲ್ಲ."

~ ಮಹಾತ್ಮ ಗಾಂಧಿ

ಚಿತ್ರ : ಬಿ.ಜಿ. ಗುಜ್ಜಾರಪ್ಪ




ಗಾಂಧೀಜಿ ಕುರಿತು

ಶ್ರೀ ಮಹಾತ್ಮಾ ಗಾಂಧಿಯೆ
ಕೀರ್ತಿದೇವಿಯ ಬಂಧಿಯೆ
ಭರತ ನೆಲದಭ್ಯುದಯ ಸೂತ್ರವ
ಹಿಡಿದ ಧರ್ಮದ ಮೂರ್ತಿಯೆ ,
ಭಾರತೀಯರ ಕೀರ್ತಿಯೆ ,
ಕರ್ಮಯೋಗದ ಸಿದ್ಧನು
ನೀನು ಕಲಿಯುಗದ ಬುದ್ಧನು !
ನಿನ್ನ ಕರುಣೆಯ ಸರಿಯು ಸುರಿಯಲಿ
ಭೇದಗಳನದು ಕೊಚ್ಚಿ ಹರಿಯಲಿ !
ಮಂಗಳದ ಮಳೆ ಕರೆಯಲಿ !
ರಂಗ ನಿನ್ನನು ಪೊರೆಯಲಿ !

ಹೇ ಅಹಿಂಸಾ ಶೀಲನೆ ,
ಖಾದಿ ಚರಕದ ಲೋಲನೆ ,
ನಿನ್ನ ಸೇವೆಯ ಅಮಲ ಗಂಗೆಯು
ಜಗವ ಪಾವನಗೈಯಲಿ ;
ಮುಕ್ತಿಗೆಮ್ಮನು ಒಯ್ಯಲಿ !
ನೀನು ಪರಮ ಪವಿತ್ರನು ,
ನೀನಮರ ಚಾರಿತ್ರನು !
ಗತಿವಿಹೀನರನಾಥ ಬಂಧುವು ,
ನೀನು ದಯೆಯ ವಿಶಾಲ ಸಿಂಧುವು !
ಮಂಗಳದ ಮಳೆ ಕರೆಯಲಿ ,
ರಂಗ ನಿನ್ನನು ಪೊರೆಯಲಿ !

ಭರತ ಖಂಡದ ಜ್ಯೋತಿಯೆ ,
ಹೇ ಅಪಾರ ಪ್ರೀತಿಯೆ ,
ನಿನ್ನ ತಾಳ್ಮೆಯು ಶಾಂತಿ ಶಕ್ತಿಗಳಿಳೆಯ ಕಂಗಳ ಹಿಡಿದಿವೆ ,
ಎಲ್ಲರೊಲುಮೆಯ ಪಡೆದಿವೆ ,
ನೀನೆ ಪರಮಾದರ್ಶವು ,
ಧನ್ಯ ಭಾರತ ವರ್ಷವು !
ನಿನ್ನ ಹೊಯಿಲಿನೊಳೆಲ್ಲ ಹರಿಯಲಿ ;
ಜಾತಿ ವೈರನೆಲ್ಲ ಮರೆಯಲಿ ,
ಮಂಗಳದ ಮಳೆ ಕರೆಯಲಿ ,
ರಂಗ ನಿನ್ನನು ಪೊರೆಯಲಿ !

ರಾಷ್ಟ್ರಕವಿ ಕುವೆಂಪು : (23.07.1927)



ಯುವಜನರಿಗಾಗಿ ಗಾಂಧಿ : ವಿಚಾರ ಸಂಕಿರಣ

– ಡಾ.ಎಂ.ಕೆಂಪಮ್ಮ

ಗಾಂಧಿ ನಮ್ಮ ನಿಮ್ಮೆಲ್ಲರ ಹಾಗೆ ಒಬ್ಬ ಮನುಷ್ಯನೆ ; ಆದರೆ ಆ ವ್ಯಕ್ತಿತ್ವ ರೂಪುಗೊಂಡ ಬಗೆಯಿದೆಯಲ್ಲ ಅದು ಅನನ್ಯ.

ಅವರು ತಮ್ಮ ಬದುಕಿನ ಅನೇಕ ಘಟನೆಗಳನ್ನು ಸತ್ಯಾನ್ವೇಷಣೆಯ ಪ್ರಯೋಗಕ್ಕೆ ಒಡ್ಡಿ 'ಮಹಾತ್ಮ ಗಾಂಧಿ'ಯಾಗಿ ವಿಶ್ವಮಾನ್ಯರಾಗಿದ್ದಾರೆ. ಇತರರಿಗಾಗಿಯೇ ತಮ್ಮ ಬದುಕನ್ನು ಸವೆಸುತ್ತ ಇಡೀ ಜಗತ್ತನ್ನು ತಮ್ಮ ಸತ್ಯ , ಶಾಂತಿ , ಅಹಿಂಸೆಯ ತತ್ವಗಳಿಂದ ಹಾಗೂ ತಮ್ಮ ಸರಳ ಜೀವನದಿಂದ ಪ್ರಭಾವಿಸಿದ ಅಪರೂಪದ ವ್ಯಕ್ತಿ . ಸರ್ವರ ಉದ್ಧಾರಕ್ಕಾಗಿ ತಮ್ಮ ಇಡೀ ಜೀವಮಾನವನ್ನು ಕಾಪಿಟ್ಟವರಲ್ಲಿ ಅಗ್ರಮಾನ್ಯರಾದವರು ಗಾಂಧಿ .

ಭಾರತದ ಪುಣ್ಯವೇ ಆಗಿರುವ ಗಾಂಧಿ ಇಂದು ನಮ್ಮಿಂದ ದೂರಾಗುತ್ತಿದಾರೆಯೇ ಎಂಬ ಆತಂಕ, ಅನುಮಾನಗಳು ಎಲ್ಲೆಡೆ ಕಾಣಿಸುತ್ತಿವೆ. ಇಂತಹ ವ್ಯಕ್ತಿಯನ್ನು ಪಡೆದದ್ದಕ್ಕೆ ಇಡೀ ಜಗತ್ತೇ ಹೆಮ್ಮೆ ಪಡುತ್ತಿದ್ದ ದಿನಗಳು ಹಿಂದೆ ಸರಿದು ಸ್ವಾರ್ಥವೇ ಮೇಲುಗೈ ಸಾಧಿಸುತ್ತ, ಅಟ್ಟಹಾಸದಿಂದ ಮೆರೆಯುತ್ತಿರುವ ಇಂದಿನ ದಿನಗಳಲ್ಲಿ ಮತ್ತೆ ಗಾಂಧಿಯನ್ನು ನಾವು ನಮ್ಮ ಮುಂದಿನ ಪೀಳಿಗೆಗೆ ಓದಿಸಿ, ತಿಳಿಸುವ ಕೆಲಸ ಇಂದು ಅತ್ಯಗತ್ಯವಾಗಿದೆ. ಆಧುನಿಕತೆ, ಕೈಗಾರೀಕರಣ ಮತ್ತು ನಗರೀಕರಣಗಳು ಒಂದು ಸ್ಫೋಟಕ ಸ್ಥಿತಿಯನ್ನು ತಲುಪಿರುವ ಇಂದಿನ ಜಾಗತೀಕರಣದ ಸಂದರ್ಭದಲ್ಲಿ; ಸಾಮಾಜಿಕ,ರಾಜಕೀಯ, ಧಾರ್ಮಿಕ ಮತೀಯ ಭಾವನೆಗಳಲ್ಲಿ ಸಂಕುಚಿತತೆ ತಳೆದು ಅವುಗಳೇ ತಮ್ಮ ಜೀವನದ ಆದರ್ಶಗಳೆಂಬಂತಹ ಸಂದಿಗ್ಧ ವಾತಾವರಣ ಎಲ್ಲೆಡೆ ಸೃಷ್ಟಿಯಾಗುತ್ತಿರುವ ಸನ್ನಿವೇಶದಲ್ಲಿ; ಗಾಂದೀಜಿ ಚಿಂತನೆಗಳಿಂದ ಮಾತ್ರ ಏನಾದರೂ ಪರಿಹಾರ ಕಂಡುಕೊಳ್ಳ ಬಹುದೆಂಬುದು ಗಾಂಧೀವಾದಿಗಳ, ಸಮಾಜವಾದಿಗಳ ಪ್ರಬಲ ನಂಬಿಕೆ .

ಈ ನಿಟ್ಟಿನಲ್ಲಿ ಯುವಜನರಿಗೆ ಗಾಂಧೀಜಿ ಚಿಂತನೆಗಳನ್ನು ಪರಿಚಯಿಸಲು ಮಂಡ್ಯದ ಕರ್ನಾಟಕ ಸಂಘ ಮತ್ತು ಬೆಂಗಳೂರಿನ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಂಯುಕ್ತವಾಗಿ ಅಕ್ಟೋಬರ್

ತಿಂಗಳಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ (ಎನ್ ಎಸ್ ಎಸ್) ವಿದ್ಯಾರ್ಥಿಗಳಿಗಾಗಿ ಎರಡು ದಿನಗಳ ಶಿಬಿರವನ್ನು ಮಂಡ್ಯದ ಕರ್ನಾಟಕ ಸಂಘದ ಆವರಣದಲ್ಲಿ ಸಂಘಟಿಸಿತ್ತು.

ಕರ್ನಾಟಕ ಸಂಘದ ಅಧ್ಯಕ್ಷರಾದ ಪ್ರೊ.ಜಯ ಪ್ರಕಾಶಗೌಡರು ಪ್ರಾಸ್ತಾವಿಕ ನುಡಿಗಳನ್ನಾಡಿ "ಗಾಂಧೀಜಿ ಎಂದಿಗಿಂತ ಇಂದು ಹೆಚ್ಚು ಪ್ರಸ್ತುತವಾಗಬೇಕಿದೆ. ಅವರ ಸರಳತೆ, ಸಜ್ಜನಿಕೆ, ಪ್ರಾಮಾಣಿಕತೆ, ಹೊಂದಾಣಿಕೆ, ಪ್ರೀತಿ ಇಂದು ಪೂರ್ಣ ಮಾಯವಾಗಿ; ಅಟ್ಟಹಾಸ, ಅಧಿಕಾರದಾಹ, ಹಣದ ವ್ಯಾಮೋಹ, ದುರಾಸೆ, ಅನೀತಿಗಳೇ ವಿಜೃಂಭಿಸುತ್ತಿವೆ. ಇವುಗಳೇ ಇಂದು ನಮ್ಮನ್ನು ಆಳುವವರ ಮಾನ ದಂಡಗಳಾಗಿವೆ . ಸೂಕ್ತ ಮಾರ್ಗದರ್ಶನವಿಲ್ಲದೆ ಅಧಃಪತನದ ಹೊಳೆಯಲ್ಲಿ ಕೊಚ್ಚಿ ಹೋಗುತ್ತಿರುವ ಮಂದಿಯನ್ನು ಗಾಂಧೀಜಿಯ ಸಿದ್ಧಾಂತಗಳ ಒಡ್ಡುಕಟ್ಟಿ ಸಮಾಜದಲ್ಲಿ ಶಾಂತಸ್ಥಿತಿಯನ್ನು ಮೂಡಿಸಿ ಯುವಜನತೆಯ ಮನಸ್ಸಿನಲ್ಲಿ ಗಾಂಧೀಜಿಯವರ ವಿಚಾರಗಳನ್ನು ಬಿತ್ತಿ ಬೆಳೆಯ ಬೇಕಾಗಿದೆ. ಈ ಆಶಾಭಾವನೆಯಿಂದ ಈ ವಿಚಾರ ಸಂಕಿರಣವನ್ನು ಆಯೋಜಿಸಿದ್ದೇವೆ ಎಂದು ನುಡಿದರು.

ನಾಡಿನಾದ್ಯಂತ ಗಾಂಧಿ, ಅಂಬೇಡ್ಕರ್ ಚಿಂತನೆಗಳನ್ನು , ಸಂವಿಧಾನದ ಆಶಯವನ್ನು ಎಲ್ಲರಿಗೂ ತಲುಪಿಸುವ ಕಾರ್ಯದಲ್ಲಿ ನಿರಂತರವಾಗಿ ತೊಡಗಿರುವ ಕರ್ನಾಟಕ ಉಚ್ಚನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳಾದ ನಾಗಮೋಹನದಾಸ್ ಅವರು ವಿಚಾರ ಸಂಕಿರಣವನ್ನು ಉದ್ಘಾಟಿಸಿದರು.

'ಗಾಂಧೀಜಿ ಬಗ್ಗೆ ನನ್ನಂತಹ ಸಾವಿರ ಜನ ಹೇಳಿದರು ಮುಗಿಯದಷ್ಟು ವಿಚಾರಗಳಿವೆ.

ಗಾಂಧೀ ನಮ್ಮ ಕುಟುಂಬದ ಮೇಲೆ ದೊಡ್ಡ ಪರಿಣಾಮ ಬೀರಿದ್ದಾರೆ. ಗಾಂಧೀ ಮದರಾಸಿಗೆ ಬಂದಾಗ ಅಲ್ಲಿ ಮರೀನಾ ಬೀಚ್ನಲ್ಲಿ ತುಂಬಾ ದಿನ ಉಳಿದುಕೊಂಡು ದಿನಕ್ಕೊಂದು ವಿಷಯ ಕುರಿತು ನೀಡುತ್ತಿದ್ದ ಉಪನ್ಯಾಸವನ್ನು ನಮ್ಮ ತಾತ ಭಾಗವಹಿಸಿ ಕೇಳಿಸಿಕೊಂಡು ಬಂದು ಅದನ್ನೆಲ್ಲ ನಮ್ಮ ತಂದೆಗೆ ವಿವರಿಸುತ್ತಿದ್ದರು. ದಕ್ಷಿಣ ಭಾರತದ ಬೇರೆ



ಬೇರೆ ರಾಜ್ಯಗಳಿಂದ ಬಂದು ಸೇರುತ್ತಿದ್ದ, ಸಾವಿರಾರು ಜನರಿಗೆ ಸ್ವಾತಂತ್ರ್ಯ ಏಕೆ ಬೇಕು? ಅಹಿಂಸಾಮಾರ್ಗ ಏಕೆ ಅನುಸರಿಸಬೇಕು ? ವಿದೇಶಿ ವಸ್ತುಗಳನ್ನು ಹೇಗೆ ಏಕೆ ಬಹಿಷ್ಕರಿಸಬೇಕು ? ಗ್ರಾಮರಾಜ್ಯ ಎಂದರೇನು? ಎಂಬ ಬೇರೆ ಬೇರೆ ವಿಚಾರಗಳನ್ನು ಕುರಿತು ಪ್ರತಿ ನಿತ್ಯ ಗಾಂಧೀಜಿ ಮತ್ತು ಅವರ ಅನುಯಾಯಿ ರಾಷ್ಟ್ರೀಯ ನಾಯಕರುಗಳು ಮಾತನಾಡುತ್ತಿದ್ದರು .

ಇದನ್ನೆಲ್ಲ ಕೇಳಿ ಪ್ರೇರಿತರಾದ ನಮ್ಮ ತಾತ ನಮ್ಮ ತಂದೆಗೆ "ನೋಡಪ್ಪ , ಹೊಲ, ಗದ್ದೆ, ಎತ್ತುಗಳನ್ನು ಬೇಕಾದರೆ ಮಾರಿಬಿಡು; ಆದರೆ ಗಾಂದೀಜಿ ಹೇಳಿದಂಗೆ ನಡೆದುಕೊಂಡು ಹೋಗು" ಎಂದರಂತೆ .

ಇದನ್ನು ಕೇಳಿ ತುಂಬಾ ಖುಷಿಪಟ್ಟ ನಮ್ಮ ತಂದೆ 14 ನೇ ವಯಸ್ಸಿನಲ್ಲಿಯೇ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗಶಃ ದುಮಿಕಿದ್ದವರು ಪೂರ್ಣ ಪ್ರಮಾಣದಲ್ಲಿ ಬಾಗಿಯಾಗುತ್ತಾರೆ. ಅನೇಕ ಪೊಲೀಸ್ ಕೇಸುಗಳನ್ನು ಎದುರಿಸುತ್ತಾರೆ. ಮೂರುವರೆ ವರ್ಷ ಜೈಲು ಶಿಕ್ಷೆ ಅನುಭವಿಸುತ್ತಾರೆ. ಈ ರೀತಿ ಈ ದೇಶದ ಸಾಧಾರಣ, ಮುಗ್ಧ ರೈತರನ್ನು ಬ್ರಿಟೀಷ್ ಸಾಮ್ರಾಜ್ಯಶಾಹಿ ವಿರುದ್ಧ ಸೆಟೆದು ನಿಲ್ಲುವಂತೆ ಮಾಡಿದ ಮಹಾನ್ ಚೇತನ ಗಾಂಧಿ ಅನ್ನೋದನ್ನು ಮರೆಯಬಾರದು. ಹಾಗಾಗಿ ಭಾರತ ದೇಶದ ಸ್ವಾತಂತ್ರ್ಯ ಹೋರಾಟ ಜನಸಾಮಾನ್ಯರು ನಡೆಸಿದ ಹೋರಾಟ ರೈತರು, ಕಾರ್ಮಿಕರು ಮಹಿಳೆಯರು ದಲಿತರು, ಅಲ್ಪಸಂಖ್ಯಾತರು, ಬುಡಕಟ್ಟು ಜನಾಂಗ, ಹಾಗೂ ನಿಮ್ಮಂತಹ ವಿದ್ಯಾರ್ಥಿ ಯುವಜನರು ಭಾಗವಹಿಸಿದ ಹೋರಾಟ. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕೇವಲ ಹಿಂದುಗಳ ರಕ್ತ ಹರಿದಿಲ್ಲ ಜೊತೆಗೆ ಕ್ರೈಸ್ತರು , ಸಿಕ್ಕರು, ಬೌದ್ಧರ ರಕ್ತ ಹರಿದಿದೆ ಎಂಬ ಸತ್ಯವನ್ನು ತಾವು ಮರೆಯಬಾರದು.

ಈ ರೀತಿ ಇಡೀ ಸ್ವಾತಂತ್ರ್ಯ ಚಳವಳಿಯನ್ನು ಸಾರ್ವತ್ರಿಕ ಚಳುವಳಿಯಾಗಿ ಕಟ್ಟಿಬೆಳೆಸಿದ ಕೀರ್ತಿ ಗಾಂಧೀಜಿ ಅವರದು. ಇಂತಹ ಗಾಂಧಿಯನ್ನು ಇಂದು ನಾವು ಯಾಕೆ ನೆನೆಸಿಕೊಳ್ಳಬೇಕು ? 75 ವರ್ಷಗಳು ಕಳೆದರೂ ಇಂದು ದೇಶ ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಬಿಕ್ಕಟ್ಟಿನಲ್ಲಿದ್ದು ಜನಸಾಮಾನ್ಯರು ದಿವಾಳಿಯಾಗಿದ್ದಾರೆ. ಇಲ್ಲಿ ನಮಗೆ ಗಾಂಧಿ ಪ್ರಸ್ತುತರಾಗುತ್ತಾರೆ. ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಅನ್ನ ನೀಡುತ್ತಿರುವ ರೈತರು ಕಂಗೆಟ್ಟಿದ್ದಾರೆ. ರೈತರ ಸಮಸ್ಯೆಯನ್ನು ಪರಿಹಾರ ಮಾಡೋದು ಸರ್ಕಾರದ ಆದ್ಯಕರ್ತವ್ಯ. ಸರ್ಕಾರ ಗಾಂಧೀಮಾರ್ಗದಲ್ಲಿ ನಡೆದರೆ, ಅವರ ಸಂದೇಶಗಳನ್ನು ಅನುಸರಿಸಿದರೆ ರೈತರ ಸಮಸ್ಯೆ ಪರಿಹಾರವಾಗುತ್ತದೆ ಎಂಬುದು ನನ್ನ ವಿಶ್ವಾಸ.

ಇಂದು ಸಂವಿಧಾನ ಸುಟ್ಟವರು , ಮಸೀದಿಯನ್ನು ಒಡೆದವರು, ಬೆಂಕಿ ಹಚ್ಚಿದವರು ಸಮಾಜದಲ್ಲಿ ಮೀಸೆ ತಿರುವಿಕೊಂಡು ಓಡಾಡುತ್ತಿದ್ದಾರೆ . ಇಂಥ ಆಷಾಢಭೂತಿಗಳ ಸಂಖ್ಯೆ ಹೆಚ್ಚಾಗುತ್ತಿದೆ.

ದೇಶದಲ್ಲಿ ಶೇ. 43ರಷ್ಟು ರಾಜಕಾರಣಿಗಳು ಅಪರಾಧಿಕರಣಗಳ ಹಿನ್ನೆಲೆ ಹೊಂದಿದ್ದಾರೆ. ಇವರು ಯಾರೂ ಕೂಡ ತಮ್ಮ ತಪ್ಪನ್ನು ನ್ಯಾಯಾಲಯದಲ್ಲಿ ಒಪ್ಪಿಕೊಳ್ಳುವುದಿಲ್ಲ. ಆದರೆ ಮಹಾತ್ಮ ಗಾಂಧಿ ಅವರು ತಮ್ಮ ಜೀವಿತಾವಧಿಯಲ್ಲಿ ಒಮ್ಮೆಯೂ ತಮ್ಮ ತಪ್ಪನ್ನು ನ್ಯಾಯಾಲಯದಲ್ಲಿ ಮುಚ್ಚಿಡಲಿಲ್ಲ.ಹೀಗಾಗಿಯೇ ಅವರು ಸುಮಾರು ಮೂರು ಸಾವಿರ ದಿನಗಳನ್ನು ಜೈಲಿನಲ್ಲೇ ಕಳೆದಿದ್ದಾರೆ. ರಾಜದ್ರೋಹ ಪ್ರಕರಣದಲ್ಲಿ ಅವರನ್ನು ಹಲವಾರು ಬಾರಿ ಜೈಲಿಗೆ ಅಟ್ಟಲಾಗಿತ್ತು . ಚಾರ್ಜ್ ಶೀಟ್ ನಲ್ಲಿ ಪೋಲಿಸರು ಬರೆದದ್ದನ್ನು ಗಾಂಧೀಜಿ ಕೋರ್ಟಿನಲ್ಲಿ ನಿರಾಕರಿಸದೆ ಪೂರ್ಣವಾಗಿ ಒಪ್ಪಿಕೊಳ್ಳುತ್ತಿದ್ದರು. ಹೀಗಾಗಿ ನ್ಯಾಯಾಧೀಶರು ಅನಿವಾರ್ಯವಾಗಿ ಶಿಕ್ಷೆ ವಿಧಿಸಿ ಗಾಂಧಿಯವರನ್ನು ಜೈಲಿಗೆ ಕಳುಹಿಸುತ್ತಿದ್ದರು. ಇದು ಗಾಂಧೀಜಿಯ ಸತ್ಯ ಮಾರ್ಗ ..

ನಾವು ಗಾಂದೀಜಿ ಭಾವಚಿತ್ರಕ್ಕೆ ಹಾರಹಾಕಿದರೆ, ಪ್ರತಿಮೆಗೆ ನಮಸ್ಕಾರ ಮಾಡಿದರೆ, ರಾಜ್ಘಾಟ್ನಲ್ಲಿ ಪುಷ್ಪಾರ್ಚನೆ ಮಾಡಿದರೆ ಗಾಂಧೀಜಿಗೆ ಗೌರವ ಬರುವುದಿಲ್ಲ. ಅವರು ನಡೆದ ಹಾದಿಯಲ್ಲಿ ನಾವು ನಡೆಯಬೇಕು, ಅವರು ಅನುಸರಿಸಿದ ಆದರ್ಶಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ಅದೇ ಗಾಂಧೀಜಿ ಅವರಿಗೆ ನಾವು ಕೊಡುವ ಗೌರವವಾಗಿದೆ ಎಂದು ತಿಳಿಸುತ್ತಾ ಅನೇಕ ನಿದರ್ಶನಗಳ ಮೂಲಕ ಗಾಂಧೀ ವಿಚಾರಗಳನ್ನು ತಿಳಿಸಿದರು.

ಅಜಿಂ ಪ್ರೇಮಜಿ ವಿಶ್ವವಿದ್ಯಾಲಯದ ಪ್ರೊಫೆಸರ್ ಮತ್ತು ಖ್ಯಾತ ಅಂಕಣಕಾರರಾದ ಪ್ರೊ.ಎ.ನಾರಾಯಣ ಅವರು 'ಗಾಂಧೀಜಿ : ಯುವಜನತೆಗಾಗಿ ' ವಿಚಾರ ಸಂಕಿರಣದ ದಿಕ್ಸೂಚಿ ಭಾಷಣ ಮಾಡಿ ವಿದ್ಯಾರ್ಥಿಗಳೊಂದಿಗೆ ಸಂವಾದಿಸಿ ಹಲವು ಮಹತ್ವದ ವಿಷಯಗಳ ಮೇಲೆ ಬೆಳಕು ಚೆಲ್ಲಿ ಕೇಳುಗರಲ್ಲಿ ಕುತೂಹಲ ಹೆಚ್ಚಿಸಿದರು. ಒಳನೋಟಗಳುಳ್ಳ ತಮ್ಮ ವಿಚಾರಗಳಿಂದ ನಿಜವಾದ ಅರ್ಥದಲ್ಲಿ ವಿಚಾರ ಸಂಕಿರಣಕ್ಕೆ ದಿಕ್ಸೂಚಿ ಮಾತುಗಳನ್ನೇ ಆಡಿದರು.

" ಜಗತ್ತಿನಲ್ಲಿ ಎಲ್ಲೇ ಹೋದರೂ ಕೂಡ ಭಾರತವನ್ನು ಗುರುತಿಸುವುದು ಅದು ಒಂದು ದೇಶವೆಂದಲ್ಲ . 'ಭಾರತ' ಎಂದ ಕೂಡಲೆ ಅವರೆಲ್ಲರ ತಲೆಗೆ ಬರುವುದೇ 'ಗಾಂಧಿ'. ಗಾಂಧಿಯ ಜೀವನ ಕಥನವನ್ನು ಆಧರಿಸಿ ಐತಿಹಾಸಿಕ ಸಿನೆಮಾ ಮಾಡಿದವರು ಇಂಗ್ಲೆಂಡ್ ದೇಶದ ರಿಚರ್ಡ್ ಅಟನ್ ಬರೋ. ಅವರು ಭಾರತೀಯರಲ್ಲ. ವಿದೇಶಿಯರು ಗಾಂಧಿಯನ್ನು ತಮ್ಮ ಹೃದಯದಲ್ಲಿಟ್ಟುಕೊಂಡಿದ್ದಾರೆ. ಪ್ರಪಂಚದಲ್ಲಿಯೇ ಬೇರೆ ದೇಶದ ಭಾಷೆಗಳಲ್ಲಿ ಅತೀ ಹೆಚ್ಚು ಪುಸ್ತಕಗಳು ಪ್ರಕಟವಾಗಿರುವುದು ಗಾಂಧಿಯನ್ನು ಕುರಿತು. ಗಾಂಧಿ ಸ್ಫುರದ್ರೂಪಿಯಾದ ವ್ಯಕ್ತಿಯೇನಲ್ಲ. , ರಾಜಕೀಯ ತಂತ್ರಗಾರಿಕೆ ಗೊತ್ತಿರಲಿಲ್ಲ. ಇಂತಹ ಒಬ್ಬ ವ್ಯಕ್ತಿ ಮುಂದೆ ಯಾರನ್ನು ನಡುಗಿಸಿದರೆಂದರೆ ಸೂರ್ಯ ಮುಳುಗದ ಸಾಮ್ರಾಜ್ಯದ ಬ್ರಿಟಿಷರನ್ನು !! ಒಂದು ಅಗಾಧವಾದ ಸಾಮ್ರಾಜ್ಯದ ಮುಂದೆ ಸೆಟೆದು ನಿಂತ ಸಣಕಲು ದೇಹದ ಈ ವ್ಯಕ್ತಿಯ ಅದಮ್ಯ ಚೈತನ್ಯದ ಎದುರು ಆಂಗ್ಲರು ಶರಣಾಗ ಬೇಕಾಯಿತು.

ಇಂಥ ವ್ಯಕ್ತಿಯ ಎದುರು ಆತ್ಮಸ್ಥೈರ್ಯದಿಂದ ನಿಂತು ನಿಮ್ಮ ಆಪ್ತಸಮಾಲೋಚನೆ ಮಾಡಿಕೊಳ್ಳಿ. ಅವರು ಏನೇನು ಮಾಡಿದ್ದಾರೆಂದು ಒಂದು ಕ್ಷಣ ಯೋಚಿಸಿ. ಇದಕ್ಕಿಂತ ದೊಡ್ಡ ಆಪ್ತಸಮಾಲೋಚನ ಈ ಪ್ರಪಂಚದಲ್ಲಿ ನನಗೆ ತಿಳಿದ ಮಟ್ಟಿಗೆ ಬೇರೊಂದು ಇಲ್ಲ. ಪ್ರಪಂಚವೇ ಅನುಕರಿಸುತ್ತಿರುವ, ಒಪ್ಪಿಕೊಂಡಿರುವ ಮಹಾತ್ಮನನ್ನು ತಿಳಿದುಕೊಳ್ಳುವಲ್ಲಿ ಭಾರತೀಯರಾದ ನಾವೇಕೆ ಇನ್ನೂ ಹಿಂದೆ ಬಿದ್ದಿದ್ದೇವೆ. ಇನ್ನೂ ವಿಪರ್ಯಾಸವೆಂದರೆ ; ಗಾಂಧೀಜಿ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿಗಳು ಹರಿದಾಡುತ್ತಿವೆ. ಸುಳ್ಳುಗಳನ್ನು ಹರಡುವುದು ಈಗ ಉದ್ಯಮ ರೂಪ ಪಡೆದುಕೊಂಡಿದ್ದು ಗಾಂಧಿ ಬಗೆಗಿನ ತಪ್ಪು ಸಂದೇಶಗಳು ಪ್ರವಾಹೋಪಾದಿಯಲ್ಲಿ ಹರಿಯುತ್ತಿವೆ. ಗಾಂಧಿ ವಿರುದ್ಧ ಸುಳ್ಳಗಳನ್ನು ಹರಡುವುದಕ್ಕಾಗಿಯೇ ಒಂದು ವ್ಯವಸ್ಥೆ ಕೆಲಸ ಮಾಡುತ್ತಿದೆ. ಅದರ ಹಿಂದೆ ರಾಜಕೀಯ ಉದ್ದೇಶವೂ ಅಡಗಿದೆ. ಯುವಜನರು, ತಂತ್ರಜ್ಞರನ್ನು ನೇಮಕಾತಿ ಮಾಡಿಕೊಂಡು, ಅವರಿಗೆ ಸಕಲ ಸೌಲಭ್ಯಗಳನ್ನು ನೀಡಿ ಸುಳ್ಳುಗಳ ಮಾಹಿತಿ ಹರಿಸಲಾಗುತ್ತಿದೆ. ಜಾಲತಾಣಗಳನ್ನು ಬಳಸುವ ನಮ್ಮ ಯುವಜನರ ತಲೆಗೆ ಸುಳ್ಳುಗಳನ್ನು ತುಂಬುವುದೇ ಈ ಉದ್ಯಮದ ಉದ್ದೇಶವಾಗಿದೆ. ಆದರೆ ಈ ಸುಳ್ಳು ಮಾಹಿತಿಗಳು ಸುಳ್ಳು ಎಂಬ ಅರಿವು ನಮ್ಮ ಯುವಜನತೆಗೆ ಬರಬೇಕಿದೆ.

"ರಕ್ತ ಮಾಂಸಗಳಿಂದ ತುಂಬಿದ್ದ ವ್ಯಕ್ತಿಯೊಬ್ಬ ಈ ಭೂಮಿಯ ಮೇಲೆ ನಡೆದಾಡಿದ್ದ ಎನ್ನುವ ವಿಷಯವನ್ನು ಮುಂದಿನ ಪೀಳಿಗೆಯ ಜನ ನಂಬುವುದು ಬಹಳ ಕಷ್ಟ " ಎಂದು ಖ್ಯಾತ ವಿಜ್ಞಾನಿ ಅಲ್ಬರ್ಟ್ ಐನ್ಸ್ಟೀನ್ ಅವರು ಬಹಳ ಹಿಂದೆಯೇ ಗಾಂಧೀಜಿ ಕುರಿತಾಗಿ ಹೇಳಿದ್ದರು . ಕೇವಲ ಎಪ್ಪತ್ತೈದು ವರ್ಷಗಳ ಅಂತರದಲ್ಲಿ ಐನ್ ಸ್ಟಿನ್ ರವರ ಮಾತುಗಳು ನಿಜವಾಗುವ ಸ್ಥಿತಿ ನಿರ್ಮಾಣವಾಗಿದೆ . ಮೌಲ್ಯಗಳು ಕುಸಿತಗೊಂಡಿರುವ ಈ ಕಾಲದಲ್ಲಿ ಗಾಂಧೀಜಿಯವರ ವಿಚಾರಗಳನ್ನು ಉಳಿಸಿ ಕೊಳ್ಳಬೇಕಾದ ಜವಾಬ್ದಾರಿ ಯುವಜನರದು.

ಗಾಂಧಿ ಹೇಳಿದ್ದೆಲ್ಲವನ್ನೂ ನಾವು ಕೇಳಬೇಕಾಗಿಲ್ಲ, ಒಪ್ಪಬೇಕಾಗಿಲ್ಲ. ಭಿನ್ನಾಭಿಪ್ರಾಯವಿರ ಬಹುದು . ಗಾಂಧೀಜಿ ಕೂಡ ತಾನು ಹೇಳಿದ್ದೆಲ್ಲವನ್ನೂ ಕೇಳಬೇಕು ಎಂದು ಎಂದಿಗೂ ಹೇಳಲಿಲ್ಲ. ಅವರ ಜೀವನವೇ ಒಂದು ಸಂದೇಶವಾಗಿತ್ತು . ಅವರು ಸಂತನ ರೀತಿಯಲ್ಲಿ ಬದುಕು ನಡೆಸಿದವರು. 'ಗಾಂಧೀಜಿ' ಎಂದರೆ ಸತ್ಯದ ಹಾದಿಯಾಗಿದೆ. ಗಾಂದಿಯನ್ನು ಸತ್ಯ ಹೇಳಿದ್ದಕ್ಕಾಗಿ ಕೊಂದರು. ಗಾಂಧಿ = ಸತ್ಯ. ಸತ್ಯ ಹೇಳುವವರನ್ನು ಅಪಾರ್ಥ ಮಾಡಿಕೊಳ್ಳುವವರೇ ಹೆಚ್ಚು . ಈ ಅಪಾರ್ಥದಿಂದಲೇ ಸ್ವಾತಂತ್ರ್ಯ ತಂದುಕೊಟ್ಟ ಗಾಂಧೀಜಿಯನ್ನು ಸ್ವಾತಂತ್ರ್ಯದ ಮೊದಲ ವರ್ಷ ಪೂರ್ಣಗೊಳ್ಳುವ ಮೊದಲೇ ಕೊಂದು ಹಾಕಿದರು. ಜಗತ್ತಿನ ಮಹಾನ್ ವ್ಯಕ್ತಿಗಳು ಗಾಂಧಿಯನ್ನು ಕುರಿತು ಬರೆದಿರುವುದನ್ನು ಓದಿದರೆ ಗಾಂಧಿ ಏನೆಂಬುದು ಅರ್ಥವಾಗುತ್ತದೆ ಎಂಬ ವಿಚಾರಗಳ ಮೂಲಕ ವಿಚಾರ ಸಂಕಿರಣಕ್ಕೆ ಉತ್ತಮ ಆರಂಭ ಒದಗಿಸಿಕೊಟ್ಟರು .

ಸಾಹಿತಿಗಳಾದ ಡಾ.ಕೆ.ಸಿ.ಶಿವಾರೆಡ್ಡಿ ಅವರು "ಗಾಂಧೀಜಿ ಚಿಂತನೆಗಳು – ಪ್ರಸ್ತುತ ಸಂದರ್ಭ" ಎಂಬ ವಿಷಯ ಕುರಿತು ಮಾತನಾಡಿದರು. "ಗಾಂಧಿ ಇಡೀ ಪ್ರಪಂಚಕ್ಕೆ ಆದರ್ಶ. ಯಾವುದು ಸರಿ, ಯಾವುದು ತಪ್ಪು ಎಂಬ ಅರಿವು ನಮ್ಮೊಳಗೇ ಮೂಡಬೇಕು. ನಾವು ತಪ್ಪು ಮಾಡದೇ ಇದ್ದಾಗ ನಮ್ಮನ್ನು ದಂಡಿಸುವವರ ವಿರುದ್ಧ ಎದೆಗೊಟ್ಟು ನಿಲ್ಲಬೇಕು" ಎಂದು ಗಾಂಧಿ ಹೇಳಿಕೊಟ್ಟಿದ್ದಾರೆ. ಗಾಂದೀ ಅವರ



ತತ್ವಗಳಿಗೆ ಮುಖ್ಯ ಸ್ಫೂರ್ತಿ ರಷ್ಯಾದ ಪ್ರಸಿದ್ಧ ಸಾಹಿತಿ ಲಿಯೋಟಾಲ್ಸ್ಟಾಯ್ . ಗಾಂಧಿ ಹಲವಾರು ಚಿಂತಕರ ಪುಸ್ತಕಗಳನ್ನು ಓದಿ ದೊಡ್ಡವರಾದವರು. ಗಾಂಧಿ ಶಾಂತಿ ಅಹಿಂಸೆಗಳ ಹರಿಕಾರ, ಸತ್ಯದ ಪ್ರತಿಪಾದಕ.

ಇವರ ಮುಖ್ಯ ತತ್ವ – ಸತ್ಯ. ಸತ್ಯದ ಪರಿಶೋಧನೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟವರು. ತಮ್ಮ ತತ್ವಗಳಿಂದಲೇ ಕಲಿತು, ತಮ್ಮ ಮೇಲೆಯೇ ಪ್ರಯೋಗಗಳನ್ನು ಮಾಡಿಕೊಂಡು ಸತ್ಯದ ಮಾರ್ಗವನ್ನು ಸಾಧಿಸಿದವರು. ಆದ್ದರಿಂದ ಅವರು ತಮ್ಮ ಆತ್ಮಚರಿತ್ರೆಯನ್ನು ' ದಿ ಸ್ಟೋರಿ ಆಪ್ ಮೈ ಎಕ್ಸ್ ಪೆರಿಮೆಂಟ್ ವಿತ್ ಟ್ರೂತ್ ' ಎಂದು ಕರೆದುಕೊಂಡಿದ್ದಾರೆ . ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಗಾಂಧೀ ಚಿಂತನೆಗಳು ಇಂದಿನ ಹಲವು ಬಿಕ್ಕಟ್ಟುಗಳ ನಡುವೆ ಚಲಿಸುತ್ತಿರುವ ಸಮಾಜಕ್ಕೆ ಅನಿವಾರ್ಯವಾಗಿ ಒಬ್ಬ ವ್ಯಕ್ತಿಯ ಕಾಲಾನಂತರದಲ್ಲಿ ಹಸಿರಾಗಿದೆಯೆಂದರೆ ನಾವು ಆ ವ್ಯಕ್ತಿತ್ವದ ಘನತೆಯನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ.

ಒಂದೊಮ್ಮೆ ನಾವು ಪ್ರಸ್ತುತ ರಾಜಕೀಯವನ್ನು ಗಮನಿಸಿ ನೋಡಿದರೆ ಗಾಂಧಿ ನಮಗೆ ಸ್ಪಷ್ಟ ಆದರ್ಶವಾಗಿ ಕಾಣಿಸುತ್ತಾರೆ. ಅದಕ್ಕಾಗಿಯೇ ಅವರನ್ನು ಅನುಕರಿಸಲು ಯಾರೂ ತಯಾರಿಲ್ಲ. ಸರಳವಾಗಿ ಕಂಡರು ಗಾಂಧಿಯವರ ಸಿದ್ಧಾಂತ ಕಠಿಣವಾದುದು. ಇಂದಿನ ರಾಜಕೀಯ ನಾಯಕರ ಸ್ವಾರ್ಥ ಮತ್ತು ಅಧಿಕಾರದಾಹ ನೋಡಿದಾಗ ಭಾರತದ ಇಂದಿನ ರಾಜಕೀಯಕ್ಕೆ ಗಾಂಧಿ ಚಿಂತನೆಗಳು , ಅಂತಹ ನಾಯಕತ್ವ ಎಷ್ಟು ಅಗತ್ಯವೆಂಬುದನ್ನು ಅರಿಯಬೇಕಾಗಿದೆ" ಎಂದು ಹಲವು ಉದಾಹರಣೆಗಳ ಮೂಲಕ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಿದರು.


ಮೇಲುಕೋಟೆಯ 'ಜನಪದ ಸೇವಾ ಟ್ರಸ್ಟ್' ಮೂಲಕ ಗಾಂದೀಜಿ ತತ್ವಗಳ ಅನುಷ್ಠಾನ ಮಾಡುತ್ತ ಸರ್ವೋದಯ ತತ್ವದಡಿ ಅನೇಕ ಚಟುವಟಿಕೆಗಳನ್ನು ನಡೆಸುತ್ತಿರುವ ಯುವಚಿಂತಕರಾದ ಡಾ.ಸುಮನಸ್ ಕೌಲಗಿ ಅವರು 'ಗಾಂಧೀಜಿ ಪರಿಕಲ್ಪನೆಯಲ್ಲಿ. ಗ್ರಾಮೀಣಾಭಿವೃದ್ಧಿ ಮತ್ತು ಯುವಜನತೆಯ ಪಾತ್ರ ' ಎಂಬ ವಿಷಯ ಮಂಡಿಸಿದರು.

"ಮೇಲುಕೋಟೆಯಲ್ಲಿ 1965ರಲ್ಲಿ ಅವರ ತಾತ ಸುರೇಂದ್ರ ಕೌಲಗಿ, ಅಜ್ಜಿ, ಹಾಗೂ ಅವರ ಸ್ನೇಹಿತರು ಒಟ್ಟುಗೂಡಿ 'ಜನಪದ ಸೇವಾ ಟ್ರಸ್ಟ್ ' ಪ್ರಾರಂಭಿಸಿ ಗಾಂಧೀಜಿಯವರ ವಿಚಾರಗಳಿಂದ ಪ್ರಭಾವಿತರಾಗಿ ಕಳೆದ 63 ವರ್ಷಗಳಿಂದ ಆ ನಿಟ್ಟಿನಲ್ಲಿ ಕೆಲಸ ಮಾಡುತ್ತಾ ಬಂದಿದ್ದಾರೆ.

' ನಾನು ಮೇಲುಕೋಟೆ ಸಮೀಪದ ಕಾಡಂಚಿನಲ್ಲಿರುವ 'ಹೊಸಜೀವನ ದಾರಿ' ಕೇಂದ್ರದಲ್ಲಿ ಬೆಳೆದು 7ನೇ ತರಗತಿ ತನಕ ಶಾಲೆಗೆ ಹೋಗಲೇ ಇಲ್ಲ. ನಾನು, ನಮ್ಮ ಅಮ್ಮನ ಒಟ್ಟಿಗೇ ತೋಟದಲ್ಲಿಯೇ ಇದ್ದು ಎಲ್ಲರನ್ನು ನೋಡುತ್ತಾ ಒಡನಾಡುತ್ತ ಕಾಡಿನ ಪರಿಸರದೊಟ್ಟಿಗೆ ಕಲಿತದ್ದೇ ಹೆಚ್ಚು . ಹಾಗಾಗಿ ಪರಿಸರದ ಮೇಲೆ ಆಸಕ್ತಿ ತಳೆದ ನಾನು 8ನೇ ತರಗತಿಗೆ ಶಾಲೆಗೆ ಸೇರಿದೆ. ಬಾಲ್ಯದಿಂದಲೂ ಜೀವಶಾಸ್ತ್ರದ ಬಗ್ಗೆ ಕುತೂಹಲವಿದ್ದ ನಾನು ಜೀವಶಾಸ್ತ್ರ ವಿಷಯದಲ್ಲಿಯೇ ಪದವಿ ಪಡೆದೆ . ಆಮೇಲೆ ಸ್ಕಾಲರ್ ಶಿಫ್ ಮೇಲೆ ಇಂಗ್ಲೆಂಡ್‌ಗೆ ಹೋಗಿ ಮಾಸ್ಟರ್ ಡಿಗ್ರಿ ಮಾಡಿ ಬಂದೆ. ಎಂ.ಎಸ್ಸಿ ಮುಗಿಸುವವರೆಗೂ ಗಾಂದೀಜಿ ನನಗೆ ಅಷ್ಟೇನು ಇಷ್ಟವಾಗುತ್ತಿರಲಿಲ್ಲ. ಎಲ್ಲರಿಗೂ ಅನ್ನಿಸಿದ ಹಾಗೆ ಅದೆಲ್ಲ ಹಳೆಯ ವಿಚಾರವೆಂದು ದೂರ ಉಳಿದಿದ್ದೆ.

ನಾನು ಗಾಂಧಿ ತತ್ವದಡಿಯಲ್ಲಿ ಬದುಕಿರುವ ಕುಟುಂಬದ ಮೂರನೇ ತಲೆಮಾರಿನವನು. ಎಷ್ಟೋ ಸಲ ಗಾಂಧಿಯಿಂದ ಬಿಡಿಸಿಕೊಂಡರೆ ಸಾಕಪ್ಪ ಅನ್ನಿಸಿದ್ದು ಉಂಟು. ಆದರೆ ಎಂ.ಎಸ್ಸಿ ಮುಗಿಸೋವರೆಗೆ ಗಾಂಧಿ ಹೇಳಿದ್ದ "ಕೃಷಿ ಮಾಡಿ, ನೇಯ್ಗೆ ಮಾಡಿ, ಖಾದಿ, ಚರಕ ಮಾಡಿ ಅಂತಾರಲ್ಲ ! ಇಂಥ ಕಂಪ್ಯೂಟರ್ ಯುಗದಲ್ಲಿ" ಎಂಬ ವಿಚಾರಗಳಿಗೆ ನಾನು ವಿಮುಖನಾಗಿದ್ದೇ ಹೆಚ್ಚು. ಇವತ್ತಿನ ಕಾಲಕ್ಕೆ ಇವು ಸಂಬಂದವೇ ಇಲ್ಲ ಎಂದುಕೊಂಡದ್ದೇ ಹೆಚ್ಚು. ಆದರೆ ಎಂ.ಎಸ್ಸಿ. ಆದ ಮೇಲೆ ನನಗೆ ಪರಿಸರ ಮತ್ತು ಅಭಿವೃದ್ಧಿ ಎನ್ನುವುದು ಒಂದಕ್ಕೊಂದು ನಿಕಟ ಸಂಬಂಧ ಇರುವ ವಿಷಯಗಳು ಎಂದು ಅರಿವಾಗುತ್ತಾ ಹೋಯಿತು. ಇವೆರಡಕ್ಕೂ ಇರುವ ತಿಕ್ಕಾಟ ಅರ್ಥಮಾಡಿಕೊಳ್ಳಲು ಪ್ರಾರಂಬಿಸಿದೆ. ಎಲ್ಲೆಲ್ಲಿ ನಮಗೆ ಇಂದು ಅಭಿವೃದ್ಧಿ ಇಷ್ಟವಾಗುತ್ತಿದೆಯೋ ಅಲ್ಲೆಲ್ಲ ಪ್ರಾಣಿ, ಪಕ್ಷಿ, ಪರಿಸರ ನಾಶವಾಗುತ್ತಿರುವುದು ಸ್ಪಷ್ಟವಾಗಿ ಕಾಣುತ್ತ ಬಂತು.

ಅಭಿವೃದ್ಧಿಯ ಹೆಸರಿನಲ್ಲಿ ಹೀಗೆ ನಾವು ಎಲ್ಲವನ್ನು ಸ್ವಾರ್ಥಕ್ಕೆ ಬಳಸುತ್ತಾ ಹೋದರೆ ಇನ್ನು ಮೂವತ್ತು ವರ್ಷಗಳಲ್ಲಿ 2050 ನೇ ಇಸವಿ ವೇಳೆಗೆ ನಮಗೆ ಬದುಕುವುದಕ್ಕೆ ಮೂಲಭೂತವಾಗಿ ಬೇಕಾಗಿರುವ ಮಣ್ಣು, ನೀರು, ಗಾಳಿಯೇ ಇರುವುದಿಲ್ಲ. ಇವಿಲ್ಲದೆ ನಾವ್ಯಾರು



ಬದುಕುವುದಕ್ಕೆ ಸಾಧ್ಯವಿಲ್ಲ. ಮುಂದಿನ ಪೀಳಿಗೆಗೆ ನಾವು ಏನನ್ನೂ ಉಳಿಸುತ್ತಿಲ್ಲ.

ಈಗ ಇದರ ಬಗ್ಗೆ ನಾವೆಲ್ಲ ಗಂಭೀರವಾಗಿ ಅಲೋಚಿಸಬೇಕಿದೆ. ಎಲ್ಲಾ ಜಾತಿ,ಧರ್ಮದವರಿಗೂ ಈ ಮೂರು ಅತ್ಯವಶ್ಯಕ. ಪರಿಸರ ಸಮಸ್ಯೆ ಜೊತೆಗೆ ಆರ್ಥಿಕ ಅಸಮಾನತೆ ಹೆಚ್ಚಾಗುತ್ತಿದ್ದು ಮುಂದೆ ಘರ್ಷಣೆಗೆ ಎಡೆ ಮಾಡಿಕೊಡಬಹುದು. ಹೀಗಾಗಿ ನಾಗರಿಕ ಸಮಾಜದ ಎರಡು ದೊಡ್ಡ ಸಮಸ್ಯೆಗಳಾಗಿರುವ ಪರಿಸರ ಮತ್ತು ಅಸಮಾನತೆ ಬಗೆಹರಿಸಲು ಗಾಂಧೀ ಚಿಂತನೆಗಳು ಎಷ್ಟು ಅನಿವಾರ್ಯ ಎಂಬುದನ್ನು ಅರ್ಥಮಾಡಿಕೊಂಡ ನಾನು ಅದೇ ಮಾರ್ಗದಲ್ಲಿ ನಡೆಯುತ್ತಿದ್ದೇನೆ. ಗಾಂಧಿ ಮತ್ತು ಅವರೊಟ್ಟಿಗೆ ಸದಾ ಇರುತ್ತಿದ್ದ ಜೆ.ಸಿ.ಕುಮಾರಪ್ಪ ಹಾಗೂ ಗಾಂಧಿ ಅವರ ಚಿಂತನೆಗಳಲ್ಲಿ ನಮ್ಮ ಈ ಸಮಸ್ಯೆಗಳಿಗೆ ಪರಿಹಾರ ಇರುವುದು ನನಗೆ ಕಂಡು ಬಂತು. ಅದೇ ಸ್ವರಾಜ್ಯದ ಕಲ್ಪನೆ. ಅಹಿಂಸಾತ್ಮಕವಾದ, ಶೋಷಣೆಯಿಲ್ಲದ ಸಮಾಜವನ್ನು ಕಟ್ಟುವುದು ಹೇಗೆಂಬುದನ್ನೇ ಅವರು ತಮ್ಮ ಸ್ವರಾಜ್ಯದ ಕಲ್ಪನೆಯಲ್ಲಿ ತಿಳಿಸಿದ್ದಾರೆ" ಎಂದು ತಮ್ಮ ಪ್ರಯೋಗಗಳ ಬಗ್ಗೆ ವಿವರಿಸಿದ ಯುವಕ ಸುಮನಸ್ ಕೌಲಗಿ ಅವರನ್ನು ಗಾಂದೀಜಿ ಅಪಾರವಾಗಿ ಪ್ರಭಾವಿಸಿರುವುದು ಅವರ ಮಾತು ಮತ್ತು ಚಟುವಟಿಕೆಗಳಲ್ಲಿ ಎದ್ದು ಕಾಣುತ್ತಿತ್ತು .

ನಿವೃತ್ತ ಪ್ರಾಂಶುಪಾಲರಾದ ಡಾ.ಎಸ್.ಬಿ.ಶಂಕರ ಗೌಡ ಅವರು 'ಗಾಂಧೀಜಿ ಪರಿಕಲ್ಪನೆಯಲ್ಲಿ ಶಿಕ್ಷಣ ಹಾಗೂ ವರ್ತಮಾನದ ಸವಾಲುಗಳು' ಎಂಬ ವಿಷಯ ಕುರಿತು ವಿಚಾರ ಮಂಡಿಸಿದರು. "ಗಾಂಧಿಯನ್ನು 'ತತ್ವಶಾಸ್ತ್ರಜ್ಞ, 'ಸಮಾಜ ಶಾಸ್ತ್ರಜ್ಞ, ಎಂದು ಕರೆಯುತ್ತಾರೆ. ಇದರ ಜೊತೆಗೆ ಅವರನ್ನು 'ಪ್ರಯೋಗಾತ್ಮಕ ತತ್ವಶಾಸ್ತ್ರಜ್ಞ ಎಂದು ನಾನು ಕರೆಯುತ್ತೇನೆ. ಇಂತಹವರು ತನಗೆ ಯಾವ ಚಿಂತನೆಗಳು, ಆಲೋಚನೆಗಳು ಬರುತ್ತವೋ ಅವನ್ನು ಪ್ರಯೋಗಕ್ಕೆ ಒಳಪಡಿಸುತ್ತಾರೆ. ಅದರ ಮೂಲಕ ಒಂದು ತೀರ್ಮಾನಕ್ಕೆ ಬರುತ್ತಾರೆ. ಆದರೆ ಗಾಂಧೀ ತೀರ್ಮಾನವನ್ನು ಎಲ್ಲಿಯೂ ಹೇರುವುದಿಲ್ಲ . ಆ ಸಿದ್ಧಾಂತವನ್ನು ಹೇಗೆ ತಲುಪಿಸ ಬೇಕೆಂಬುದನ್ನು ಕುರಿತು ಹೇಳುತ್ತಾರೆ. ಅವರ ಆತ್ಮಚರಿತ್ರೆಯೇ ಅದನ್ನು ಸ್ಪಷ್ಟಪಡಿಸುತ್ತದೆ. ಸತ್ಯದ ಬಗ್ಗೆ ನನ್ನ ಅನ್ವೇಷಣೆ ಎಂದಿದ್ದಾರೆ. ಸತ್ಯಗಳು ನಮ್ಮ ಮುಂದೆಯೇ ಇವೆ. "ಪ್ರೀತಿಸಿ, ಕರುಣೆ ತೋರಿಸಿ, ನಿಮ್ಮನ್ನು ನೀವು ನಂಬಿ, ನಿಮಗಿಂತ ದೊಡ್ಡವರು ಯಾರೂ ಇಲ್ಲ, ನಿಮಗೆ ಅಪಾರ ಶಕ್ತಿಯಿದೆ . ಆ ಶಕ್ತಿಯನ್ನು ಸಂಚಯಗೊಳಿಸಿಕೊಂಡರೆ ಏನು ಬೇಕಾದರೂ ಸಾಧಿಸಬಹುದೆಂಬ" ಈ ಎಲ್ಲ ಸತ್ಯಗಳು ನಮ್ಮ ಮುಂದಿವೆ. . ಆದರೆ ಇವುಗಳು ನಮಗೆ ನಾವೇ ಕಂಡು ಕೊಳ್ಳಬೇಕಾದವು. ಹೀಗೆ ಕಂಡುಕೊಂಡ ಸತ್ಯ ನಮ್ಮನ್ನು ದೀರ್ಘಕಾಲ ಮುನ್ನಡೆಸುತ್ತೆ. ಇನ್ನೊಬ್ಬರು ಹೇಳಿದ ಸತ್ಯಗಳು ಮುನ್ನಡೆಸಲಾರವು ಅನ್ನುವ ಅಂಶ ಈ ಸತ್ಯದ ಅನ್ವೇಷಣೆ ಮತ್ತು ಅದರೊಂದಿಗಿನ ಪ್ರಯೋಗಕ್ಕೆ ಒಳಪಟ್ಟ ಅಂಶಗಳು ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಗಾಂಧಿ ಬದುಕಿನ ಅನೇಕ ಘಟನೆಗಳನ್ನು ಶಂಕರೇ ಗೌಡರು ಉಲ್ಲೇಖಿಸಿ ವಿದ್ಯಾರ್ಥಿಗಳಿಗೆ ಅರ್ಥಮಾಡಿಸಿ ಸಂವಾದಿಸಿದರು.

'ಗಾಂಧೀ ಪ್ರಣೀತ ಮಹಿಳೆ ಮತ್ತು ಆಧುನಿಕ ಸಂದರ್ಭ ' ಎಂಬ ವಿಷಯ ಕುರಿತು ನಿವೃತ್ತ ಪ್ರಾಂಶುಪಾಲರಾದ ಡಾ.ಲೀಲಾ ಅಪ್ಪಾಜಿ ಅವರು ವಿಷಯ ಮಂಡಿಸಿದರು. "ನಾವೆಲ್ಲ ಗಾಂಧಿ ಎಷ್ಟು ಗೊತ್ತು? ಎಂಬ ಪ್ರಶ್ನೆ ಹಾಕಿಕೊಂಡಾಗ ಗೊತ್ತಿರುವುದಕ್ಕಿಂತ ಗೊತ್ತಿಲ್ಲದಿರುವುದೇ ಜಾಸ್ತಿ. ಓದಿ, ನೋಡಿ, ಕೇಳಿ ತಿಳಿದಿದ್ದೇವೆ. ಆದರೆ ಎಷ್ಟನ್ನು ಅರ್ಥಮಾಡಿಕೊಂಡಿದ್ದೇವೆ ಎಂಬ ಪ್ರಶ್ನೆ ಹಾಕಿಕೊಳ್ಳಬೇಕು. ನಮಗೆ ಬೇಕಾಗಿರುವುದು ಕನ್ನಡಿ ಮಾತ್ರ. ನಾವೆಲ್ಲರೂ ಗಾಂಧಿ ಎನ್ನುವ ಕನ್ನಡಿಯಲ್ಲಿ ನಮ್ಮನ್ನು ನೋಡಿಕೊಂಡಾಗ ಮಾತ್ರ ನಾವೇನು? ಗಾಂಧೀಯೇನು? ಎನ್ನುವುದು ಅರಿವಿಗೆ ಬರುತ್ತದೆ. ಅವರು ಮುಟ್ಟದ ವಿಷಯಗಳೇ ಇಲ್ಲ. ನಮ್ಮ ಸಮಾಜಕ್ಕೆ ಬೇಕಾದ ಎಲ್ಲವನ್ನೂ ಹೇಳಿದ್ದಾರೆ. ಗಾಂಧಿ

ಚಿತ್ರದಿಂದ ಚಿತ್ತಕ್ಕೆ ಬರಬೇಕು. ಗಾಂಧಿ ನಮ್ಮೆಲ್ಲರ ಬದುಕಿನ ಊರುಗೋಲಾಗಬೇಕು. ಗಾಂಧಿ ಎಲ್ಲರಿಗೂ ಗೊತ್ತು ಆದರೆ ಪೂರ್ಣವಾಗಿ ತಿಳಿದಿಲ್ಲ. ಯಾವ್ಯಾವ ದೃಷ್ಟಿಕೋನದಿಂದ ನೋಡುತ್ತೇವೆಯೋ ಆ ಎಲ್ಲಾ ದೃಷ್ಟಿಕೋನಗಳಿಂದ ವಿವರಿಸಿಕೊಳ್ಳುವುದಕ್ಕೆ ಸಾಧ್ಯವಿರುವ ಏಕೈಕ ವ್ಯಕ್ತಿ. ಗಾಂಧಿ ಅವರು ಪ್ರೀತಿಸುವವರಿಗೂ ಬೇಕು. ವಿರೋದಿಸುವವರಿಗೂ ಬೇಕಾಗುತ್ತಾರೆ. ಗಾಂಧಿ ಅಗಾಧವಾದವರು, ಸಂಕೀರ್ಣವಾದವರು. ಆದರೆ ಅವರ ವ್ಯಕ್ತಿತ್ವವೇ ಸರಳ. ಎಷ್ಟೆಂದರೆ ಒಂದಿಡಿ ಉಪ್ಪಿನಷ್ಟೇ ಸರಳ.

"ಹೆಣ್ಣು ಮತ್ತು ದೇವರು ಇವೆರಡರ ಪ್ರಾಯಶಃ ಜೀವಂತಿಕೆ ಗಾಂಧಿ . ಹೆಣ್ಣು ನನಗೆ ಒಲಿಯಲಿಲ್ಲ, ದೇವರನ್ನು ನಾನು ಭೇಟಿಯಾಗಲಿಲ್ಲ ಆದರೆ ಇವೆರಡನ್ನು ನಾನು ಗಾಂಧಿಯಲ್ಲಿ ಕಂಡೆ ' ಎಂಬುದು ಲೋಹಿಯಾ ಅವರ ಮಾತು. ಈ ಹೇಳಿಕೆ ಎಷ್ಟರಮಟ್ಟಿಗೆ ಸತ್ಯ ಎಂಬುದಕ್ಕೆ ಗಾಂಧಿ ಮಹಿಳೆಯರ ಬಗ್ಗೆ ಆಲೋಚನೆ ಮಾಡಿದ ವಿಚಾರಗಳು ಹಾಗೂ ಅವೆಲ್ಲವೂ ಇಂದಿಗೂ ಎಷ್ಟು ಪ್ರಸ್ತುತ ಅಗತ್ಯ ಎಂಬುದನ್ನು ತಿಳಿಯಬೇಕು. ವಿಧವಾ ವಿವಾಹ , ಸತಿಸಹಗಮನ, ದೇವದಾಸಿ ಪದ್ಧತಿ, ಬಾಲ್ಯವಿವಾಹ, ವರದಕ್ಷಿಣೆ , ಗೆಜ್ಜೆಪೂಜೆ ಈ ಎಲ್ಲಾ ಅನಿಷ್ಠ ಪದ್ಧತಿಗಳನ್ನು ವಿರೋಧಿಸಿದವರು. ನುಡಿದಂತೆ ನಡೆಯುವ ನೈತಿಕ ಎಚ್ಚರ ಗಾಂಧಿಯಲ್ಲಿತ್ತು. ಗಾಂಧಿ ಹೇಳಿದ ಸ್ತ್ರೀರಕ್ಷಣೆ ಮತ್ತು ಸ್ತ್ರೀ ಪೋಷಣೆ. ಆಧುನಿಕ ಭಾರತ ಎದುರಿಸುತ್ತಿರುವ ಎರಡು ದೊಡ್ಡ ಸಮಸ್ಯೆಗಳು ಈ ಸಮಸ್ಯೆಗಳ ಪರಿಹಾರಕ್ಕೆ ನಾವು ಗಾಂಧಿಯ ಕಡೆಗೆ ನೋಡಬೇಕು. ಗಾಂಧಿ ಹೋರಾಟಕ್ಕೆ ಬಹಳ ದೊಡ್ಡ ಸ್ಫೂರ್ತಿ ಸಿಕ್ಕಿದ್ದು ಅವರ ಮನೆಯ ಹೆಣ್ಣು ಮಕ್ಕಳಿಂದಲೇ . ಗಾಂಧಿ ಹೆಣ್ಣು ಮನಸ್ಸಿನ ಸೂಕ್ಷ್ಮ ವ್ಯಕ್ತಿಯಾಗಿ ನನಗೆ ಕಂಡಿದ್ದಾರೆ. ಅವರನ್ನು ಮಹಾತ್ಮ ಎನ್ನುವುದಕ್ಕಿಂತ 'ಭಾರತದ ಮಾತೆ' ಎಂದು ಕರೆದರೆ ಸೂಕ್ತವೆನಿಸುತ್ತದೆ. ಹೆಣ್ಣಿಗೇನು ಅಂತಃಕರಣವಿರುತ್ತೆ, ಕಾಳಜಿ ಇರುತ್ತೆ, ಹೆಣ್ಣಿನ ಒಳಗೇ ಕೌಟುಂಬಿಕವಾದ ಸಮಸ್ಯೆಗಳನ್ನು ಪರಿಸುವ ಚಿಂತನೆಗಳಿರುತ್ತವೆ . ಅವೆಲ್ಲವೂ ಗಾಂಧೀಜಿಗಿವೆ .

ಭಾರತವನ್ನು ಒಂದು ಕುಟುಂಬವಾಗಿ ಪರಿಭಾವಿಸಿ ಅಂತಹ ಚಿಂತನೆಗಳನ್ನು ಮಾಡಿದವರು ಗಾಂಧಿ. ಗಾಂಧಿ ತರ್ಕದಿಂದ ಸಮಸ್ಯೆಗಳನ್ನು ಬಿಡಿಸುವ ಬದಲು ಅಂತಃಕರಣದಿಂದ ಸಮಸ್ಯೆಗಳನ್ನು ಬಿಡಿಸುವ ಪ್ರಯತ್ನದಲ್ಲಿ ತೊಡಗಿದರು. ಬ್ರಿಟೀಷರನ್ನು ದ್ವೇಷದಿಂದ ಓಡಿಸುವ ಬದಲು ಅವರ ಮನಪರಿವರ್ತನೆ ಮಾಡುತ್ತ ಅವರ ಒಳಗೆ ಇವರಿಗೆ ಸ್ವಾತಂತ್ರ್ಯವನ್ನು ಕೊಡಬೇಕೆಂಬ ಒತ್ತಡವನ್ನು ಹಾಕುತ್ತ ಇಡೀ ದೇಶದ ಸಮಸ್ತರನ್ನು ಸ್ವಾತಂತ್ರ್ಯದ ಹಾದಿಯಲ್ಲಿ ಕೊಂಡೊಯ್ಯುವ ಮಾರ್ಗದರ್ಶನ ಮಾಡಿದರು. ಎದುರಾಳಿಯ ಭಾವದಲ್ಲಿಯೂ ಕೂಡ ಬದಲಾವಣೆ ಅಗತ್ಯವೆಂದರಿತು ಹೊಡಿಬಡಿ ಹಾದಿಬಿಟ್ಟು ಮನಸ್ಸಿಗೆ ಮುಟ್ಟಿಸುವ ಕೆಲಸವನ್ನು ಗಾಂಧಿ ಮಾಡಿದರು. ಹೀಗಾಗಿ ಹೆಣ್ಣು ಮಕ್ಕಳಿಂದಲೇ ಸ್ಫೂರ್ತಿ ಪಡೆದು ಅವರ ದಾರಿಯನ್ನೇ ಅನುಸರಿಸಿ, ಹೆಣ್ಣು ಮಕ್ಕಳ ಬಗೆಗೆ ಬಹಳ ದೊಡ್ಡ ಚಿಂತಕರೂ ಆಗಿ, ಅವರ ಬಗ್ಗೆ ಹೆಚ್ಚು ಬರೆದವರೂ ಅವರೆ. ಸ್ತ್ರೀಯರ ಬಗ್ಗೆ ಬಹಳ ಸೂಕ್ಷ್ಮವಾದ ಸಂವೇದನಾಶೀಲ ಮನಸ್ಸು ಅವರದು." ಎಂಬ ಹಲವು ಉನ್ನತ ಚಿಂತನೆಗಳ ಮೂಲಕ ಗಾಂಧಿ ನನಗ್ಯಾಕೆ ಪ್ರಸ್ತುತ ಎಂಬುದನ್ನು ಬಹಳ ಅರ್ಥಪೂರ್ಣವಾಗಿ ಮಂಡಿಸಿ ಸಂವಾದಿಸಿದರು.

ಚಿಂತಕರಾದ ಡಾ.ತುಕಾರಾಂ ಅವರು ನೆಹರು, ಅಂಬೇಡ್ಕರ್ ಚಿಂತನೆಗಳನ್ನು ಅನುಸಂಧಾನಿಸಿ 'ಗಾಂಧೀಜಿ ಜೊತೆಗಿನ ವಾಗ್ವಾದಗಳು' ಎಂಬ ವಿಷಯವನ್ನು ಮಂಡನೆ ಮಾಡಿ ವಿದ್ಯಾರ್ಥಿಗಳೊಟ್ಟಿಗೆ ವಿವರವಾಗಿ ಸಂವಾದಿಸುತ್ತಲೇ ಗಮನಸೆಳೆದರು. "ಮಾತುಗಳೆಲ್ಲ ಸೋಲುತ್ತಿರುವ ಕಾಲದಲ್ಲಿ ನಾವಿದ್ದೇವೆ. ನುಡಿದಂತೆ ನಡೆಯೋದಿಕ್ಕಾಗುತ್ತಿಲ್ಲ ನಡೆದಂತೆ ನುಡಿಯೋದಿಕ್ಕಾಗುತ್ತಿಲ್ಲ. ಇದರ ನಡುವೆ ನನ್ನ ಮಾತು ಗೆಲ್ಲಬೇಕೆಂಬ ಅಹಂಕಾರದಲ್ಲಿ ನಾವೆಲ್ಲ ಓಡಾಡುತ್ತಿದ್ದೇವೆ.ಮಾತು ಸೋಲದಂತೆ ನೋಡಿಕೊಳ್ಳುತ್ತಿದ್ದ ಹಿರಿಯ ಜೀವಗಳು ಕಣ್ಣು ಮುಂದೆ ಇಲ್ಲ. ಹೀಗೆ ಬದುಕಿದವರ ಜಗತ್ತು ಉಳಿಯುತ್ತದೆಂದು ಹೇಳುವ ಜೀವಿಗಳು ಒಬ್ಬೊಬ್ಬರೇ ಮರೆಯಾಗುತ್ತಿದ್ದಾರೆ. ನೀವು ಒಳ್ಳೆಯವರಾಗಿ , ಮನುಷ್ಯರಾಗಿ ಎಂದು ಹೇಳಿ ಕೊಡುವವರಿಲ್ಲದೆ ವಿಕೃತರಾಗುತ್ತಿದ್ದೇವೆ. ಗಾಂಧೀಜಿ , ಅಂಬೇಡ್ಕರ್, ನೆಹರು ಎಲ್ಲರೂ ನಮ್ಮೆದುರು ಪ್ರತಿಮೆಗಳಾಗಿ ನಿಂತಿದ್ದಾರೆಯೇ ಹೊರತು ನಮಗೆ ಪ್ರತಿರೂಪ ಕೊಡುವ ಕನ್ನಡಿಗಳಾಗಿ ನಮ್ಮೊಳಗೆ ಉಳಿದುಕೊಂಡಿಲ್ಲ.

ನಿಮ್ಮೊಳಗೆ ಒಬ್ಬ ಪುಟ್ಟಗಾಂಧಿ, ಪುಟ್ಟ ಅಂಬೇಡ್ಕರ್, ಪುಟ್ಟ ಕಸ್ತೂರ ಬಾ ತಾಯಿ, ಪುಟ್ಟ ಕುವೆಂಪು , ಪುಟ್ಟ ವಿವೇಕಾನಂದ ಇಲ್ಲದೇ ಇದ್ದರೆ, ನಿಮ್ಮೊಳಗೆ ಅವರು ಬಾರದಿದ್ದರೆ ಯಾವ ಮಾತುಗಳಿಗೂ ಅರ್ಥವಿಲ್ಲ.

ಗಾಂಧಿ ಮೊದಲು ತನ್ನೊಳಗೆ ವಾಗ್ವಾದ ಮಾಡಿಕೊಂಡರು. ತಾನು ತಪ್ಪಿನಿಂದ ಪಾರಾಗಿ ತನ್ನಂತೆ ತಪ್ಪು ಮಾಡುವವರನ್ನು ಪಾರು ಮಾಡಿದ್ದು ಗಾಂಧೀಜಿ. ಅದಕ್ಕಾಗಿ ಇಂದೂ ಕೂಡ ನಮಗೆ ಗಾಂಧಿ ಬೇಕು. ಸ್ವಾತಂತ್ರ್ಯ ಪಡೆದು 77 ವರ್ಷವಾಗಿದೆ. ಗಾಂಧೀಜಿ ಜೊತೆ ಇದ್ದ ಪ್ರಶ್ನೆಗಳನ್ನು ಈಗ ನಾವು ಶತ್ರುತ್ವಕ್ಕೆ ಬದಲಾಯಿಸಿದ್ದೇವೆ. ಅಂಬೇಡ್ಕರ್ ಅವರನ್ನು ವೈಭವೀಕರಿಸಿ ಅವರ ವಿಚಾರಗಳನ್ನು ಅರಿಯದೆ ಹಿಂದುಳಿದಿದ್ದೇವೆ. ಇವತ್ತಿನ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಆಧುನಿಕ ಭಾರತದಲ್ಲಿ ಅಂಬೇಡ್ಕರ್, ಗಾಂಧಿ ,ಇಬ್ಬರಿಗೂ ಉಳಿಗಾಲವಿಲ್ಲ. ಇವರಿಬ್ಬರು ಸೃಷ್ಟಿಸಿದ ಜಗತ್ತಿನಲ್ಲಿ ಉಳಿಗಾಲವಿದೆ ಎಂದು ನಂಬಿ ಬದುಕುವ ಧೈರ್ಯ ನಮಗೂ ಇಲ್ಲವಾಗಿದೆ. ನಮ್ಮ ಶಾಲಾ ಕಾಲೇಜು ಪಠ್ಯಗಳಲ್ಲಿ ಮನುಷ್ಯರಾಗಿ ಎಂದು ಹೇಳುವ ಪಾಠಗಳಿಲ್ಲ. ನೀವು ಇತರರ ಕಷ್ಟಕ್ಕಾಗಿ ಮರುಗಿ ಎಂದು ಹೇಳುವ ಪಾಠವಿಲ್ಲ. ದಾಸ್ಯದಿಂದ, ಮೌಢ್ಯದಿಂದ, ಅಂದಕಾರದಿಂದ ಅಸ್ಪೃಶ್ಯತೆಯಿಂದ ಯಾವುದು


ನಮ್ಮನ್ನು ಮುಕ್ತಗೊಳಿಸುವುದೋ ಅದೇ ನಿಜವಾದ ಶಿಕ್ಷಣ ಎಂದರು ಗಾಂಧಿ. ಭಾರತದ ತತ್ವ ಶಾಸ್ತ್ರಜ್ಞ ಮತ್ತು ಮಾಜಿ ರಾಷ್ಟ್ರಪತಿ ಡಾ . ರಾಧಾಕೃಷ್ಣನ್ ಅವರು 'ಮಹಾತ್ಮ ನೂರು' ಎಂಬ ಪುಸ್ತಕಕ್ಕೆ ಬರೆದ ಮುನ್ನುಡಿಯಲ್ಲಿ 'ವರ್ತಮಾನದ ಇಕ್ಕಟ್ಟು ಮತ್ತು ಬಿಕ್ಕಟ್ಟುಗಳಿಗೆ ನಮಗೆ ಸಾಮಾಜಿಕ ತರಬೇತಿಗಳಿಲ್ಲದಿರುವುದೇ ಮುಖ್ಯ ಕಾರಣ" ಎಂದು ಹೇಳಿದ್ದಾರೆ . ಗಾಂಧೀಜಿ ಅವರು ಬ್ರಿಟೀಷರಿಂದ ಹಿಡಿದು ನಮ್ಮೆಲ್ಲರೊಳಗಿನ ಎಲ್ಲ ಪ್ರತಿಭೆಗಳ ಜೊತೆ ಗಳಿಸಿದರು, ಕಲಿಸಿದರು, ಕಲಿತರು, ಕಲಿಯದವರನ್ನು ಕಂಡು ಮರುಗಿದರು. ಆದರೆ ತಾನು ಸೋತು ಗೆಲುವಿನ

ಹಾದಿಯನ್ನು ತೆರೆದರು . ನಿಮಗೆ ಯಾವ

ದಾರಿಬೇಕು ಆಯ್ಕೆ ಮಾಡಿಕೊಳ್ಳಿ" ಎಂಬ ಅನೇಕ ವಿಷಯಗಳ ಬಗ್ಗೆ ಸಂವಾದಿಸಿ ಗಾಂಧಿ ವ್ಯಕ್ತಿತ್ವಗಳನ್ನು ಅನಾವರಣಗೊಳಿಸಿದರು .

ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಪ್ರಸಿದ್ಧ ನಾಟಕಕಾರರು, ಐಆ□□□ಸ್ ಅಧಿಕಾರಿಗಳೂ ಆದ ಜಯರಾಮ್ ರಾಯಪುರ ಅವರು ' ಸತ್ಯಾನ್ವೇಷಣೆಯ ಮೂಲ ಗುರು ಗಾಂಧೀಜಿ. ತಮ್ಮ ಜೀವನದ ಎಲ್ಲ ಸಂಗತಿಗಳಲ್ಲಿ ಸತ್ಯಾನ್ವೇಷಣೆ ಪ್ರಯೋಗ ಮಾಡಿದ್ದಾರೆ. ಹಲವಾರು ವರ್ಷಗಳಿಂದ ಗಾಂಧಿಯನ್ನು ನಕಾರಾತ್ಮಕವಾಗಿ ಬಿಂಬಿಸುವ ಹಲವಾರು ಹುನ್ನಾರಗಳು ನಡೆಯುತ್ತಿವೆ. ಆದರೆ ಗಾಂಧಿ ಸತ್ವಾನೇಷಣೆಯನ್ನೇ ತಮ್ಮ ಮೂಲ ಧ್ಯೇಯವಾಗಿ ಮಾಡಿಕೊಂಡ ವ್ಯಕ್ತಿ. ಅವರು ಯಾರ ಪರ, ವಿರುದ್ಧವೂ ಅಲ್ಲ. ಸ್ವತಂತ್ರ ಭಾರತ ನಿರ್ಮಾಣದ ಸೇನಾನಿ ಎಂದರೆ ಸರಿಹೋಗುತ್ತದೆ. 1914ರಿಂದ ಭಾರತದಲ್ಲಿ ಸ್ವಾತಂತ್ರ್ಯ ಹೋರಾಟ ಮಾಡಿದ ಗಾಂಧಿ ವಿದ್ಯಾವಂತ ಮತ್ತು ಅವಿದ್ಯಾವಂತ ಸಮಾಜವನ್ನು ಬಡಿದೆಬ್ಬಿಸುವ ಕೆಲಸ ಮಾಡಿದರು. ಅವರ ಪ್ರಕಾರ ವಿದ್ಯಾವಂತ , ವಿಚಾರವಂತ ಭಾರತೀಯ ಸಮಾಜಕ್ಕೆ ಭಾರತದ ಅಧಿಕಾರ ಹಸ್ತಾಂತರವಾಗಬೇಕಿತ್ತು ಎಂಬುದಾಗಿತ್ತು .ಇವರು ಇಡೀ ದೇಶದಲ್ಲಿ ನಿಧಾನವಾಗಿಯೇ ವಿಚಾರಕ್ರಾಂತಿ ಮಾಡುತ್ತಾರೆ. ವಿದ್ಯಾವಂತ ಸಮಾಜವನ್ನು ಮುನ್ನಲೆಗೆ ತರುತ್ತಾರೆ. ಸ್ವಾತಂತ್ರ್ಯ ಇಂದೋ ನಾಳೆಯೋ ನಮಗೆ ಬಂದೇ ಬರುತ್ತದೆ. ಇಂಥ ಸಂದರ್ಭದಲ್ಲಿ ನಿಮ್ಮನ್ನು ನೀವು ಆಳಿಕೊಳ್ಳುವ ಸಾಮರ್ಥ್ಯ ಬೇಕಾಗುತ್ತದೆ ಎಂದು ತಯಾರು ಮಾಡಿದವರು. ರಾಜಕೀಯ ಸ್ವಾತಂತ್ರ್ಯವಷ್ಟೇ ಅಲ್ಲ ರಾಜಕೀಯ ಪ್ರಬುದ್ಧತೆಯನ್ನು ಬೆಳೆಸಬೇಕು ಎಂಬುದು ಗಾಂಧಿ ಅವರ ತಾತ್ವಿಕತೆಯಾಗಿತ್ತು. ಅದಕ್ಕಾಗಿ ಅವರು ಬ್ರಿಟೀಷರನ್ನು ದೇಶಬಿಟ್ಟು ಹೋಗಿ ಎನ್ನದೆ ಅವರೇ ಹೋಗುವ ಹಾಗೆ ಮಾಡಿ ಶಾಂತಿಯುತ ಮಾರ್ಗದಲ್ಲಿ ನಮಗೆ ಸ್ವಾತಂತ್ರ್ಯ ತಂದುಕೊಡುತ್ತಾರೆ" ಎಂದು ತಿಳಿಸಿದರು.

ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬೆಂಗಳೂರು ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷರು, ಗಾಂಧೀವಾದಿಗಳೂ ಆದ



ನಾಡೋಜ ವೂಡೇ ಪಿ.ಕೃಷ್ಣ ಅವರು . "ನಮ್ಮ ವಿದ್ಯಾರ್ಥಿಗಳಿಗೆ ಸದಾ ಕಾಲ ಒಳ್ಳೆಯ ವಿಷಯಗಳನ್ನು ತಲುಪಿಸಬೇಕೆಂದು ಜಯಪ್ರಕಾಶಗೌಡರು ಈ ಮೂರು ಸಂಸ್ಥೆಗಳ ಸಹಯೋಗ ಪಡೆದು ಏರ್ಪಡಿಸಿದ ವಿಚಾರ ಸಂಕಿರಣ ಸಾರ್ಥಕವಾಗಿದೆ ಎಂದು ಪ್ರಶಂಸಿದರು . " ಗಾಂಧಿಯನ್ನು ಓದಿ , ಗಾಂಧಿಯನ್ನು ಅರ್ಥ ಮಾಡಿಕೊಳ್ಳಿ , ಗಾಂಧಿಯನ್ನು ಪ್ರಶ್ನಿಸಿ . ಆದರೆ ಗಾಂಧೀಜಿಯನ್ನು ಓದದೇ, ಅರ್ಥ ಮಾಡಿಕೊಳ್ಳದೆ ಅನಾವಶ್ಯಕವಾಗಿ ಟೀಕೆ ಮಾಡಬೇಡಿ .ನಾನು ಗಾಂಧಿವಾದಿಗಳ ಕುಟುಂಬದ ಹಿನ್ನೆಲೆಯಿಂದ ಬಂದವನು . ನಾನು ಇಂಜನಿಯರಿಂಗ್ ಓದುವಾಗ 1983ರಲ್ಲಿ ಮಲ್ಲೇಶ್ವರದ ಗ್ರಂಥಾಲಯದಲ್ಲಿದ್ದ ' ಗಾಂಧಿ ಕುರಿತ ನೂರು ಸಂಪುಟಗಳನ್ನು ಮೂರು ತಿಂಗಳ ಕಾಲ ಕುಳಿತು ಏಕಾಗ್ರತೆಯಿಂದ ಓದಿದೆ. ಅವನ್ನೆಲ್ಲ ಓದಿದ ಮೇಲೆ ಅದು ನನ್ನ ಬದುಕನ್ನು ಬದಲಿಸಿತು. ಏಕೆಂದರೆ ಸಾಹಿತ್ಯಕ್ಕೆ ಅಂತಹ ಶಕ್ತಿಯಿದೆ . ಓದಿಗೆ ಅಂತಹ ಶಕ್ತಿಯಿದೆ. ಗಾಂಧಿ ದೇವರಲ್ಲ . ನಮ್ಮ ಹಾಗೆ ಸಾಧಾರಣ ಮನುಷ್ಯ. ಗಾಂಧಿ ತಮ್ಮ ಇಡೀ ಬದುಕನ್ನೇ ಸತ್ಯಾನ್ವೇಷಣೆಗೆ ಒಳಪಡಿಸಿದವರು. ಕ್ಷಣ ಕ್ಷಣದಲ್ಲೂ ಸತ್ಯದೊಂದಿಗೆ ಅನು ಸಂಧಾನ ಮಾಡುತ್ತ ಮೇಲೆ ಬಂದವರು.


ಇಡೀ ಜಗತ್ತು ಈಗ ಗಾಂದಿಯನ್ನು ಓದುತ್ತಿದ್ದಾರೆ. ಇಡೀ ಪ್ರಪಂಚದ ಸಮಸ್ಯೆಗಳಿಗೆ ಗಾಂಧಿಯಲ್ಲಿ ಪರಿಹಾರವಿದೆ ಎಂದು ವಿಶ್ವದ ನಾಯಕರು ಈ ಕಡೆ ನೋಡುತ್ತಿದ್ದಾರೆ. ವಿಶ್ವದ ನಾಯಕರುಗಳು ಭಾರತಕ್ಕೆ ಜಿ–20 ಶೃಂಗಸಭೆಗೆ ಬಂದಾಗ ಅವರೆಲ್ಲರೂ ಒಟ್ಟಿಗೆ ಕೂಡಿ ಗಾಂಧೀಜಿ ಸಮಾಧಿ ಸ್ಥಳಕ್ಕೆ ಭೇಟಿ ನೀಡಿ ತಮ್ಮ ತಮ್ಮ ರಾಷ್ಟ್ರದ ಗೌರವ ನಮನಗಳನ್ನು ಸಲ್ಲಿಸಿದರು

. ಆದರೆ ನಾವೇ ನಮ್ಮ ರಾಜಕೀಯ ಬದುಕಿನಲ್ಲಿ, ಸಾರ್ವಜನಿಕ ಬದುಕಿನಲ್ಲಿ ಗಾಂಧೀಜಿಗೆ ಸೂಕ್ತ ಗೌರವ ನೀಡದೆ ಇರುವುದು ನಮ್ಮ ದುರ್ದೈವವೇ ಸರಿ. '20 ನೇ ಶತಮಾನದಲ್ಲಿ ನಾನು ಎರಡು ಅದ್ಭುತಗಳನ್ನು ಕಂಡೆ. ಒಂದು □□□ಟಂಬಾಂಬ್ ಮತ್ತೊಂದು ಮಹಾತ್ಮ ಗಾಂಧಿ" ಎಂಬ ಮಾತುಗಳನ್ನು ಸಮಾಜವಾದಿ ಚಿಂತಕ ರಾಮ ಮನೋಹರ್ ಲೋಹಿಯಾ ಅವರು ಹೇಳುತ್ತಾರೆ. ನೀವು ಶ್ರದ್ಧೆಯಿಂದ ಗಾಂಧಿ ವಿಚಾರಗಳನ್ನು ಓದಿ. "ಸಾಮಾಜಿಕ ಜಾಲತಾಣಗಳಲ್ಲಿ ಬರುವ ಸುಳ್ಳು ಸುದ್ದಿಗಳನ್ನು ನಂಬಬೇಡಿ ಎಂದು ಕಿವಿಮಾತು ಹೇಳಿ ಜಾಗೃತಿ ಮೂಡಿಸಿದರು.

ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿದ್ದ ಗಾಂಧಿವಾದಿಗಳು ಹಾಗೂ ಗಾಂಧೀ ಸ್ಮಾರಕ ನಿಧಿ ಉಪಾಧ್ಯಕ್ಷರೂ ಆದ ಪ್ರೊ.ಜಿ.ಬಿ.ಶಿವರಾಜು ಅವರು ವಿಚಾರ ಸಂಕಿರಣದ ಎರಡೂ ದಿನಗಳೂ ಪಾಲ್ಗೊಂಡು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ಬೆಂಗಳೂರಿನ ವಿಶ್ವನೀಡಂ ಟ್ರಸ್ಟಿನ ಅಧ್ಯಕ್ಷರೂ, ಗಾಂಧಿ ಚಿಂತನೆಗಳನ್ನು ಯುವ ತಲೆಮಾರಿಗೆ ತಲುಪಿಸುವಲ್ಲಿ ಪ್ರಮುಖವಾಗಿ ತೊಡಗಿಸಿ ಕೊಂಡಿರುವ ಶ್ರೀ ಎಂ.ಸಿ.ನರೇಂದ್ರ ಅವರು ಮುಖ್ಯಅತಿಥಿಗಳಾಗಿ ಭಾಗವಹಿಸಿದ್ದರು. ಈ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ ಎಲ್ಲ ವಿದ್ಯಾರ್ಥಿಗಳಿಗೆ ಸಮಾಜವಾದಿ ಚಿಂತಕ ಡಿ.ಎಸ್.ನಾಗಭೂಷಣ ಅವರು ಬರೆದಿರುವ 770 ಪುಟಗಳ ಬೃಹತ್ ಗಾತ್ರದ 400 ರೂ ಮುಖ ಬೆಲೆಯ "ಗಾಂಧೀ ಕಥನ" ಪುಸ್ತಕದ 125 ಪ್ರತಿಗಳನ್ನು ಮುನಿಸ್ವಾಮಿ ಟ್ರಸ್ಟ್ ನವರು ನೀಡಿದರು.

ಹಲವು ಬಿರುಗಾಳಿಗೆ ಸಿಕ್ಕಿ
ಹೊಯ್ದಾಡಿಯೂ ಆರದ
ಜಗದ ಬೆಳಕು
ಎಷ್ಟೇ ಕೊಂದರೂ ಹೇಗೇ
ನಾಶಮಾಡಿದರೂ
ಅಳಿಸಲಾಗದ ಹೊಳಪು
ಆರಿಸಲಾಗದ ಬೆಳಕು ಗಾಂಧಿ

■



ವಿಜಯ್ ಬಸರೂರು ಎನ್ನುವವರು ತಮ್ಮ ಮನೆಯಲ್ಲಿದ್ದ ಹಳೆಯ ಡೈರಿಯಲ್ಲಿ ಈ ಗಾಂಧಿ ಸಹಿ ಸಿಕ್ಕಿತು ಎನ್ನುವ ಮಾಹಿತಿ ಹಂಚಿ ಕೊಂಡಿದ್ದಾರೆ . (ಸಂಗ್ರಹ : ನೇತಾಜಿ ಗಾಂಧಿ)

ಕನ್ನಡದಲ್ಲಿ ಸಹಿ ಮಾಡಿದರು ಮಹಾತ್ಮ..

ಗಾಂಧೀಜಿಗೆ ಭಾರತೀಯ ಭಾಷೆಗಳ ಬಗ್ಗೆ ಬಹಳ ಪ್ರೀತಿಯಿತ್ತು . ತಮ್ಮ ಆತ್ಮಕತೆಯನ್ನು ಅವರು ಗುಜರಾತಿ ಭಾಷೆಯಲ್ಲಿ ಬರೆದರು . ತಮ್ಮ ಜೀವನ ಅನುಭವಗಳನ್ನು ಬಹುತೇಕ ವಿಚಾರಗಳನ್ನು ಗುಜರಾತಿ ಭಾಷೆಯಲ್ಲೇ ಮಂಡಿಸಿದರು. 52 ವರುಷಗಳ ತಮ್ಮ ಪತ್ರಕರ್ತ ವೃತ್ತಿಯಲ್ಲಿ ಅವರು ಭಾರತೀಯ ಭಾಷೆಗಳಿಗೆ ಪ್ರಾಧಾನ್ಯತೆ ನೀಡುತ್ತಿದ್ದರು. . ದಕ್ಷಿಣ ಆಫ್ರಿಕಾದಲ್ಲಿ ಅವರು ಆರಂಭಿಸಿದ ' ಇಂಡಿಯನ್ ಒಪಿನಿಯನ್' ಪತ್ರಿಕೆ ಪ್ರಧಾನವಾಗಿ ಇಂಗ್ಲಿಷ್ ನಲ್ಲಿ ಪ್ರಕಟವಾಗುತ್ತಿತ್ತು . ದಕ್ಷಿಣ ಆಫ್ರಿಕಾದಲ್ಲಿ ಗುಜರಾತಿಗಳು ಮತ್ತು ತಮಿಳು ಜನರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದ ಕಾರಣ ಗುಜರಾತಿ ಮತ್ತು ತಮಿಳಿನಲ್ಲಿ ಕೂಡಾ ಇಂಡಿಯನ್ ಒಪಿನಿಯನ್ ಪತ್ರಿಕೆಯನ್ನು ಅವರು ಪ್ರಕಟಿಸುತ್ತಿದ್ದರು .

ಇಂಡಿಯಾದಲ್ಲಿ 'ಯಂಗ್ ಇಂಡಿಯಾ', 'ನವಜೀವನ್' , 'ಹರಿಜನ್', 'ಹರಿಜನ್ ಸೇವಕ್' , 'ಹರಿಜನ್ ಬಂಧು' ಹೀಗೆ ಆರು ನಿಯತಕಾಲಿಕಗಳನ್ನು ಪ್ರಕಟಿಸುತ್ತಿದ್ದರು . ಆದರಲ್ಲೂ 'ಹರಿಜನ್' ಮತ್ತು 'ಯಂಗ್ ಇಂಡಿಯಾ' ಪತ್ರಿಕೆಗಳಂತೂ ಬಹಳಷ್ಟು ಪ್ರಸಿದ್ದಿ ಪಡೆದಿದ್ದವು. ಅವುಗಳ ಪ್ರಸಾರ ಸಂಖ್ಯೆಯೂ ಅತಿ ವೇಗದಲ್ಲಿ ವೃದ್ಧಿಯಲ್ಲಿತ್ತು.
'ಹರಿಜನ್ ಸೇವಕ್' ಹಿಂದಿ ಭಾಷೆ ಸೇರಿದಂತೆ ಭಾರತದ ಇತರೆ ಆರು ಭಾಷೆಗಳಲ್ಲಿ ಪ್ರಕಟವಾಗುತ್ತಿತ್ತು . ಗುಜರಾತಿಯಲ್ಲಿ 'ಹರಿಜನ್ ಬಂಧು' ನಿಯತಕಾಲಿಕ ಪತ್ರಿಕೆ ಪ್ರಕಟವಾಗುತ್ತಿತ್ತು .ಬ್ರಿಟಿಷರ ಆಳ್ವಿಕೆಯ ಭಾರತದಲ್ಲಿ ಆಂಗ್ಲರ ಎಚ್ಚರಿಕೆಯ ನಡುವೆಯೇ ಏಳು ಭಾಷೆಗಳಲ್ಲಿ ಪತ್ರಿಕೆಗಳನ್ನು ಪ್ರಕಟ ಮಾಡಿ ಸ್ವರಾಜ್ಯ ಹೋರಾಟದಲ್ಲಿ ಅದ್ವಿತೀಯ ಸಾಧನೆಯನ್ನು ಮಾಡಿದವರು ಸತ್ಯಾಗ್ರಹಿ ಗಾಂಧಿ. ' ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ಬರೆದ ಮೂರು ಕಠೋರ ವರದಿಗಳಿಂದ ಕಂಗೆಟ್ಟ ಆಂಗ್ಲ ಸರಕಾರ ಸತ್ಯಾಗ್ರಹಿ ಗಾಂಧಿಯನ್ನು 1922ರಲ್ಲಿ ಬಂದಿಸಿತು . ಅವರ ವಿರುದ್ಧ ರಾಷ್ಟ್ರದ್ರೋಹದ ಕೇಸನ್ನು ದಾಖಲು ಮಾಡಿದ ಪರಿಣಾಮ ವಿಚಾರಣೆ ನಡೆದು ಸತ್ಯಾಗ್ರಹಿ ಗಾಂಧಿಗೆ ಶಿಕ್ಷೆಯಾಗಿ 6 ವರುಷಗಳ ಕಾಲ ಪುಣೆಯ ಜೈಲಿಗೆ ಕಳುಹಿಸಲಾಗಿತ್ತು.

ಭಾರತದ ಬಹುತೇಕ ಭಾಷೆಗಳ ಬಗ್ಗೆ ಅವರಿಗೆ ಪ್ರಾಥಮಿಕ ತಿಳಿವಳಿಕೆಯಿತ್ತು. ಉರ್ದು ಭಾಷೆಯಲ್ಲಿ ಅವರು ಮಾತನಾಡುತ್ತಿದ್ದರು ಕೂಡಾ. ತಮಿಳು ಮತ್ತು ಮಲೆಯಾಳಿ ಬಂಗಾಳಿ ಭಾಷೆ ಅವರಿಗೆ ಕೊಂಚ ತಿಳಿಯುತ್ತಿತ್ತು. ಅವಕಾಶ ಸಿಕ್ಕಿದಾಗಲೆಲ್ಲ ಅವರು ಸ್ಥಳೀಯ ಭಾಷೆಗಳಲ್ಲಿ ತಮ್ಮ ಸಹಿ ಮಾಡಿ ಸ್ಥಳೀಯ ಭಾಷೆಗಳ ಬಗ್ಗೆ ತಮಗಿರುವ ಪ್ರೀತಿಯನ್ನು ವ್ಯಕ್ತಗೊಳಿಸುತ್ತಿದ್ದರು. ಕನ್ನಡದಲ್ಲಿಯೂ ಅವರು ಸಹಿ ಮಾಡಿ ತಮ್ಮ ಕನ್ನಡ ಪ್ರೇಮ ಮೆರೆದಿದ್ದರು. ಮಕ್ಕಳ ಪ್ರಾಥಮಿಕ ಶಿಕ್ಷಣ ಮಾತೃ ಭಾಷೆಗಳಲ್ಲಿ ಆಗಬೇಕು ಎಂದು ಅವರು ಪ್ರತಿಪಾದಿಸುತ್ತಿದ್ದರು. ■

ಗಾಂಧಿ ಚಿಂತನೆ 05

– ಜಗದೀಶ್ ಕೊಪ್ಪ



ಗಾಂಧೀಜಿಯವರ ಪಾಲಿಗೆ ಸತ್ಯ ಮತ ಅಹಿಂಸೆ ಈ ಎರಡು ಅಂಶಗಳು ಕೇವಲ ಅವರ ಜೀವನದ ಧೋರಣೆಗಳಾಗಿರಲಿಲ್ಲ ಅವರ ಪಾಲಿಗೆ ಪ್ರಾಣಕ್ಕಿಂತ ಮಿಗಿಲಾಗಿದ್ದವು. ಎಂತಹದ್ದೇ ಸಂದರ್ಭಗಳಲ್ಲಿ ಅವರು ಇವುಗಳಿಂದ ವಿಮುಖರಾಗಲಿಲ್ಲ. ತಮ್ಮ ಬದುಕಿನಲ್ಲಿ ಸತ್ಯ ಮತ್ತು ಅಹಿಂಸೆಯನ್ನು ಅಳವಡಿಸಿಕೊಳ್ಳುವುದರ ಜೊತೆಗೆ ತಮ್ಮ ಅಸಂಖ್ಯಾತ ಶಿಷ್ಯರಿಗೆ ಮತ್ತು ಅನುಯಾಯಿಗಳಿಗೆ ಪ್ರೇರಣೆಯಾದರು. ಇದರ ಅಂತಿಮ ಫಲವೆಂಬಂತೆ ಹಿಂಸೆಯ ವಿರುದ್ಧ ಅಹಿಂಸೆಯೆಂಬ ಆಯುಧವನ್ನು ಬಳಸಿ ಬ್ರಿಟಿಷರನ್ನು ಮಣಿಸಿದ್ದು ಅವರೊಳಗಿನ ಇಚ್ಛಾಶಕ್ತಿಗೆ ಸಾಕ್ಷಿಯಾಗಿದೆ. ಅವರೊಳಗಿನ ಇಂತಹ ಮನೋಧರ್ಮದಿಂದಾಗಿ ಅವರನ್ನು ಈ ಜಗತ್ತು ದಾರ್ಶನಿಕ ಸ್ಥಾನಕ್ಕೇರಿಸಿತು.

ಹಿಂಸೆಯಿಂದ ಈ ಜಗತ್ತಿನಲ್ಲಿ ಏನನ್ನೂ ಗೆಲ್ಲಲಾಗದು ಎಂದು ನಂಬಿದ್ದ ಗಾಂಧೀಜಿಯವರು. ಹಿಂಸೆ ದ್ವೇಷವನ್ನು ಹುಟ್ಟು ಹಾಕಿದರೆ, ಅಹಿಂಸೆ ಪ್ರೀತಿಯನ್ನು ಹುಟ್ಟು ಹಾಕುತ್ತದೆ ಎಂದು ನಂಬಿದ್ದರು. ಅವರ ಈ ನಂಬಿಕೆ ಎಂದಿಗೂ ಸುಳ್ಳಾಗಲಿಲ್ಲ. ಅವರು ಇಡೀ ಬದುಕಿನುದ್ದಕ್ಕೂ ದಕ್ಷಿಣ ಆಫ್ರಿಕಾದ ವರ್ಣ ಬೇಧ ನೀತಿಯ ವಿರುದ್ಧದ ಹೋರಾಟವನ್ನು ಒಳಗೊಂಡಂತೆ, ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಬ್ರಿಟೀಷರ ವಿರುದ್ಧ ಹೋರಾಡಿದರೂ ಸಹ, ಅವರು ನೀಡಿದ ಹಿಂಸೆಗೆ ಪ್ರತಿಫಲವಾಗಿ ಅವರು ಬ್ರಿಟೀಷರಿಗೆ ಪ್ರೀತಿ ಮತ್ತು ಗೌರವವನ್ನೇ ನೀಡಿದರು. ತಮ್ಮೊಳಗಿನ ಬದ್ಧತೆಗೆ ಮತ್ತು ಹಾಕಿಕೊಂಡಿದ್ದ ಗುರಿಗಳಿಗೆ ಕಿಂಚಿತ್ತೂ ಧಕ್ಕೆಯಾಗದಂತೆ ಅಹಿಂಸೆಯಿಂದ ಎಲ್ಲವನ್ನೂ ಗೆದ್ದರು.

ಯುದ್ಧಗಳ ಮೂಲಕ ಸಾಮ್ರಾಜ್ಯಗಳನ್ನು ಮತ್ತು ದೇಶಗಳನ್ನು ಗೆಲ್ಲುವ ಇತಿಹಾಸ ಓದಿಕೊಂಡಿದ್ದ ಇಪ್ಪತ್ತನೇ ಶತಮಾನಕ್ಕೆ ಅಹಿಂಸೆಯಿಂದ ಮತ್ತು ಪ್ರೀತಿಯಿಂದ ಯುದ್ಧವನ್ನು ಗೆಲ್ಲಬಹುದು ಎಂಬುದುನ್ನು ಮಹಾತ್ಮ ತೋರಿಸಿಕೊಟ್ಟರು. ಗಾಂಧೀಜಿಯವರ ಪ್ರಕಾರ ಸತ್ಯ ಮತ್ತು ಪ್ರೀತಿ ಪರಸ್ಪರ ಪರಿವರ್ತನೀಯ ಅಂಶಗಳಾಗಿದ್ದವು. ಅವುಗಳು ಅಹಿಂಸೆಗೆ ಪೂರಕವಾಗಿರುವ ಅಂಶಗಳು ಎಂಬುದಾಗಿತ್ತು.

ಅಹಿಂಸೆಯ ಕಾರ್ಯರೂಪವಾದ ಪ್ರೀತಿಯಿಂದ ಎಲ್ಲರಿಗೂ ಒಳಿತನ್ನು ಮಾಡಲು ಸಾಧ್ಯ ಎಂಬುದು ಅವರ ಪ್ರಬಲ ನಂಬಿಕೆಯಾಗಿತ್ತು.

ಮನುಷ್ಯ ಜೀವಿಯಲ್ಲಿ ಪಾಶವಿ ನಿಯಮ ಮತ್ತು ಮಾನವೀಯ ನಿಯಮ ಈ ಎರಡು ಗುಣಗಳಿರುತ್ತವೆ. ಇವುಗಳಲ್ಲಿ ನಾವು ಎರಡನೆಯದನ್ನು ಆಯ್ಕೆ ಮಾಡಿಕೊಳ್ಳಬೇಕು. ಆದರೆ, ಸಂಪತ್ತು ಮತ್ತು ಅಧಿಕಾರವೇ ಸಾಮರ್ಥ್ಯ ಎಂದು ಆಧುನಿಕ ಜಗತ್ತು ನಂಬಿದ್ದ ಕಾಲಘಟ್ಟದಲ್ಲಿ ಅಂತಹ ಹುಸಿನಂಬಿಕೆಯನ್ನು ತಮ್ಮ ನಡೆ ಮತ್ತು ನುಡಿಗಳ ಮೂಲಕ ಗಾಂಧೀಜಿ ಹೊಡೆದು ಹಾಕಿದರು. ಇನ್ನೊಬ್ಬರಿಗೆ ಸಹಾಯ ಮಾಡುವುದು, ನೊಂದವರ, ಬಳಲಿದವರ ಸೇವೆ ಮಾಡುವುದು ಇಂತಹ ಆತ್ಮ ತೃಪ್ತಿಯು ಆಧ್ಯಾತ್ಮಕ್ಕೆ ಸಮನಾದುದು. ಭೌತಿಕ ತೃಪ್ತಿಗಿಂತ ಆತ್ಮ ತೃಪ್ತಿ ಮುಖ್ಯವಾದುದು. ಇದು ಸಾಧು ಸಂತರು ಅಥವಾ ಋಷಿಗಳಿಗೆ ಸೀಮಿತವಲ್ಲ, ಎಲ್ಲ ಜನಸಾಮಾನ್ಯರು ಅಳವಡಿಸಿಕೊಳ್ಳಬೇಕಾದ ನಿಸರ್ಗದ ನಿಯಮ ಎಂದು ಗಾಂಧೀಜಿಯವರ ತಮ್ಮ ಪ್ರಾರ್ಥನಾ ಸಭೆಗಳಲ್ಲಿ ಹೇಳುತ್ತಿದ್ದರು.

ಸತ್ಯ ಮತ್ತು ಅಹಿಂಸೆಯ ಹಾದಿಯು ಕತ್ತಿಯ ಅಲುಗಿನಂತಹದ್ದು ಹಾಗೂ ಕಠಿತವಾದದ್ದು ಎಂದು ಅವರು ಯಾವಾಗಲೂ ಹೇಳುತ್ತಿದ್ದರು. ಆದರೆ ಇವುಗಳ ಅನುಕರಣೆ ನಮಗೆ ಊಟ ಅಥವಾ ಆಹಾರಕ್ಕಿಂತ ಮಿಗಿಲಾದುದು. ಏಕೆಂದರೆ, ಆಹಾರ ದೇಹವನ್ನು ಮಾತ್ರ ತೃಪ್ತಿ ಪಡಿಸುತ್ತದೆ. ಆದರೆ, ಸತ್ಯ ಮತ್ತು ಅಹಿಂಸೆಗಳು ನಮ್ಮ ಆತ್ಮಗಳನ್ನು ತೃಪ್ತಿ ಪಡಿಸುತ್ತವೆ. ಆತ್ಮತೃಪ್ತಿಗಿಂತ ಮಿಗಿಲಾದದ್ದು ಈ ಜಗತ್ತಿನಲ್ಲಿ ಮತ್ತೊಂದಿಲ್ಲ ಎಂದು ಅವರು ಸತ್ಯ ಮತ್ತು ಅಹಿಂಸೆಯ ಕುರಿತು ಮಾತನಾಡುತ್ತಿದ್ದರು.

ಅಹಿಂಸೆಯ ಹಾದಿಯನ್ನು ತುಳಿಯುವ ಮುನ್ನ ಮೊದಲ ಹೆಜ್ಜೆಯಾಗಿ ನಮ್ಮೊಳಗೆ ಸತ್ಯ, ತಾಳ್ಮೆ, ವಿನಯ, ಪ್ರೀತಿ ಮತ್ತು ಕರುಣೆ ಇವುಗಳನ್ನು ಬೆಳಸಿಕೊಳ್ಳಬೇಕು,. ಏಕೆಂದರೆ ಅಹಿಂಸೆ ಎಂಬುದು ಎಂದಿಗೂ ಬದಲಾಗದ ಪಥ. ಈ ಹಾದಿಯನ್ನು ತುಳಿಯುವ ಮುನ್ನ ಎಲ್ಲಾ ಮಾನವೀಯ ಗುಣಗಳು ನಮ್ಮೊಳಗೆ ಅಡಕವಾಗಿರಬೇಕು ಎಂಬುದು ಅವರ ನಂಬಿಕೆಯಾಗಿತ್ತು.

ಅಹಿಂಸೆಯ ಮೂಲ ಬೇರುಗಳು ಈ ಜಗತ್ತಿನ ಎಲ್ಲಾ ಧರ್ಮಗಳಲ್ಲಿಯೂ ಅಡಕವಾಗಿದೆ ಎಂದು ಹೇಳುತ್ತಿದ್ದ ಗಾಂಧೀಜಿಯವರು, ಭಾರತದಲ್ಲಿ ಅದರ ಪ್ರಯೋಗವು ಒಂದು ಶಾಸ್ತ್ರವೇ ಆಗಿದೆ ಎನ್ನುತ್ತಿದ್ದರು. ಅಹಿಂಸೆಯ ಪರಮ ಗುರಿ ಸತ್ಯದ ಸಾಕ್ಷಾತ್ಕಾರವೇ ಆಗಿದೆ ಎನ್ನುತ್ತಿದ್ದ ಅವರು, ನನಗೆ ಅಹಿಂಸೆಯ ವ್ರತ ಹೊರತು ಪಡಿಸಿದರೆ ಬೇರೆ ಮಾರ್ಗವಿಲ್ಲ ಎನ್ನುತ್ತಿದ್ದರು.

ಅಹಿಂಸೆ ಎಂಬುವುದು ಹೇಡಿತನದ ಮುಖವಾಡವಲ್ಲ, ಅದು ಶೂರರ ಮತ್ತು ಧೀರರ ಗುಣ ಎಂದು ಬಣ್ಣಿಸುತ್ತಿದ್ದ ಮಹಾತ್ಮರು ಅಹಿಂಸೆಯ ಅಭ್ಯಾಸ ಕತ್ತಿ ವರಸೆಯ ಅಭ್ಯಾಸಕ್ಕಿಂತ ಕಠಿಣವಾದುದು ಎನ್ನುತ್ತಿದ್ದರು. ಈ ಕಾರಣಕ್ಕಾ ತಾವು ನಂಬಿದ ಹಾಗೂ ಪ್ರತಿಸಿದ ಸತ್ಯ ಮತ್ತು ಅಹಿಂಸೆಗಳ ಮೂಲಕ ಮಹಾತ್ಮ ಗಾಂಧೀಜಿ ಇಂದಿಗೂ ನಮ್ಮೊಳಗೆ ಜೀವಂತವಾಗಿದ್ದಾರೆ. ■

ಗಾಂಧಿ ಮತ್ತು ಕರ್ನಾಟಕ

ಭಾಗ –6



ಗಾಂಧಿ ಮತ್ತು ಕರ್ನಾಟಕದ ನಡುವೆ ಒಂದು ಮಧುರ ಸಂಬಂಧವಿದೆ. ಕರ್ನಾಟಕದ ಜೊತೆಗಿನ ಗಾಂಧೀಜಿಯವರ ಒಡನಾಟ ಮತ್ತು ಸಂಬಂಧವನ್ನು ಇತ್ತೀಚಿನ ಪೀಳಿಗೆಯ ಓದುಗರಿಗೆ ತಲುಪಿಸುವ ಉದ್ದೇಶ ನಮ್ಮದು. ಅದಕ್ಕಾಗಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಂಸ್ಥೆಯ ಪ್ರಕಟಣೆಯಾದ **"ಗಾಂಧಿ ಮತ್ತು ಕರ್ನಾಟಕ"** ಕೃತಿಯನ್ನು ಸರಣಿ ಮಾದರಿಯಲ್ಲಿ ಪ್ರತಿ ತಿಂಗಳು ಬಾಪು ಪ್ರಪಂಚ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದೇವೆ.

ಭಾರತದ ಸ್ವಾತಂತ್ರ್ಯ ಚಳವಳಿಗೆ ಕರ್ನಾಟಕದ ಕೊಡುಗೆ ಅಪಾರವಾದುದು,ಅದರಲ್ಲಿಯೂ ವಿದುರಾಶ್ವಥ ದುರಂತ, ಶಿವಪುರ ಧ್ವಜ ಸತ್ಯಾಗ್ರಹ ಹಾಗೂ 1982ರ ನಂತರದ (ಮೈಸೂರು ಚಲೋ ಚಳವಳಿಗಳು) ಕರ್ನಾಟಕದ ಕೊಡುಗೆಯೆಂದೆ ಭಾವಿಸುವ ಮಹತ್ವಪೂರ್ಣ ಘಟನೆಗಳಾಗಿ ಇತಿಹಾಸದಲ್ಲಿ ದಾಖಲಾಗಿವೆ . ಅದಲ್ಲದೆ ಗಾಂಧೀಜಿಯವರು ವಿಶ್ರಾಂತಿಗಾಗಿ ಕರ್ನಾಟಕದ ನಂದಿ ಗಿರಿಧಾಮವನ್ನು ಆಯ್ಕೆ ಮಾಡಿಕೊಂಡಿದ್ದು ಕರ್ನಾಟಕದ ಸುದೈವ. ಅಲ್ಲಿ ಅವರ ಆರೋಗ್ಯ ಸುಧಾರಿಸಿದ್ದು. ಗಾಂಧೀಜಿಯವರು ಕರ್ನಾಟಕಕ್ಕೆ 1915ರಿಂದ 1937ರ ಅವಧಿಯಲ್ಲಿ 19 ಸಲ ಆಗಮಿಸಿದ್ದಾರೆ. ಅವರು ಅಸಹಕಾರ ಆಂದೋಲನಕ್ಕಾಗಿ, ಖಾದಿ ಸ್ವದೇಶಿ ಆಂದೋಲನಕ್ಕಾಗಿ, ಕಾಂಗ್ರೆಸ್ ಅಧಿವೇಶನಕ್ಕಾಗಿ, ನಿಧಿ ಸಂಗ್ರಹಕ್ಕಾಗಿ, ಖಾದಿ ಪ್ರಚಾರಕ್ಕಾಗಿ, ಹರಿಜನ ನಿಧಿ ಸಂಗ್ರಹಕ್ಕಾಗಿ, ಹುದಲಿ ಸಮ್ಮೇಳನಕ್ಕಾಗಿ ಕರ್ನಾಟಕದ ನಾನಾ ಭಾಗಗಳಲ್ಲಿ ಪ್ರವಾಸ ಕೈಗೊಂಡಿದ್ದಾರೆ. ಈ ಎಲ್ಲಾ ದಾಖಲೆಗಳನ್ನು ಗಾಂಧೀಜಿಯವರೇ ಸ್ವತಃ ತಮ್ಮ ' ಹರಿಜನ ' ಮತ್ತು ' ಯಂಗ್ ಇಂಡಿಯಾ ' ಪತ್ರಿಕೆಗಳಲ್ಲಿ 1924, 1927, 1936, ಹಾಗೂ 1937ರ ಅವಧಿಯಲ್ಲಿ ಪ್ರಕಟಿಸಿದ್ದಾರೆ.

ಈ ಸಮಗ್ರ ದಾಖಲೆಗಳು ' ಗಾಂಧೀ ಮತ್ತು ಕರ್ನಾಟಕ ' ಕೃತಿಯಲ್ಲಿ ದಾಖಲಾಗಿವೆ. ಹಾಗೂ ಕರ್ನಾಟಕದ ಅಂದಿನ ಮುಂಚೂಣಿ ನಾಯಕರ ಪತ್ರ ವ್ಯವಹಾರಗಳು ಅಂದಿನ ಛಾಯಾಚಿತ್ರಗಳು ಸಹ ದಾಖಲಾಗಿವೆ. ಅಂದಿನ ಸ್ವಾತಂತ್ರ್ಯ ಹೋರಾಟಗಾರರ ನೆನಪುಗಳು ಕೂಡಾ ಈ ಕೃತಿಯಲ್ಲಿ ಸೇರ್ಪಡೆಯಾಗಿವೆ. ಅಲ್ಲದೆ ಕರ್ನಾಟಕಕ್ಕೆ ಗಾಂಧೀಜಿಯವರು ಬಂದಿದ್ದ ಹಾಗೂ ನಡೆದ ಘಟನೆಗಳ ಅವಲೋಕನವನ್ನು ಸ್ವಾತಂತ್ರ್ಯ ಹೋರಾಟಗಾರರು ತಮ್ಮ ನೆನಪಿನ ಬುತ್ತಿಯಿಂದ ತೆಗೆದಿಟ್ಟಿದ್ದಾರೆ. ಅವುಗಳೆಲ್ಲವನ್ನೂ ಸಿದ್ದವನಹಳ್ಳಿ ಕೃಷ್ಣಶರ್ಮರ ಮುಂದಾಳತ್ವದಲ್ಲಿ ಅಂದಿನ ಸಂಗ್ರಹಕಾರರು ಸಂಗ್ರಹಿಸಿದ್ದಾರೆ. ಕರ್ನಾಟಕದ 44 ಮಹನೀಯರು ತಮ್ಮ ನೆನಪುಗಳ ಬುತ್ತಿಯಿಂದ ಗಾಂಧೀಜಿಯವರ ಕರ್ನಾಟಕದ ಭೇಟಿಯಲ್ಲಿ ನಡೆದ ಘಟನೆಗಳನ್ನು ಸವಿಸ್ತಾರವಾಗಿ ದಾಖಲಿಸಲು ನೆರವಾಗಿದ್ದಾರೆ. ಅವರ ಮಾತುಗಳು ಇಂದಿಗೂ ಈ ಕೃತಿಯನ್ನು ಓದುವಾಗ ಒಂದು ಚಿತ್ರಣವನ್ನು ಓದುಗರ ಸ್ಮೃತಿಪಟಲದಲ್ಲಿ ಮೂಡಿಸುತ್ತವೆ.



ಮಂಗಳೂರಿನಲ್ಲಿ ಗಾಂಧೀಜಿ (19.8.1920)

ಆಗ ಮಂಗಳೂರು ಮದರಾಸ್ ಪ್ರಾಂತ್ಯದಲ್ಲಿ ಇತ್ತು. ಆಗ ಇನ್ನೂ ಭಾಷಾವಾರು ಪ್ರಾಂತ್ಯಗಳ ವ್ಯವಸ್ಥೆ ಆಗಿರಲಿಲ್ಲ. ರಾಜಕೀಯವಾಗಿ ಅಲ್ಲದಿದ್ದರೂ, ಕಾಂಗ್ರೆಸ್ಸಿನ ಘಟನೆಯಲ್ಲಿ ಕೂಡ ಬ್ರಿಟಿಷ್ ಪ್ರಾಂತಗಳಾದ ಮದರಾಸ್, ಮುಂಬಯಿಗಳು ಇದ್ದವು. ಮಂಗಳೂರು ಈಗ ಕನ್ನಡದ ಮಹಾನಗರ, ಆಗ ಅದು ಮದರಾಸ್ ಪ್ರಾಂತದ ಪಟ್ಟಣಗಳಲ್ಲಿ ಒಂದು. ಅಲ್ಲಿಗೆ ಗಾಂಧೀಜಿ ಶೌಕತ್ ಅಲಿ ಸಂಗಡ ಆಗಸ್ಟ್ 19, 1920 ರ ದಿನ ಬಂದರು. ಅವರದೊಂದು ಸುದೀರ್ಘ ಭಾಷಣ ಅಲ್ಲಿ ಆಯಿತು.

ಗಾಂಧೀಜಿ ಹೇಳಿದರು: "ನನಗೂ ನನ್ನ ಅಣ್ಣ ಶೌಕತ್ ಅಲಿಗೂ ಭಾರತದ ಈ ಸುಂದರ ಉದ್ಯಾನಕ್ಕೆ ಬರಲು ಬಹಳ ಸಂತೋಷ ಆಯಿತು. ಇವತ್ತು ನೀವು ಕೊಟ್ಟ ಭವ್ಯ ಸ್ವಾಗತ, ನಾವು ಪ್ರತಿನಿಧಿಸುತ್ತಿರುವ ಚಳವಳಿಯಲ್ಲಿ ನಿಮಗೆ ಸಹಾನುಭೂತಿ ಇದೆ ಎಂದಾದರೆ ನಮಗೆ ಬಹಳ ಸಂತೋಷ. ಈ ನಿರಂತರ ಪ್ರವಾಸವನ್ನು ನಾವು ಕೈಗೊಂಡದ್ದು ಸ್ವಾಗತಗಳಿಗೆ ಮತ್ತು ಬಿನ್ನವತ್ತಳೆಗಳಿಗೆ ಅಲ್ಲ. ಇವತ್ತಿನ ನಮ್ಮ ಪರಿಸ್ಥಿತಿಯನ್ನು ನಿಮ್ಮ ಎದುರಿಗಿಡಲು ಪ್ರವಾಸ ಮಾಡುತ್ತಿದ್ದೇವೆ. ನಮ್ಮ ಪ್ರವಾಸದಲ್ಲಿ ಎಲ್ಲೆಲ್ಲೂ ಬಿನ್ನವತ್ತಳೆಗಳು ನಮಗೆ ದೊರೆತವು. ಕಾಸರಗೋಡಿನಲ್ಲಿ ದೊರೆತ ಬಿನ್ನವತ್ತಳೆ ಬಹಳ ಪ್ರಾಮಾಣಿಕ ಆಗಿದೆ. ನಮ್ಮಿಬ್ಬರನ್ನು "ಪ್ರಿಯ ಪೂಜ್ಯ ಸೋದರರೆ " ಎಂದು ಕರೆದಿದ್ದಾರೆ. "ಪೂಜನೀಯ" ಶಬ್ದ ನನಗೆ ಇಷ್ಟ ಇಲ್ಲದಿದ್ದರೂ, "ಪ್ರಿಯ' ಎಂಬ ಶಬ್ದ ಮಾತ್ರ ಪ್ರಿಯ. ಅದಕ್ಕಿಂತಲೂ ಪ್ರಿಯ 'ಸೋದರರೆ' ಎಂಬ ಶಬ್ದ. ಆ ಬಿನ್ನವತ್ತಳೆಯನ್ನು ಬರೆದವರು ಈ ಪ್ರವಾಸದ ಮಹತ್ವವನ್ನು ಅರಿತುಕೊಂಡಿದ್ದಾರೆ. ಒಂದೇ ಹೊಟ್ಟೆಯಲ್ಲಿ ಹುಟ್ಟಿದ ಯಾವ ಅಣ್ಣ ತಮ್ಮಂದಿರೂ ನನ್ನ ಅಣ್ಣ ಶೌಕತ್ ಆಲಿ ಹಾಗೆ ಒಂದೇ ಧ್ಯೇಯ ಒಂದೇ ಉದ್ದೇಶ ಇಟ್ಟುಕೊಂಡು ನಮ್ಮಷ್ಟು ನಿಕಟವಾಗಿ ಇರುವುದು ಕಷ್ಟ . ಶೌಕತ್ ಆಲಿ ಜೊತೆಯಲ್ಲಿ ಒಡಹುಟ್ಟಿದವನು ಎನಿಸಿಕೊಳ್ಳಲು ನನಗೆ ಬಲು ಹೆಮ್ಮೆ.

ಆ ಬಿನ್ನವತ್ತಳೆಯ ವಿಷಯ ಮಾತ್ರ ಮಹತ್ವದ್ದು. ನಮ್ಮ ಈ ಒಟ್ಟು ಕೆಲಸದಲ್ಲಿ ಭಾರತದ ಹಿಂದೂ ಮುಸಲ್ಮಾನರ ಐಕಮತ್ಯದ ತಿರುಳು ಅಡಗಿದೆ. ಎಂದು ಹೇಳಿದರು. ಅತ್ಯವಶ್ಯಕವಾದ ಆ ಐಕಮತ್ಯವನ್ನು ನಾವಿಬ್ಬರೂ ಪ್ರತಿನಿಧಿಸಲಾರದೇ ಹೋದರೆ ಈ ಎರಡು ಮತ ಗುಂಪುಗಳಲ್ಲಿ ಸದ್ಭಾವನೆಯ ಸಂಬಂಧವನ್ನು ತರಲಾರೆವಾದರೆ ಬೇರೆ ಯಾರಿಗೆ ಅದು ಸಾಧ್ಯವೋ ನಾನರಿಯೆ. ಆಮೇಲೆ ಉತ್ಪ್ರೇಕ್ಷ, ಅಲಂಕಾರ ಯಾವುದೂ ಇಲ್ಲದೆ ಪಂಜಾಬಿನ ಹಾಗೂ ಖಿಲಾಪತ್ತಿನ ಹೋರಾಟದ ಅಂತರಾರ್ಥವನ್ನು ವರ್ಣಿಸಿತು. ಆಮೇಲೆ ಸರಳ ಸುಂದರ ಭಾಷೆಯಲ್ಲಿ ಸತ್ಯಾಗ್ರಹ ಅಸಹಕಾರಗಳ ಅಧ್ಯಾತ್ಮಕ ಅರ್ಥವನ್ನು ವಿವರಿಸಿತು . ಅದರ ತರುವಾಯ ಒಂದು ಸ್ಪಷ್ಟವಾದ ಸರಳ ಶಪಥ. ನಮ್ಮ ಈ ಬೃಹತ್ ಪ್ರಮಾಣ – ಸ್ವಭಾವ ಅವರಿಗೆ ಅರ್ಥವಾಗಿದೆ. ಆದರೂ ಈ ಸಹಕಾರದಲ್ಲಿ ಅವರು ಸಂಪೂರ್ಣವಾಗಿ ಭಾಗವಹಿಸದೇ ಹೋದರೂ ಕೂಡ ತಮ್ಮ ಕೈಲಾದಷ್ಟು ಹೋರಾಟಕ್ಕೆ ಸಹಾಯ

ನೀಡುವುದಾಗಿ ಮಾತುಕೊಟ್ಟರು. ಕಟ್ಟಕಡೆಯಲ್ಲಿ ಭಾವಪೂರ್ಣ, ಸತ್ಯವಂತ ಭಾಷೆಯಲ್ಲಿ ಈ ಮಾತನ್ನು ಹೇಳಿದರು: "ಈ ಸಂದರ್ಭಕ್ಕೆ ನಾವು ಎಟುಕದಿದ್ದರೆ ಅದು ನಮ್ಮ ಪ್ರಯತ್ನದ ಲೋಪ ಅಲ್ಲ, ನಮ್ಮ ಸಾಮರ್ಥ್ಯದ ಲೋಪ" ಎಂದರು.

ಇದಕ್ಕಿಂತ ಹೆಚ್ಚಿನ ಬಿನ್ನವತ್ತಳೆ , ಹೆಚ್ಚಿನ ವಚನ ಇನ್ನೇನು ಬೇಕು ! ಮಂಗಳೂರಿನವರು ನೀವು ಕೂಡ ಈ ಚಳವಳಿ ಸರಿ, ಅದಕ್ಕೆ ನಮ್ಮ ಒಪ್ಪಿಗೆ ಇದೆ ಎಂದರೆ ಯಥಾಶಕ್ತಿ ತ್ಯಾಗವನ್ನು ಮಾಡಿರಿ. ಏಕೆಂದರೆ ಈಗ ನಮ್ಮ 'ಇದಿರಿಗೆ ಇರುವ ಪಿಡುಗು ಪ್ಲೇಗು, ಪ್ರವಾಹ, ಭೂಕಂಪಗಳಿಗಿಂತ ದೊಡ್ಡದು. ಈ ಅನರ್ಥಗಳಿಂದ ನಮ್ಮ ದೇಹಗಳು ನಾಶ ಆದಾವು. ಆದರೆ ಈ ಪಿಡುಗಿನಿಂದ ನಮ್ಮ ಇಡೀ ರಾಷ್ಟ್ರದ ಸ್ವಾಭಿಮಾನ ನಮ್ಮ ಜನರ ಧರ್ಮಾಭಿಮಾನ ನಾಶ ಆಗುತ್ತದೆ. ಖಿಲಾಫತ್ ಅನ್ಯಾಯ ಭಾರತದ ಮುಸಲ್ಮಾನರಿಗೆ ಅನ್ವಯಿಸಿದರೆ, ಪಂಜಾಬಿನ ದುರಂತವಂತೂ ಪೌರುಷವನ್ನೇ ಕೆಣಕುತ್ತದೆ. ಇದರ ಎದುರಿನಲ್ಲಿ ನಾವು ದುರ್ಬಲತೆಯಿಂದ ಮಣಿಯೋಣವೆ ಅಥವಾ ಎದೆ ಮುಂದೆ ಮಾಡಿ ಸೆಟೆದು ನಿಲ್ಲೋಣವೆ? ಈ ಎರಡು ಅನರ್ಥಗಳಿಗೂ ಪರಿಹಾರ ಆಧ್ಯಾತ್ಮಿಕವಾದ ಅಸಹಕಾರ. ಇದರಲ್ಲಿ ನಿಗ್ರಹ ಬೇಕು. ತ್ಯಾಗ ಬೇಕು . ಆದ್ದರಿಂದಲೇ ಆಧ್ಯಾತ್ಮಿಕ ಎನ್ನುತ್ತೇನೆ. ಯಾರು ಹೇಗಾದರೂ ಇರಲಿ, ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಮಟ್ಟಿಗೆ ತಾನು ತ್ಯಾಗ ಮಾಡಬೇಕು. ಈ ಕರ್ತವ್ಯ ಪಾಲನೆಯ ಹಿಂದೆ ಧಾರ್ಮಿಕ ಶಪಥ ಬಹಳ ಮಹತ್ವದ್ದು. ಎಲ್ಲ ಧರ್ಮಗಳಲ್ಲಿಯೂ ಇದು ಇದೆ. ನಾನು ಅಭ್ಯಾಸ ಮಾಡಿದ್ದೇನೆ. ಎಲ್ಲಕ್ಕೂ ಪ್ರತಿಫಲ ಇದ್ದೇ ಇದೆ.

ಇದನ್ನು ಆಧ್ಯಾತ್ಮಿಕ ಸಾಧನೆ ಎನ್ನಲು ಇದಕ್ಕೆ ಯಾರ ಅಪ್ಪಣೆಯೂ ಬೇಕಾಗಿಲ್ಲ. ತನ್ನ ಅಂತರಂಗದ ಅಪ್ಪಣೆ ಆದರೆ ಸಾಕು. ಇದು ಆಧ್ಯಾತ್ಮಕ, ಏಕೆಂದರೆ ರಾಷ್ಟ್ರದ ಉತ್ತಮೋತ್ತಮ ಗುಣವನ್ನು ಮೇಲಕ್ಕೆ ತರುತ್ತದೆ; ಒಬ್ಬ ವ್ಯಕ್ತಿ ಅದನ್ನು ಮಾಡಿದರೆ ವೈಯಕ್ತಿಕ ಗೌರವಕ್ಕೆ ದಾರಿ ಮಾಡುತ್ತದೆ. ಇಡೀ ರಾಷ್ಟ್ರವೇ ಮಾಡಿದರೆ ರಾಷ್ಟ್ರದ ಗೌರವ ಹೆಚ್ಚುತ್ತದೆ. ಆದ್ದರಿಂದಲೇ ನಮ್ಮ ದೇಶ ನಾಯಕರು ಎಷ್ಟು ಜನ ವಿರೋಧಿಸಿದರೂ ಈ ಅಸಹಕಾರದ ಆಯುಧವನ್ನು ಅತ್ಯಂತ ವ್ಯಾವಹಾರಿಕ, ದೋಷ ರಹಿತ ಎಂದಿದ್ದೇನೆ.

ಅಸಹಕಾರದ ನಾಲ್ಕು ಅಂಶ

ಮಂಗಳೂರಿನ ಜನರ ಮುಂದೆ ನಿಂತು ನಾವು ನೀಡುತ್ತಿರುವ ಈ ಅಮೂಲ್ಯ ಕೊಡುಗೆಯನ್ನು ಸ್ವೀಕರಿಸಿ ಎಂದು ಬೇಡುತ್ತಿದ್ದೇವೆ. ನನ್ನ ಭಾಷಣ ಕೇಳಿ ಇಸ್ಲಾಂ ಸಂರಕ್ಷಣೆಗೆ, ಅಸಹಕಾರಕ್ಕಿಂತ ಬೇರೆ ಉಪಾಯ ಇಲ್ಲ ಎಂದೆನಿಸಿದರೆ ಇದನ್ನು ಒಪ್ಪಿಕೊಳ್ಳಿ . ನಿಮ್ಮ ಮುಂದೆ ಎಷ್ಟೋ ಸಮಸ್ಯೆಯನ್ನು ಮಂಡಿಸುತ್ತಾರೆ. ನಿಮ್ಮ ನಾಯಕರಲ್ಲಿ ಒಮ್ಮತ ಇಲ್ಲ. ಆದರೆ ನೀವು ಗೊಂದಲದಲ್ಲಿ ಬೀಳಬೇಡಿ. ಈ ಪ್ರಪಂಚದಲ್ಲಿ ಧಾರ್ಮಿಕ ಆಗಲಿ, ಆಧ್ಯಾತ್ಮಿಕ ಆಗಲಿ– ಯಾವುದೇ ಹೋರಾಟಕ್ಕಾಗಲಿ ಈ ಪರಿಮಿತಿ ಅಗತ್ಯ. ಇದು ತುಂಬಾ ಹಠಾತ್ತಾಗಿ ಬರುತ್ತಿದೆ.

ಹೃದಯ ಸರಿಯಾಗಿ ಶ್ರುತಿಗೂಡದಿದ್ದರೆ ಮನಸ್ಸು ಗೊಂದಲದಲ್ಲಿ ಬೀಳಬಹುದು. ನಮ್ಮೆಲ್ಲರಲ್ಲೂ ಹೃದಯಕ್ಕೂ ಮನಸ್ಸಿಗೂ ಮೇಳ ಸಂಪೂರ್ಣವಾಗಿ ಇದ್ದರೆ ನಾವೆಲ್ಲರೂ ಪರಿಪೂರ್ಣ ಮನುಷ್ಯರೇ ಆಗಬೇಕು. ನಮ್ಮ ಪತ್ರಿಕೆಗಳಲ್ಲಿ ಬೇಕಾದಷ್ಟು ವಾದ– ವಿವಾದ ನಡೆಯುತ್ತಿದೆ. ಅದೇನೇ ಇರಲಿ, ದೊಡ್ಡ ಪ್ರಮಾಣದಲ್ಲಿ ಹಿಂಸಾರಹಿತವಾಗಿ ಈ ಚಳವಳಿ ನಡೆಸಿದರೆ ಬಹಳ ಪರಿಣಾಮ ಆಗುವುದರಲ್ಲಿ ಸಂದೇಹ ಇಲ್ಲ. ಇದರಲ್ಲಿ ಬಹಳ ತೊಂದರೆ ಇದೆ ನಾನು ಬಲ್ಲೆ. ಅದನ್ನು ಗೆಲ್ಲುವುದೇ ನಮ್ಮ ವಿಶೇಷ. ಹಿಂಸೆಯನ್ನೂ, ಅಸಹಕಾರದಂಥ ಆಧ್ಯಾತ್ಮಿಕ ಸಾಧನವನ್ನೂ ಒಟ್ಟಿಗೆ ಸೇರಿಸಲಾರೆವು. ನಮ್ಮ ಪ್ರಾಣವನ್ನು ಕೊಡುವ ಸಂದರ್ಭದಲ್ಲಿ ಇತರರ ಪ್ರಾಣವನ್ನು ತೆಗೆದುಕೊಂಡರೆ, ಅದು ನಿಷ್ಕಳಂಕ ತ್ಯಾಗ ಆಗಲಾರದು. ಆದ್ದರಿಂದ ಅಸಹಾಕಾರದ ಪೂರ್ವಸಿದ್ಧತೆಯಾಗಿ, ಸಂಪೂರ್ಣ ಹಿಂಸಾ ಪರಿತ್ಯಾಗ ಅತ್ಯಗತ್ಯ. ನಮ್ಮ ದೇಶದ ಜನರಲ್ಲಿ ನನಗೆ ನಂಬಿಕೆ ಇದೆ. ಅಂತೂ ಭಾರತ ಆತ್ಮತ್ಯಾಗ ಮಾಡದೆ ಏನನ್ನೂ ಗಳಿಸಲಾರದು. ಒಂದು ವೇಳೆ ಈ ದೇಶ ಹಿಂಸೆಯನ್ನು ಬಯಸಿದರೆ ; ಆ ದೇವರು ಹಾಗೆ ಮಾಡದಿರಲಿ – ಸ್ವಾರ್ಥ ತ್ಯಾಗದ ಪಾಠವನ್ನು ಕಲಿಯಲಿಕ್ಕೇ ಬೇಕು . ಇನ್ನೊಂದು ಅತಂಕವನ್ನು ಹೂಡುತ್ತಾರೆ: ನಮ್ಮ ರಾಷ್ಟ್ರದಲ್ಲಿ ಒಗ್ಗಟ್ಟಿಲ್ಲ. ಇದನ್ನು ಕೊಂಚ ಒಪ್ಪಿಕೊಳ್ಳುತ್ತೇನೆ. ಆಗಲೇ ಹೇಳಿದ್ದೇನೆ:

ವ್ಯಕ್ತಿಗಳು ವೈಯಕ್ತಿಕವಾಗಿ, ರಾಷ್ಟ್ರವು ರಾಷ್ಟ್ರೀಯವಾಗಿ ಈ ಮಾರ್ಗವನ್ನು ಅನುಸರಿಸಬಹುದು. ಆದ್ದರಿಂದ ಇಡೀ ರಾಷ್ಟ್ರವೇ ಅಸಹಕಾರವನ್ನು ಅವಲಂಬಿಸದಿದ್ದರೂ ಕೂಡ, ಹಲವರು ವ್ಯಕ್ತಿಗಳು ಅದರಲ್ಲಿ ಯಶಸ್ಸನ್ನು ಸಂಪಾದಿಸಿದರೆ, ಆ ಕೀರ್ತಿ ರಾಷ್ಟ್ರಕ್ಕೂ ಸಲ್ಲುತ್ತದೆ.

ಮೊದಲನೆಯ ಹೆಜ್ಜೆ : ಪ್ರಶಸ್ತಿಗಳ ತ್ಯಾಗ

ಮೊಟ್ಟ ಮೊದಲನೆ ಹೆಜ್ಜೆ ಬಹಳ ಸುಲಭ, ಅದರಲ್ಲಿ ಅಂಥ ತ್ಯಾಗ ಏನೂ ಬೇಕಾಗಿಲ್ಲ. ನಿಮ್ಮ ಖಾನ್ ಬಹದ್ದೂರರು, ರಾವ್ ಸಾಹೇಬರು, ಉಳಿದ ಪ್ರಶಸ್ತಿ ಪಡೆದವರು ತಮ್ಮ ಪ್ರಶಸ್ತಿಗಳನ್ನು ಬಿಟ್ಟುಕೊಟ್ಟರೆ ಅವರಿಗೆ ಇದು ಮಹಾ ತ್ಯಾಗವಲ್ಲ . ಈ ದೇಶಕ್ಕೆ ಮಾತ್ರ ಬಹಳ ದೊಡ್ಡ ಸಜೆ . ಅವರು ಕಳೆದುಕೊಂಡದ್ದು ಏನೂ ಇಲ್ಲ. ಮೂರು ಕಾಸೂ ಕಳೆದು ಕೊಳ್ಳುವುದಿಲ್ಲ. ಆದರೆ ರಾಷ್ಟ್ರದ ಮೆಚ್ಚಿಗೆ ಸಿಗುತ್ತದೆ. ಈ ಮೊದಲ ಹೆಜ್ಜೆಯ ಅರ್ಥ ಏನೋ , ಹಿಂದು ಪತ್ರಿಕೆಯ ಸಂಪಾದಕರು ಕಸ್ತೂರಿ ರಂಗಯ್ಯಂಗಾರ್ಯರೂ ಪ್ರಶಸ್ತಿಗಳ ತ್ಯಾಗ ಅತ್ಯಗತ್ಯ ಎಂದು ಒಪ್ಪಿಕೊಂಡಿದ್ದಾರೆ. ಬಾರತದ ಗೌರವಕ್ಕೆ ಮುಸ್ಲಿಂ ಧರ್ಮಕ್ಕೆ ಧಕ್ಕೆ ತರುವಂತೆ ಕೆಲಸ ಸರಕಾರದಿಂದ ನಡೆದಿದೆ. ಭಾರತದ ಹೃದಯ ಘಾಸಿ ಆಗಿದೆ, ಇನ್ನು ಸರಕಾರ ಕೊಟ್ಟ ಈ ಪ್ರಶಸ್ತಿಗಳನ್ನು ನಾವು ಇಟ್ಟುಕೊಳ್ಳಲಾರೆವು ಎಂದು ಸರಕಾರಕ್ಕೆ ಬರೆದು ತಿಳಿಸಿ, ಅವನ್ನು ಹಿಂದಿರುಗಿಸಿದರೆ ಇದರಿಂದ ಅವರಿಗೊಂದು ಕುರುಡು ಕಾಸೂ ವೆಚ್ಚ ಇಲ್ಲ, ರಾಷ್ಟ್ರಕ್ಕೂ ಇಲ್ಲ. ಆದರೆ ರಾಷ್ಟ್ರದ ಸಂಕಲ್ಪದ ಅತ್ಯಂತ ಪರಿಣಾಮಕಾರಿ ಸಂಕಲ್ಪ ಇದು:

ಎರಡನೆಯ ಹೆಜ್ಜೆ : ಶಾಸನಸಭಾ ಬಹಿಷ್ಕಾರ

ಎರಡನೆಯ ಹೆಜ್ಜೆ ಎಂದರೆ ಎರಡನೆಯ ಕಾರ್ಯಕ್ರಮ. ಶಾಸನ ಸಭಾ ಬಹಿಷ್ಕಾರಕ್ಕೆ ಪ್ರಬಲ ವಿರೋಧ ಇದೆ ಎಂದು ನಾನು ಬಲ್ಲೆ. ಈ ವಿರೋಧವನ್ನು ಸ್ವಲ್ಪ ವಿಶ್ಲೇಷಿಸಿ ನೋಡಿದರೆ ಗೊತ್ತಾಗುತ್ತದೆ. ಈ ಹೆಜ್ಜೆ ತಪ್ಪೂ ಅಲ್ಲ, ಅದು ಅಯಶಸ್ವಿ ಆಗುತ್ತದೆ ಎನ್ನುವ ಹೆದರಿಕೆಯೂ ಇಲ್ಲ. ಆದರೆ ಈ ದೇಶ ಇದನ್ನು ಒಪ್ಪಿಕೊಳ್ಳುತ್ತದೆಯೋ ಇಲ್ಲವೋ ?

ಶಾಸನ ಸಭೆಗಳಿಗೆ ಕಳ್ಳತನದಲ್ಲಿ ನುಸುಳಿಕೊಳ್ಳುತ್ತಾರೆಯೋ ಏನೋ ? ಎಂಬ ಭಾವನೆ ಇದೆ. ಈ ಹೃದಯ ದೌರ್ಬಲ್ಯವನ್ನು ಬಿಡಿ ಎಂದು ಮಂಗಳೂರಿನ ನಾಗರಿಕರನ್ನು

ಬೇಡಿಕೊಳ್ಳುತ್ತೇನೆ. ಮಂಗಳೂರಿನ ಜನ ಮನಸ್ಸು ಮಾಡಿದರೆ ನಿಮ್ಮ ಪ್ರತಿನಿಧಿಯಾಗಿ ಯಾವ ಮಿತವಾದಿಯೂ , ಉಗ್ರವಾದಿಯೂ ಅಥವಾ ಮತ್ತೊಬ್ಬನೂ ಶಾಸನ ಸಭೆಗೆ ಹೋಗಲಾರ. ಇದರಲ್ಲಿಯೂ ಒಂದು ಕಾಸಿನ ತ್ಯಾಗವೂ ಇಲ್ಲ, ಗೌರವದ ನಷ್ಟವೂ ಇಲ್ಲ. ಇಡೀ ರಾಷ್ಟ್ರಕ್ಕೆ ಇದರಿಂದ ಗೌರವ ಹೆಚ್ಚುತ್ತದೆ. ಈ ಒಂದು ಹೆಜ್ಜೆಯನ್ನು ಹಾಕಿದರೆ ಸಾಕು ನಮಗೆ ಒಳ್ಳೆ ಫಲ ಸಿಗುತ್ತದೆ. ಇದರಲ್ಲಿ ತೀವ್ರವಾದಿಗಳೂ ನಾವೂ ಎಲ್ಲರೂ ಒಗ್ಗಟ್ಟಾಗಬೇಕು. ಒಂದು ವೇಳೆ ಎಲ್ಲರೂ ಬರಲಿಲ್ಲ, ನಾವು ವೈಯಕ್ತಿಕವಾಗಿ ಅಂಜಬೇಕಾದ್ದಿಲ್ಲ . ಮುಂದಿನ ಪ್ರಗತಿಯ ಹಾದಿಗೆ ಆ ವ್ಯಕ್ತಿ ತಳಹದಿ ಹಾಕಿದ ಹಾಗೆ ಆಗುತ್ತದೆ. ತನ್ನ ಕೈಯಿಂದಾದರೂ ಈ ಸರಕಾರದ ಪಾಪವನ್ನು ತೊಳೆದುಕೊಂಡ ಸಮಾಧಾನ ಅವನಿಗಿರುತ್ತದೆ.

ಮೂರನೆಯ ಹೆಜ್ಜೆ : ವಕೀಲಿ ಬಹಿಷ್ಕಾರ

ಒಂದು ಕಾಲಕ್ಕೆ ನಾನು ವಕೀಲ ಆಗಿದ್ದೆ. ಅದರ ಬಗ್ಗೆ ಈಗ ಹೇಳುತ್ತೇನೆ. ಅವರೆಲ್ಲರೂ ಸರಕಾರಕ್ಕೆ ತಮ್ಮ ಸಹಕಾರ ನೀಡದೆ ಹಿಂದೆ ಸರಿದು, ತಮ್ಮ ವಕೀಲಿಯನ್ನು ಬಿಟ್ಟುಕೊಡಬೇಕು ಎಂದು ಕೇಳಿದ್ದೇನೆ. ಈ ಸರಕಾರದಲ್ಲಿ ಶುದ್ಧ ನ್ಯಾಯ ಇಲ್ಲ. ನಮ್ಮ ರಾಷ್ಟ್ರಕ್ಕಂತೂ ದೊರಕುತ್ತಿಲ್ಲ. ಒಬ್ಬನೇ ಒಬ್ಬ ವಕೀಲ ಈ ಹೆಜ್ಜೆ ಹಾಕಿದರೆ ಅದು ಆತನಿಗೆ ಒಳ್ಳೆಯದೇ. ಎಲ್ಲರೂ ಹಾಕಿದರೆ ರಾಷ್ಟ್ರಕ್ಕೇ ಒಳ್ಳೆಯದು.

ನಾಲ್ಕನೆಯ ಹೆಜ್ಜೆ: ಶಾಲಾ ಬಹಿಷ್ಕಾರ

ಸರಕಾರೀ ಶಾಲೆಗಳ, ಸರಕಾರದ ಸಹಾಯ ಪಡೆವ ಶಾಲೆಗಳ ಮಾತನ್ನು ಹೇಳುತ್ತೇನೆ. ನನ್ನ ಮಕ್ಕಳು ಸರಕಾರಿ ಶಾಲೆಗಳಿಗೆ ಹೋಗುತ್ತ ನಾನು ಮಾತ್ರ ಅಸಹಕಾರವನ್ನು ನಡೆಸಬೇಕು . ಇದು ಸರಿಯಾದ ಹೆಜ್ಜೆಯಲ್ಲ. ಸರಕಾರಕ್ಕೆ ನಾವು ಯಾವ ಬಗೆಯ ಸಹಕಾರವನ್ನೂ ಕೊಡಬಾರದು.

ಅದರಿಂದ ಯಾವ ಬಗೆಯ ಸಹಾಯವನ್ನೂ ಪಡೆಯಬಾರದು. ಇದು ಈ ಚಳವಳಿಯ ಉದ್ದೇಶ. ಅಸಹಕಾರದ ಉಳಿದ ಕಾರ್ಯಕ್ರಮಗಳೂ ಮುಖ್ಯವೇ. ಆದರೆ ಅವನ್ನೆಲ್ಲ ಹೇಳಿ ನಿಮ್ಮ ಸಹನೆಯನ್ನು ಪರೀಕ್ಷೆಗೆ ಗುರಿ ಮಾಡುವುದಿಲ್ಲ. ನಾಲ್ಕು ಅಂಶಗಳನ್ನು ಮಾತ್ರ ನಿಮ್ಮ ಮುಂದೆ ಇಟ್ಟಿದ್ದೇನೆ . ಇದರಲ್ಲಿ ಯಾವುದೇ ಒಂದನ್ನು ಭಾಗವನ್ನು ಅನುಸರಿಸಿದರೂ ಸಾಕು, ಅದರಲ್ಲಿ ಯಶಸ್ಸು ಅಡಗಿದೆ. ಸ್ವದೇಶಿಯನ್ನೂ ಅಸಹಕಾರದ ಅಂಗವಾಗಿ ಹೇಳುತ್ತಿದ್ದೇನೆ. ನಮ್ಮಲ್ಲಿರುವ ತ್ಯಾಗಬುದ್ಧಿಯ ದ್ಯೋತಕ ಅದು. ಪ್ರತಿಯೊಬ್ಬ ಗಂಡಸೂ ಹೆಂಗಸೂ ಮಗುವೂ ಕೂಡ ಸ್ವದೇಶಿಯನ್ನು ಅನುಸರಿಸಬಹುದು.

ಮಂಗಳೂರಿನಿಂದ ಮುಂದೆ ಸೇಲಂ ಮಾರ್ಗವಾಗಿ ಗಾಂಧೀಜಿ ಬೆಂಗಳೂರಿಗೆ ಬಂದರು. ಬೆಂಗಳೂರಿನಲ್ಲಿ ಆ ದಿನ ನಡೆದ ಸಭೆ ಅತ್ಯಂತ ವಿಲಕ್ಷಣ. "ಇಲಿಯಂಥ ಮನುಷ್ಯನನ್ನು ಬೆಟ್ಟದಂಥ ನಾನು ಹೊತ್ತುಕೊಂಡು ಬಂದಿದೇನೆ' ಎನ್ನುತ್ತ ಭೀಮಕಾಯ ಶೌಕತ್ ಆಲಿ ಗಾಂಧೀಜಿಯನ್ನು ವೇದಿಕೆಯ ಮೇಲೆ ಇಳಿಸಿದರು. ಸೇಲಂನಿಂದ ನೇರಾಗಿ ಮೋಟಾರು ಸಭೆಯ ಬಳಿಗೇ ಬಂದಿತು. ಅವತ್ತು ಮಳೆಯೋ ಮಳೆ. ರಪ ರಪ ಮಳೆ ಹೊಡೆಯುತ್ತಿದ್ದರೂ ಆ ಮಳೆಯಲ್ಲಿಯೇ ಸಭೆ ನಡೆಯಿತು. ಯಾರೂ ಛತ್ರಿಯನ್ನೇ ಬಿಚ್ಚಲಿಲ್ಲ. ಸ್ವಯಂ ಸೇವಕರು ಬಿಚ್ಚಗೊಡಲೂ ಇಲ್ಲ. ಈದ್ಗಾ ಕಂಟೋನ್ಮೆಂಟ್ ಪ್ರದೇಶದಲ್ಲಿ ಈ ಸಭೆ ನಡೆಯಿತು. ಸಭೆಗೆ ಬಂದಿದ್ದವರೆಲ್ಲ ಮಳೆಯಲ್ಲಿ ನೆನೆದು ಮುದ್ದೆ ಮುದ್ದೆಯಾಗಿ ಮನೆಗೆ ಹೋದರು. ಗಾಂಧೀಜಿಯ ಭಾಷಣ ಹೇಗಿತ್ತು? ಏನು ಹೇಳಿದರು ಎಂಬುದು ಯಾರಿಗೂ ನೆನಪು ಇಲ್ಲ.

ಆದರೂ ' ದಿ ಹಿಂದೂ ' ಪತ್ರಿಕೆಯಲ್ಲಿ ಬಂದ ಒಂದು ಸುದ್ದಿಯ ಆಧಾರದ ಮೇಲೆ ಗಾಂಧೀಜಿಯ "ಸಮಸ್ತ ಕೃತಿ ಸಂಗ್ರಹ " (Collected Works of Gandhi) ಇಷ್ಟು ಇದೆ: ಗಾಂಧೀಜಿ ಉರ್ದು ಭಾಷೆಯಲ್ಲಿ ಮಾತನಾಡಿದರು. ತಮಗೆ ಎದ್ದು ನಿಂತುಕೊಳ್ಳಲು ಆಗದುದಕ್ಕೆ ಕ್ಷಮೆ ಬೇಡಿ, ಕುಳಿತೇ ಮಾತನಾಡಿದರು. ರಾಷ್ಟ್ರದ ಎರಡು ಮುಖ್ಯ ದೂರುಗಳನ್ನು ಮಂಡಿಸುತ್ತ ಅಸಹಕಾರದ ಅಂಶಗಳನ್ನು ಒಂದೊಂದಾಗಿ ವಿವರಿಸಿದರು. ಎಲ್ಲ ಕಾಲಕ್ಕೂ ಭಾರತದ ಜನ ಈ ಸರಕಾರದ ಯಂತ್ರದ ಗುಲಾಮರಾಗಿ ಇರಬೇಕೆ? ಎಷ್ಟು ದಿನ ಸರಕಾರದ ನ್ಯಾಯಾಲಯ ಗಳಿಗೆ ಹೋಗುತ್ತಿರಬೇಕು. ಸರಕಾರಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳಿಸಿ, ಅವನ್ನು ತುಂಬ ಬೇಕೇ ?

ಶಾಸನ ಸಭೆಗಳಿಗೆ ತಮ್ಮ ಜನ ಇನ್ನೂ ಹೋಗಬೇಕೇ ? ಈ ಬಗೆಯ ಪರಿಸ್ಥಿತಿ ಇರುವವರೆಗೆ ಹೂ–ಹಾರ ತಮಗೆ ಯಾವುದೂ ಬೇಡ ಎಂದರು. ಈ ಅನ್ಯಾಯಗಳನ್ನೂ ಬಗೆಹರಿಸುವವರೆಗೆ ಸರಕಾರಕ್ಕೆ ಯಾವ ಬಗೆಯಲ್ಲಿ ಸಹಕಾರ ಕೊಟ್ಟರೂ ಅದು ನಮ್ಮ ಗಂಟಲಿಗೇ ಗಾಳ ಎಂದರು. ಇತ್ತ ಪವಿತ್ರ ಕೊರಾನಿನ ಆಯತೆಗಳನ್ನು ಓದುತ್ತ, ಅತ್ತ ಇಸ್ಲಾಮಿಗೆ ಧಕ್ಕೆ ತಂದಂಥ ಸರಕಾರಕ್ಕೆ ಸಹಕಾರ ನೀಡುವುದು ಹೇಗೆ ಸಾಧ್ಯ? ಖಿಲಾಫತ್ತಿಗಾಗಿ ಕತ್ತಿ ಎತ್ತುವುದು ಮುಸ್ಲಿಮರು ಧಾರ್ಮಿಕ ಕರ್ತವ್ಯ ಎಂದುಕೊಳ್ಳುತ್ತಾರೆ. ತಾವು ಯಾವಾಗಲೂ ಕತ್ತಿಯ ವಿದ್ಯೆಗೆ ವಿರುದ್ಧ .

ಅಸಹಕಾರ ಪವಿತ್ರ ಕೊರಾನಿಗೆ ವಿರುದ್ಧ ಅಲ್ಲ. ಪೈಗಂಬರರೇ ಅಸಹಕಾರವನ್ನು ಅವಲಂಬಿಸಿದ್ದರೆಂದು ಮೌಲಾನಾ ಅಬ್ದುಲ್ ಬಾರಿ ತಮಗೆ ಹೇಳಿದ್ದಾರೆ. ಅಲ್ಲದೆ, ಕತ್ತಿ ಹಿರಿಯಲು ಈ ದೇಶ ಅಷ್ಟು ಬಲಶಾಲಿಯಲ್ಲ. ಹೀಗಾಗಿ ಅಸಹಕಾರವನ್ನೇ ಎಲ್ಲರೂ ಅವಲಂಬಿಸಬೇಕಾಗುವುದು. ಕತ್ತಿಯನ್ನು ಎತ್ತುವುದರಲ್ಲಿ ತ್ಯಾಗ ಇದೆ. ಆದರೆ ಅಸಹಕಾರದಲ್ಲಿ ತೋರಬೇಕಾದ ತ್ಯಾಗ ಅದಕ್ಕೂ ಹೆಚ್ಚಿನದು. ಇಷ್ಟಾದರೂ ಒಂದು ಪುಟ್ಟ ಮಗು ಕೂಡ ಅಸಹಕಾರ ಮಾಡಬಹುದು. ಈ ಮಾತು ಮೌಲಾನಾ ಶೌಕತ್ ಆಲಿಗೂ ಅರ್ಥವಾಗಿದೆ. ಯಾರೂ ಪೀರ್ ಮಹಬೂಬ್ ಷಾ ಮಾಡಿದ ಕೆಲಸವನ್ನು ಮಾಡಬಾರದು (ಪೀರ್ ಮಹಬೂಬ್ ಷಾ ಸಿಂಧದ ಒಬ್ಬ ಪೀರರು. ಅವರನ್ನು ರಾಜದ್ರೋಹಕ್ಕಾಗಿ ಬಂಧಿಸಲಾಗಿತ್ತು.

ಎರಡೇ ವರ್ಷ ಸಾದಾ ಶಿಕ್ಷೆ ಕೊಟ್ಟಿದ್ದರೂ ಅವರು ಅದನ್ನು ತಡೆದುಕೊಳ್ಳಲಾಗಲಿಲ್ಲ. ಒಂದು ಒಪ್ಪಿಗೆ ಚೀಟಿ ಬರೆದುಕೊಟ್ಟು ಹೊರಗೆ ಬಂದರು). ಭಾರತೀಯರಾದ ನಾವು ನಮ್ಮ ಸ್ವಭಾವದಿಂದ ಸಂಪ್ರದಾಯಗಳಿಂದ ಪೀರರನ್ನೂ ಪೂಜಾರಿಗಳನ್ನು ದುರ್ಬಲಗೊಳಿಸಿದ್ದೇವೆ. ಆದ್ದರಿಂದ ತಾವು ಅಪೇಕ್ಷಿಸುವ ತ್ಯಾಗವನ್ನು ಪೀರ್, ಪೂಜಾರಿಗಳಿಂದ ನಿರೀಕ್ಷಿಸುವುದಿಲ್ಲ. ತಮ್ಮ ದಕ್ಷಿಣ ಆಫ್ರಿಕದ ಹೋರಾಟದಲ್ಲಿಯೂ ಮೊಟ್ಟ ಮೊದಲು ಬಂದ ಸಹಕಾರ್ಯಕರ್ತರಲ್ಲಿ ಒಬ್ಬ ಪೂಜಾರಿ ಇದ್ದ. ಆದರೆ ಆ ಹೋರಾಟಕ್ಕೆ ಸಂದ ಯಶಸ್ಸು ಜನತೆಯಿಂದ ಬಂತು.

■



ಗಾಂಧಿ ಸಿನಿಮಾಗಳ
ಅಪರೂಪದ ಮ್ಯೂಸಿಯಂ

– **ಎನ್.ಜಗನ್ನಾಥ ಪ್ರಕಾಶ್**

ಮೋಹನದಾಸ ಕರಮಚಂದ ಗಾಂಧಿ ಪ್ರಪಂಚ ಕಂಡ ಪ್ರಖ್ಯಾತ ಸಮಾಜ ಪರಿವರ್ತಕರು. ಸತ್ಯಾಗ್ರಹ, ಉಪವಾಸ ಅಸಹಯೋಗ, ಅಹಿಂಸೆ ಎಂಬ ಅಸ್ತ್ರಗಳನ್ನು ಜಗತ್ತಿಗೆ ಕೊಟ್ಟ ಗಾಂಧೀಜಿ ಜನಮಾನಸದಲ್ಲಿ ಸೇರಿಹೋದವರು. ಮಾತು–ಬರವಣಿಗೆಯಿಂದ ಜನತೆಯೊಡನೆ ಸಂಭಾಷಿಸುತ್ತಿದ್ದ ಬಾಪು ಅವರಿಗೆ ಆಗಷ್ಟೇ



ಆವಿಷ್ಕಾರಗೊಂಡಿದ್ದ ಕಲೆ–ವಿಜ್ಞಾನ ಒಳಗೊಂಡ ಸಂವಹನ ಮಾಧ್ಯಮ ಚಲನಚಿತ್ರದ ಬಗೆಗೆ ಒಲವಿರಲಿಲ್ಲ.


ಭಾರತದಲ್ಲಿ ಸ್ವಾತಂತ್ರ್ಯ ಹೋರಾಟದ ಕಣಕ್ಕೆ ಇಳಿಯುವ ಮೊದಲೇ ದಕ್ಷಿಣ ಆಫ್ರಿಕಾದಲ್ಲಿ ತಮ್ಮ ಅಸ್ತ್ರಗಳನ್ನು ಉಪಯೋಗಿಸಿ ಯಶಕಂಡು ಮಹಾತ್ಮ ಎನ್ನಿಸಿಕೊಂಡಿದ್ದ ಗಾಂಧೀಜಿ ಪ್ರಭಾವಶಾಲಿ ಸಂವಹನ ಮಾಧ್ಯಮ ಸಿನಿಮಾದಿಂದ ದೂರವಿದ್ದರೂ ಸಿನಿಮಾ ಅವರನ್ನು ಹಿಂಬಾಲಿಸುತ್ತಲೇ ಇತ್ತು. ಈಗಲೂ ಹಿಂಬಾಲಿಸುತ್ತಿದೆ.

ತಮ್ಮ ಜೀವಿತಾವಧಿಯಲ್ಲಿ ಒಂದೆರಡು ಸಿನಿಮಾ, ಅದೂ ಕೆಲವು ರೀಲುಗಳನ್ನು ಮಾತ್ರ ಮಹಾತ್ಮ ಗಾಂಧಿ ನೋಡಿದ್ದರು. ಆದರೆ, ಅವರ ಬಗ್ಗೆ, ಅವರ ಹೋರಾಟ–ಆದರ್ಶದ ಕುರಿತು ಬಂದಿರುವ ಚಲನಚಿತ್ರಗಳು ಅಸಂಖ್ಯ. ಜಗತ್ತಿನ ಅನೇಕ ಭಾಷೆಗಳ ಚಿತ್ರಗಳಲ್ಲಿ ಗಾಂಧಿ ಮೂಡಿಬಂದಿರುವುದು ವಿಶೇಷ. ಚಲನಚಿತ್ರಗಳನ್ನು ವಿರೋಧಿಸುತ್ತಿದ್ದ ಗಾಂಧಿ ಅವರ ಕುರಿತು ಹಲವು ಹತ್ತು ಚಿತ್ರಗಳು ತಯಾರಾಗಿರುವುದು ಆಸಕ್ತಿಕರ ವಿಷಯ.

ಜಗತ್ತಿನುದ್ದಕ್ಕೂ ಅನೇಕ ಬಗೆಯ ಪ್ರಭಾವಗಳನ್ನು ಬೀರಿರುವ ಬಾಪು, ಚಿತ್ರಜಗತ್ತಿನ ಮೇಲೂ ತಮ್ಮ ಪ್ರಭಾವ ಬೀರಿದ್ದಾರೆ.

ಪ್ರಪಂಚದಲ್ಲಿ ಅತಿ ಹೆಚ್ಚು ಚಲನಚಿತ್ರಗಳನ್ನು ತಯಾರಿಸುವ ರಾಷ್ಟ್ರವೆಂದು ಹೆಸರು ಮೂಡಿರುವ ಭಾರತೀಯ ಚಿತ್ರರಂಗಕ್ಕೆ ನೂರು ವರ್ಷ ಸಂದಿರುವ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ಭಾರತದ ಪ್ರಮುಖ ಚಲನಚಿತ್ರ ತಯಾರಿಕಾ ಚಟುವಟಿಕೆಯ ತಾಣ ಮುಂಬೈನಲ್ಲಿ ರೂಪಿಸಿರುವ ಮ್ಯೂಸಿಯಂನಲ್ಲಿ ಗಾಂಧಿ ಹಾಗೂ ಚಲನಚಿತ್ರ ಸಂಗತಿ ಕುರಿತಂತೆ ಪ್ರತ್ಯೇಕ ವಿಭಾಗವೇ ಇದೆ. ಇಲ್ಲಿ ಗಾಂಧೀಜಿ ತಿರುಗಿಸುತ್ತಿದ್ದ ರಾಟೆಯೂ ಇದೆ. ಬಾಪು ಅವರನ್ನು ಕುರಿತು ತಯಾರಾದ ಚಲನಚಿತ್ರಗಳನ್ನು ಪ್ರದರ್ಶಿಸುತ್ತಿದ್ದ ಪ್ರೊಜೆಕ್ಟರ್ ಪ್ರತಿಕೃತಿಯೂ ಇದೆ.

ಮಹಾತ್ಮ ಗಾಂಧಿ ಅವರನ್ನು



ಕುರಿತಂತೆ ಮೊಟ್ಟಮೊದಲ ಸಾಕ್ಷ್ಯಚಿತ್ರವನ್ನು ನಿರ್ಮಿಸಿದವರು ಮದ್ರಾಸ್ನ ಪತ್ರಕರ್ತ ಎ.ಕೆ. ಚೆಟ್ಟಿಯಾರ್. ಗಾಂಧಿ ಭೇಟಿ ನೀಡಿದ್ದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದ ಸ್ಥಳಗಳಿಗೆ ಹೋಗಿ ಚಿತ್ರಿಕೆಗಳನ್ನು, ಮಾಹಿತಿಯನ್ನು ಏಕಾಂಗಿಯಾಗಿ ಸಂಗ್ರಹಿಸಿ ಅಪಾರ ಹಣ ವ್ಯಯಿಸಿದ್ದ ಚೆಟ್ಟಿಯಾರ್ ಅವರ 'ಮಹಾತ್ಮ ಗಾಂಧಿ' ಸಾಕ್ಷ್ಯಚಿತ್ರ ಭಾರತ ಸ್ವಾತಂತ್ರ್ಯ ಪಡೆಯುವ ಮುನ್ನ, ಬಾಪೂ ಬದುಕಿರುವಾಗಲೇ ಬಿಡುಗಡೆಯಾಯಿತು.

ನಿಖರವಾದ ಮಾಹಿತಿ, ಉತ್ತಮ ಚಿತ್ರಕಥೆ, ಒಳ್ಳೆಯ ಸಂಗೀತ, ಗೀತೆಗಳು, ಛಾಯಾಗ್ರಹಣ ಇದ್ದ ಎ.ಕೆ. ಚೆಟ್ಟಿಯಾರ್ ಅವರ 'ಮಹಾತ್ಮ ಗಾಂಧಿ' ಸಾರ್ವಜನಿಕವಾಗಿ ಬಿಡುಗಡೆಯಾದರೂ (1940ರ ಆಗಸ್ಟ್ 23) ಅದರ ಪ್ರತಿ ಈಗ ಅಲಭ್ಯ. ಸಾಕ್ಷ್ಯಚಿತ್ರದ ಒಂದೆರಡು ತುಣುಕುಗಳಷ್ಟೆ ಇವೆ. ಇದರ ನಿರ್ಮಾಣಕ್ಕಾಗಿ ಪಟ್ಟ ಪಡಿಪಾಟಲಿನ ಬಗ್ಗೆ ಚೆಟ್ಟಿಯಾರ್ ಅವರೇ ಧಾರಾವಾಹಿಯಾಗಿ ಬರೆದಿದ್ದು, ಆ ಮಾಹಿತಿಯಿಂದ ಮಾತ್ರ ಈ ಸಾಕ್ಷ್ಯಚಿತ್ರ ಜೀವಂತವಾಗಿದೆ. ಅಟೆನ್ಬರೊ ಅವರ 'ಗಾಂಧಿ' ಸಿನಿಮಾ ಬಿಡುಗಡೆಯಾಗುವವರೆಗೂ ಅನೇಕ ಭಾರತೀಯ ಭಾಷೆಗಳು ಹಾಗೂ ಆಂಗ್ಲ ಭಾಷೆಯಲ್ಲೂ ಸಿದ್ಧವಾಗಿ ಪ್ರದರ್ಶನಗೊಂಡ ಸಾಕ್ಷ್ಯಚಿತ್ರ ಇದಾಗಿತ್ತು.


ಭಜನೆ, ಗೀತಗಾಯನ ಇಷ್ಟಪಡುತ್ತಿದ್ದ ಬಾಪೂಜಿ ಕತ್ತಲಿನಲ್ಲಿ ಪರದೆ ಮೇಲೆ ಮೂಡುತ್ತಿದ್ದ ಸಿನಿಮಾವನ್ನು ಇಷ್ಟಪಟ್ಟಿರಲಿಲ್ಲ. ಇದನ್ನು 'ಹರಿಜನ' ಪತ್ರಿಕೆಯಲ್ಲಿ ಕಾರಣಗಳ ಸಹಿತ ಬರೆದಿದ್ದರು. ವಿಜಯ ಭಟ್ ಅವರ ಹಿಂದಿ ಚಿತ್ರ 'ರಾಮರಾಜ್ಯ'ದ ಕೆಲ ರೀಲುಗಳನ್ನು ಗಾಂಧಿ ನೋಡಿದ್ದರು. ಅವುಗಳ ಪೋಸ್ಟರ್ಗಳು, ವಿಶ್ವವಿಖ್ಯಾತ ನಟ ಚಾರ್ಲಿ ಚಾಪ್ಲಿನ್ ಅವರೊಡನೆ ಆಗಿದ್ದ ಭೇಟಿ, ನಂತರ ಚಾಪ್ಲಿನ್ ತಯಾರಿಸಿದ ಮಾರ್ಡನ್ ಟೈಮ್ಸ್ ಛಾಯಾಚಿತ್ರಗಳು, ಬಾಪೂಜಿ ಅವರ ತತ್ವಾದರ್ಶಗಳನ್ನು ಒಳಗೊಂಡ ಚಲನಚಿತ್ರಗಳ ಮಾಹಿತಿ, ಉತ್ತಮ ಛಾಯಾಚಿತ್ರಗಳು, ಸಿನಿಮಾ ಕುರಿತು ಬಾಪೂಜಿ ಬರೆದ ಬರಹಗಳಿರುವ ನಿಯತಕಾಲಿಕೆಗಳು ಎಲ್ಲವೂ ಇಲ್ಲಿ ನೋಡಲು ಸಿಗುತ್ತವೆ.


ಗಾಂಧಿ ಹಾಗೂ ಚಲನಚಿತ್ರದ ನಡುವಿನ ಸಂಬಂಧವನ್ನು ವಿವರವಾಗಿ ತಿಳಿಹೇಳುವ ಈ ಪ್ರದರ್ಶನಾಂಗಣ ಮಕ್ಕಳಿಗೆ ಅಚ್ಚುಮೆಚ್ಚು.

ಚಿತ್ರಗಳು: ಎಸ್. ವಿಶ್ವೇಶ್ವರಪ್ಪ । (ಆಕರ : ಪ್ರಜಾವಾಣಿ 15.10.2023)

■







ಗಾಂಧೀಜಿ ಮತ್ತು ನಾರಾಯಣ ಗುರು

ಜಾತಿ ವ್ಯವಸ್ಥೆ, ಮತಾಂತರ, ಸ್ವಾತಂತ್ರ್ಯ ಮೊದಲಾದ ವಿಷಯಗಳ ಬಗ್ಗೆ ಗಾಂಧೀಜಿಯವರಿಗೆ ಗೊಂದಲಗಳಿರಲಿಲ್ಲವೇ? ಖಂಡಿತ ಇತ್ತು.

ಪ್ರಾರಂಭದ ದಿನಗಳಲ್ಲಿ ಮತಾಂತರವನ್ನು ಬಲವಾಗಿ ವಿರೋಧಿಸಿದ್ದ ಗಾಂದೀಜಿ ಕೊನೆದಿನಗಳಲ್ಲಿ ಅಂತರ್ ಜಾತಿ ವಿವಾಹಗಳ ಪರವಾಗಿ ವಾದಿಸಿರಲಿಲ್ಲವೇ? ಗಾಂಧೀಜಿ ಇನ್ನಷ್ಟು ದಿನ ಬದುಕಿದ್ದರೆ ಈ ಬದಲಾವಣೆಯ ಪ್ರಕ್ರಿಯೆ ಎಲ್ಲಿ ಕೊನೆಗೊಳ್ಳುತ್ತಿತ್ತೋ ಗೊತ್ತಿಲ್ಲ.

ವೈಕಂ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ಬಂದಿದ್ದ ಮಹಾತ್ಮಗಾಂಧೀಜಿ 1925ರ ಮಾರ್ಚ್ ತಿಂಗಳಲ್ಲಿ ಶಿವಗಿರಿಯಲ್ಲಿದ್ದ ನಾರಾಯಣ ಗುರುಗಳನ್ನು ಭೇಟಿ ಮಾಡುತ್ತಾರೆ. ಅವರ ಸಂಭಾಷಣೆಯಲ್ಲಿ ಗಾಂಧಿ ಪ್ರಶ್ನೆಗೆ ಗುರುಗಳು ನೀಡಿರುವ ಉತ್ತರ ಜಾತಿ ವ್ಯವಸ್ಥೆ ಬಗ್ಗೆ ಗಾಂಧೀಜಿಯವರಿಗಿದ್ದ ಗೊಂದಲ ಮತ್ತು ನಾರಾಯಣ ಗುರುಗಳಿದ್ದ ಸ್ಪಷ್ಟತೆ ಗೊತ್ತಾಗುತ್ತದೆ.

ತಮ್ಮ ಮಾತುಕತೆಯ ಕೊನೆಯಲ್ಲಿ ಗಾಂಧೀಜಿಯವರು, ಆಶ್ರಮದ ಎದುರಿಗಿದ್ದ ಮಾವಿನ ಮರವನ್ನು ತೋರಿಸುತ್ತಾ "ಮರದಲ್ಲಿ ಭಿನ್ನ ಆಕಾರಗಳ ಎಲೆಗಳಿರುವಂತೆ ಸಮಾಜದಲ್ಲಿ ಜಾತಿ ವ್ಯವಸ್ಥೆ ಸಹಜವಾದುದಲ್ಲವೇ? ಎಂದು ಕೇಳುತ್ತಾರೆ. (ಈ ಪ್ರಶ್ನೆಯನ್ನು ಗುರುಗಳನ್ನು ಕೆಣಕಲೆಂದು ಕೇಳಿದ್ರಾ, ಇಲ್ಲವೇ ಪ್ರಶ್ನೆ ಸಹಜವಾದ ಅವರ ಗೊಂದಲದಿಂದ ಮೂಡಿಬಂದಿತ್ತೇ?, ಗೊತ್ತಿಲ್ಲ)

ಇದಕ್ಕೆ ನಗುತ್ತಲೇ ಉತ್ತರಿಸಿದ ನಾರಾಯಣ ಗುರುಗಳು " ಭಿನ್ನ ಆಕಾರದ ಎಲೆಗಳಿರಬಹುದು, ಆದರೆ ಅವುಗಳನ್ನು ಸೇರಿಸಿ ಜಜ್ಜಿದರೆ ಅದರಿಂದ ಹೊರಡುವ ರಸದ ರುಚಿ ಒಂದೇ ಅಲ್ಲವೇ? ಎನ್ನುತ್ತಾರೆ.

ಮತಾಂತರ ಎನ್ನುವುದು ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಪರಿಣಾಮಕಾರಿ ಮಾರ್ಗವೇ? ಎಂಬ ಗಾಂಧೀಜಿ ಪ್ರಶ್ನೆಗೆ ಗುರುಗಳ ಉತ್ತರ ಹೀಗಿತ್ತು:

"ಮತಾಂತರಗೊಂಡವರು ಹೆಚ್ಚಿನ ಸ್ವಾತಂತ್ರ್ಯ ಅನುಭವಿಸುತ್ತಿರುವುದು ನಿಜವಾಗಿರುವ ಕಾರಣ ಆ ರೀತಿಯ ಅಭಿಪ್ರಾಯ ಹೊಂದಿರುವುವರನ್ನು ದೂಷಿಸಲಾಗದು".

"ನಿಮ್ಮ ಅಭಿಪ್ರಾಯ ಆಧುನಿಕ ಭಾರತದ ಜತೆ ಹೊಂದಿಕೊಳ್ಳುತ್ತಿಲ್ಲ. ನಿಮ್ಮಲ್ಲಿ ಈ ರೀತಿಯ ಅಭಿಪ್ರಾಯವಿದ್ದರೆ, ಅಂತಿಮವಾಗಿ ನಮಗೆ ಸ್ವಾತಂತ್ರ್ಯ ಸಿಗಬಹುದು, ಆದರೆ ಸ್ವತಂತ್ರ ಭಾರತ ನಿಮ್ಮ ಕನಸಿನ ಭಾರತ ಆಗಿರುವುದಿಲ್ಲ" ಎಂದೂ ಗುರುಗಳು ಆ ಭೇಟಿಯ ವೇಳೆ ಎಚ್ಚರಿಸಿದ್ದರಂತೆ.

ಇಂತಹ ಭಿನ್ನ ಅಭಿಪ್ರಾಯಗಳು ಅಂಬೇಡ್ಕರ್ ಮತ್ತು ಗಾಂಧೀಜಿಯವರ ನಡುವೆಯೂ ಇತ್ತಲ್ಲವೇ?

ಆದರೆ ಭಿನ್ನಾಭಿಪ್ರಾಯದ ಮೂಲಕವೇ ಇವರೆಲ್ಲರ ವ್ಯಕ್ತಿತ್ವವನ್ನು ಅಳೆಯಲು ಹೊರಟರೆ ಯಾರೂ ನಮಗೆ ದಕ್ಕಲಾರರು. ಎಲ್ಲರನ್ನೂ ಪ್ರತ್ಯೇಕವಾಗಿ ಓದಿ ತಿಳಿದುಕೊಂಡು ನಂತರ ಅವರ ನಡುವಿನ ಭಿನ್ನಾಭಿಪ್ರಾಯಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದರೆ ಎಲ್ಲರೂ ನಮಗೆ ದಕ್ಕಬಹುದೇನೋ?

ಈ ಹಿನ್ನೆಲೆಯಲ್ಲಿಯೇ ಗಾಂಧೀಜಿಯವರು " ನನ್ನ ಅನುಮತಿ ಇಲ್ಲದೆ ಯಾರೂ ನನ್ನನ್ನು ನೋಯಿಸಲಾರರು" ಎಂದು ಹೇಳಿರಬಹುದೇ? ■



ಒಂದು ಅಪರೂಪದ ಗಾಂಧಿಯವರ ಶಿಲ್ಪ...

ಅಖಿಲ ಭಾರತ ಆಹಾರ ಮತ್ತು ಔಷಧೀಯ ನಿಯಂತ್ರಣ ಸಂಸ್ಥೆಯ ಆವರಣದಲ್ಲಿ ಕಂಡು ಬಂದ ಅಪರೂಪದ ಶಿಲ್ಪ....



ಗಾಂಧೀಜಿ ಮತ್ತು ಮೂರು ಮಂಗಗಳು

ಗಾಂಧೀಜಿ ಎಂದ ಕೂಡಲೇ ನಮಗೆ ನೆನಪಾಗುವುದು ಮೂರು ಮಂಗಗಳ ಮೂರ್ತಿಗಳು. ಅವುಗಳಲ್ಲಿ ಒಂದು ಕಣ್ಣು ಮುಚ್ಚಿದ್ದರೆ, ಇನ್ನೊಂದು ಕಿವಿಗಳನ್ನು ಮಚ್ಚಿರುತ್ತದೆ, ಮತ್ತೊಂದು ಬಾಯನ್ನು ಮುಚ್ಚಿ ಕುಳಿತಿರುತ್ತದೆ. ಕೆಟ್ಟದ್ದನ್ನು ನೋಡಬೇಡ, ಕೆಟ್ಟದ್ದನ್ನು ಕೇಳಬೇಡ, ಕೆಟ್ಟದ್ದನ್ನು ಆಡಬೇಡ ಎಂಬುದು ಆ ಮಂಗಗಳು ನಮಗೆ ಹೇಳುವ ಉಪದೇಶವಾಗಿದೆ. ಈ ಮಂಗಗಳು ಗಾಂಧೀಜಿಯವರಿಗೆ ಎಲ್ಲಿ ಸಿಕ್ಕಿದವು?

ಗಾಂಧೀಜಿಯವರ ಸೇವಾಗ್ರಾಮಕ್ಕೆ ಪ್ರತಿದಿನವೂ ಅನೇಕ ಜನರು ಭೇಟಿ ನೀಡುತ್ತಿದ್ದರು. ಅವರಲ್ಲಿ ಹೆಚ್ಚಿನವರೆಲ್ಲರೂ ಗಾಂಧೀಜಿಯವರಿಂದ ಬೇರೆಬೇರೆ ವಿಷಯಗಳ ಬಗ್ಗೆ ಸಲಹೆ ಕೇಳಲೆಂದು ಬರುತ್ತಿದ್ದರು. ಆದರೆ ಒಂದು ದಿನ ಚೀನಾದ ಪ್ರವಾಸಿಗರಿಬ್ಬರು ಅವರನ್ನು ನೋಡಲು ಬಂದರು. ಅವರು ಗಾಂಧೀಜಿಯವರಿಗಾಗಿ ಒಂದು ಉಡುಗೊರೆಯನ್ನು ತಂದಿದ್ದರು. "ಬಾಪೂ, ನಿಮಗೆಂದು ನಮ್ಮ ದೇಶದಿಂದ ಒಂದು ಚಿಕ್ಕ ಉಡುಗೊರೆಯನ್ನು ತಂದಿದ್ದೇವೆ.

ಇವು ನೋಡಲು ಮಕ್ಕಳ ಆಟಿಗೆಯಂತಿವೆ. ಆದರೆ ಇವು ಹೇಳುವ ಸತ್ಯಗಳು ಬಹಳ ದೊಡ್ಡವು ಎಂಬುದು ನಮ್ಮ ನಂಬಿಕೆ. ಇದನ್ನು ಸ್ವೀಕರಿಸಿ" ಎಂದು ಮುಜುಗರದಿಂದಲೇ ನೀಡಿದರು. ಪುಟ್ಟ, ಪುಟ್ಟ ಮೂರು ಮಂಗಗಳ ಮೂರ್ತಿಗಳು ಗಾಂಧೀಜಿಯವರನ್ನು ಎಷ್ಟು ಪ್ರಭಾವಿಸಿದವು ಎಂದರೆ ಅವರು ಅದನ್ನು ಸದಾ ತಮ್ಮ ಆಸನದ ಹಿಂದೆಯೇ ಇಟ್ಟುಕೊಂಡಿದ್ದರು. ಬಹಳ ಸಲ ತಮ್ಮನ್ನು ನೋಡಲು ಬಂದವರ ಪ್ರಶ್ನೆಗಳಿಗೆ ಉತ್ತರವಾಗಿ ಈ ಮೂರ್ತಿಗಳನ್ನೇ ತೋರಿಸುತ್ತಿದ್ದರು.

ಸಂಗ್ರಹ : ಸುಧಾ ಅಡುಕುಳ ■



ನಾಗಮ್ಮ ಪಾಟೀಲ್

ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಅಸ್ಪೃಶ್ಯತೆ ನಿವಾರಣೆಯಲ್ಲಿ ಮುಖ್ಯವಾಗಿ ಬಯಸಿದ್ದು ಮೇಲ್ಜಾತಿಯವರ ಮನಃಪರಿವರ್ತನೆ. ಆ ನಿಟ್ಟಿನಲ್ಲಿ ಅವರು ಯಶಸ್ವಿಯಾಗಿದ್ದರು ಎನ್ನುವುದಕ್ಕೆ ಇತಿಹಾಸದ ಪುಟಗಳಲ್ಲಿ ಸಾವಿರಾರು ಉದಾಹರಣೆಗಳು ಸಿಗುತ್ತವೆ . ಅದರಲ್ಲಿ ಒಂದು ಉದಾಹರಣೆ ಕರ್ನಾಟಕದವರೇ ಆದ ಪದ್ಮಶ್ರೀ ವೀರನಗೌಡ ಪಾಟೀಲ ಮತ್ತು ಅವರ ಪತ್ನಿ ನಾಗಮ್ಮ ಪಾಟೀಲ.

1934 ರಲ್ಲಿ ಮಹಾತ್ಮ ಗಾಂಧೀಜಿಯವರು ಹಾವೇರಿ ಜಿಲ್ಲೆಯ ಮೋಟೆಬೆನ್ನೂರಿಗೆ ಬಂದಾಗ ಅವರಿಗೆ ಸ್ವಾಗತ ಕೋರಲು ನಾಗಮ್ಮ ಪಾಟೀಲ ಚಿಕ್ಕಮಕ್ಕಳಿಗೆ ಸ್ವಾಗತ ಗೀತೆಯನ್ನು ಕಲಿಸಿದ್ದರು. ಗಾಂಧೀಜಿಯವರ ಪರಿಚಯದ ನಂತರ ಅವರ ಕಾರಿನಲ್ಲಿ ವೀರನಗೌಡ ಪಾಟೀಲ, ನಾಗಮ್ಮ ಪಾಟೀಲ ಮತ್ತು ಖ್ಯಾತ ಗಾಂಧಿವಾದಿ ಥಕ್ಕರ್ ಬಾಪಾ ಹೊರಟರು.

ಆಗ ಗಾಂಧೀಜಿಯವರು "ನಿಮ್ಮ ಯಜಮಾನರು ಕರ್ನಾಟಕ ಹರಿಜನ ಸೇವಕ ಸಂಘದ ಅಧ್ಯಕ್ಷರಾಗಿದ್ದಾರೆ, ಎಂದ ಮೇಲೆ ನೀವಾದರೂ ಕೆಲವು ಹರಿಜನ ಹುಡುಗಿಯರನ್ನು ಮನೆಯಲ್ಲಿ ಏಕೆ ಜೋಪಾನ ಮಾಡಬಾರದು?" ಎಂದು ನಾಗಮ್ಮನವರಿಗೆ ಕೇಳಿದರು.

"ನಾನು ಬಹಳ ಕಲಿತವಳಲ್ಲ ಬಾಪೂ, ನಮಗೇನೂ ಬರುವುದಿಲ್ಲ" ಎಂದು ನಾಗಮ್ಮ ಉತ್ತರಿಸಿದರು.

ಆಗ ಗಾಂಧೀಜಿಯವರು "ನಿನಗೆ ಹರಿಜನ ಮಕ್ಕಳ ಮೈ ತೊಳೆಯಲು, ತಲೆ ಬಾಚಲು, ಬಟ್ಟೆ ತೊಳೆಯಲು, ಇತ್ಯಾದಿ ಕೆಲಸವಾದರೂ ಬರುತ್ತದೋ ಇಲ್ಲವೋ" ಎಂದು ಕೇಳಿದರು.

"ಇದೇನು ದೊಡ್ಡ ಕೆಲಸ ? ಯಾರಾದರೂ ಇದನ್ನು ಮಾಡಬಹುದು" ಎಂದು ನಾಗಮ್ಮ ಉತ್ತರಿಸಿದರು. "ಹಾಗಾದರೆ ನೀನು ಇಬ್ಬರು ಹರಿಜನ ಹುಡುಗಿಯರನ್ನು ನಿಮ್ಮ ಮಕ್ಕಳಂತೆ ಪೋಷಿಸು" ಎಂದು ಗಾಂಧೀಜಿಯವರು ಹೇಳಿದರು.

ಮಹಾತ್ಮನ ಮಾತನ್ನು ' ರಾಮ ವಚನ ' ಎಂದು ಪಾಲಿಸಿದ ನಾಗಮ್ಮನವರು ತಾರಾ ಮತ್ತು ಮಥುರಾ ಎಂಬ ಇಬ್ಬರು ಹುಡುಗಿಯರನ್ನು ತಮ್ಮ ಮಕ್ಕಳ ಜೊತೆ ಬೆಳೆಸಿದರು. ಅಲ್ಲಿಂದ ಆ ದಂಪತಿಗಳು ಅನೇಕ ಸಾಮಾಜಿಕ ಕಾರ್ಯಗಳನ್ನು ಮಾಡಿದರು. ಗಾಂಧೀಜಿಯವರ ಪ್ರೇರಣೆಯಿಂದ "ಹರಿಜನ ಬಾಲಿಕಾ ಆಶ್ರಮ"ವನ್ನು ಹುಬ್ಬಳ್ಳಿಯಲ್ಲಿ ಸ್ಥಾಪಿಸಿದರು.

ಈ ಸಂಸ್ಥೆಯ ಬಗ್ಗೆ ಉತ್ಸುಕರಾಗಿದ್ದ ಗಾಂಧೀಜಿಯವರು ಸ್ವತಃ ಅದರ ಕಾರ್ಯನಿರ್ವಹಣೆ ಕುರಿತು ಪತ್ರ ವ್ಯವಹಾರ ನಡೆಸುತ್ತಿದ್ದರು. 1940ರಲ್ಲಿ ಈ ಹರಿಜನ ಬಾಲಿಕಾ ಆಶ್ರಮಕ್ಕೆ ತಮ್ಮ ಆಶ್ರಮದಿಂದ ಮೀರಾ ಎಂಬ ಹರಿಜನ ಹುಡುಗಿಯನ್ನು ಗಾಂಧೀಜಿಯವರು ಕಳಿಸಿದ್ದರು. ಈರವ್ವ ಎಂಬ ಹರಿಜನ ಹುಡುಗಿಯನ್ನು ಸೇವಾಗ್ರಾಮಕ್ಕೆ ಕರೆಸಿಕೊಂಡು ಹೋಗಿ ಬೆಳೆಸಿದರು.ಮುಂದೆ ಅವಳನ್ನು ಸಂಗೂರು ಕರಿಯಪ್ಪನವರೊಂದಿಗೆ ಬಾಲಿಕಾ ಆಶ್ರಮದಲ್ಲಿ ಮದುವೆ ಮಾಡಲಾಯಿತು. ಮುಂದೆ ಆ ದಂಪತಿಗಳು ಕೂಡ ಅಸ್ಪೃಶ್ಯತಾ ನಿವಾರಣೆಯಲ್ಲಿ ತೊಡಗಿದರು.

ಆ ಆಶ್ರಮದಲ್ಲಿ ನೂರಾರು ಹರಿಜನ ಮಹಿಳೆಯರ ವಿವಾಹಗಳನ್ನು ಪಾಟೀಲರು ನೆರವೇರಿಸಿದರು. ಇದು ಗಾಂಧೀಜಿಯವರು ಜನರ ಮೇಲೆ ಬೀರಿದ್ದ ಪ್ರಭಾವ.

ಅಂದಿನ "ಹರಿಜನ ಬಾಲಿಕಾ ಆಶ್ರಮ" ಇಂದು "ಮಹಿಳಾ ವಿದ್ಯಾಪೀಠ" ಅಥವಾ ಎಮ್.ವಿ.ಪಿ ಎಂಬ ಹೆಸರಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಇದಲ್ಲದೇ ಇನ್ನೂ ಅನೇಕ ಮಹಿಳಾ ಶಾಲೆಗಳು, ಕಾಲೇಜುಗಳು, ಸ್ವ ಉದ್ಯೋಗ ಸಂಸ್ಥೆಗಳು, ಹಾಸ್ಟೆಲ್ಗಳು ಪಾಟೀಲರಿಂದ ಸ್ಥಾಪಿತವಾಗಿವೆ.

ಇಂತಹ ಶ್ರೀಮಂತರ ಮನಃಪರಿವರ್ತನೆಯ ಹಿಂದೆ ಗಾಂಧೀಜಿಯವರ ನೈತಿಕತೆ ಪ್ರಭಾವ ಬೀರಿದ್ದು ಮಾತ್ರ ಸತ್ಯ. ಮನಃಪರಿವರ್ತನೆಯಿಂದ ಮಾತ್ರ ಅನನ್ಯ ಕೆಲಸಗಳನ್ನು ಮಾಡಲು ಸಾಧ್ಯ.

(ಕರ್ನಾಟಕ ಮತ್ತು ಗಾಂಧಿ ಪುಸ್ತಕದಿಂದ ಕೆಲವು ಅಂಶಗಳನ್ನು ಆರಿಸಿಕೊಳ್ಳಲಾಗಿದೆ).

ಸಂಗ್ರಹ : ರವಿಚಂದ್ರ ಜಗಣ್ಣವರ್ , ನೇತಾಜಿ ಗಾಂಧಿ

■

ಕನಸಿನಲ್ಲಿ ಗಾಂಧಿ



ಅಲ್ಲ ಗಾಂಧಿ ಹೀಗೆ ಇದ್ದಕ್ಕಿದ್ದಂತೆ ಒಬ್ಬನೇ
ಮನೆಯ ಹಿತ್ತಲಿನಿಂದ ದನದ ಗೊಂತಿಗೆ ಬಂದು
ಸಗಣಿ ಬಾಚಿ ಗಂಜಳವೆತ್ತಿ ಗುಡಿಸ ತೊಡಗಿದರೆ
ಹೇಗಾಗ ಬೇಡ ; ಇದು ನಾನು ನಿತ್ಯ ಮಾಡುವ
ದಂದುಗ; ಗೋಣಗಿದರು ತಪ್ಪಿಸದೆ ಒಪ್ಪಿಸುವ ಕೃತ್ಯ ಕಾಯಕ


ಯಾವ ತಪ್ಪು ಕಂಡು ಹೀಗೆ
ಮಾತಿಲ್ಲದ ಮೌನದಲ್ಲಿ ಕ್ರಿಯೆಂಬುದು ಅರಿವು
ಭಾವದಲ್ಲಿ ಬಾಚಿ ಬಳಿದೆ ಗುಡಿಸಿದೆ ತಲೆಮೇಲೆ
ಹೊತ್ತು ತಿಪ್ಪೆಗೆ ಸುರಿದೆ. ನೀನು ಬಂದಾಗ ಯಾರೂ
ಎದ್ದಿರಲಿಲ್ಲ ಗಾಂಧಿ; ನಿದ್ದೆಯೆಂಬುದು ಶತಮಾನದ ಕರ್ಮಸಿದ್ಧಾಂತ

ಬೆಳಕು ಹರಿವ ಮುನ್ನ ನಿನ್ನ ಪಾದ
ಮನೆಯಂಗಳವ ಗುಡಿಸಿತ್ತು ರಂಗವಲ್ಲಿ ಬಿಡಿಸಿತ್ತು
ಸಾಬರಮತಿಯೋ ತಿಹಾರೋ ಊರು ಕೇರಿಯೆಲ್ಲ
ನಿನ್ನುಸುರಿನ ಪರಿಮಳದಲ್ಲಿ ಪಲ್ಲವದ ಬೆಳಗು ಹರಿಸಿತ್ತು
ಒಬ್ಬೊಬ್ಬರೇ ಎದ್ದಾಗ ಅಲ್ಲಿ ನೀನಿರಲಿಲ್ಲ ಹೆಜ್ಜೆ ಗುರುತಿತ್ತು

ನಾನು ಗೊಂತಿ ಗುಡಿಸುವುದು ಬಿಟ್ಟು ವರುಷ ಐವತ್ತಾಯಿತು
ಹೆಚ್ಚೇನು ಊರುಬಿಟ್ಟೇ ಮೂರು ದಶಕವಾಯಿತು ಗಾಂಧಿ
ಹೋಗಿ ನೋಡಿದರೆ ಗೊಂತಿ ಗೊಂತಿಗಳೆಲ್ಲ ಖಾಲಿ ಖಾಲಿ
ತಿಪ್ಪೆಗಳ ತುಂಬ ಗೋಳೀಕರಣದ ಕರಿಬಿಳಿಯ ಕವರು
ಹಾದಿ ಬೀದಿಯ ಮೇಲೆ ಗುಟ್ಕಾ ಹೆಂಡದ ಮೊಹರು

ಹಟ್ಟಿ ಹಾಡಿಗಳ ಗೋಡೆ ಮಾಡುಗಳಲ್ಲಿ ಭೀಮ ಬಂದು
ಹೋದ ನೆನಪು ನೇತಾಡಿದೆ ಜೇಡ ಬಲೆ ಸೂಡಿ ಪಿಸುಗುಟ್ಟಿದೆ
ಗಾಳಿ ಹಳೆಯ ಕನವರಿಕೆಯಲಿ ತೇಲಿ ಅಲ್ಲಿ ನಿನ್ನ
ನೆನಪಿನ ಬುತ್ತಿ ಬಿಚ್ಚಿದ ಮುದಿ ಜೀವಗಳೆರಡು
ಪಡಸಾಲೆಯಲಿ ಮಬ್ಬುಗಣ್ಣಿನ ಲಾಲಿ ಹಾಡಿವೆ ಪಾಡಿವೆ

– ಪ್ರೊ. ಎಸ್.ಜಿ. ಸಿದ್ಧರಾಮಯ್ಯ



ವಿದ್ಯಾರ್ಥಿಗಳ ವ್ಯಕ್ತಿತ್ವ ನಿರ್ಮಾಣದಲ್ಲಿ

ಗಾಂಧಿ ತತ್ವಗಳ ಪಾತ್ರ

– ಅರವಿಂದ ಚೊಕ್ಕಾಡಿ

ಗಾಂಧಿ ಗತಿಸಿದ ನಂತರ ಗಾಂಧಿಯನ್ನು ಪೂಜಿಸುವ ಮತ್ತು ನಂತರ ನಿಂದಿಸುವ ತಲೆಮಾರು ಬಂತು. ಆದರೆ ಗಾಂಧಿ ತತ್ವಗಳನ್ನು ಯುವಕ ಯುವತಿಯರಿಗೆ ವೈಚಾರಿಕವಾಗಿ ಕನೆಕ್ಟ್ ಮಾಡುವ ಕೆಲಸ ನಡೆದಿಲ್ಲ.

ಗಾಂಧಿಯವರ ಮೂಲಶಿಕ್ಷಣದಲ್ಲಿ ಓದು, ಬರೆಹ, ಲೆಕ್ಕ ಮಾತ್ರ ಪ್ರಧಾನ. ನಂತರ ವೃತ್ತಿ ಶಿಕ್ಷಣ. ನಿಜವಾಗಿ ಆಗಬೇಕಾದ್ದು ಇದೇ ಅಲ್ಲವೆ. ಓದಲು ಗೊತ್ತಿದ್ದರೆ ಸಾಕು, ಅವರವರ ಆಸಕ್ತಿಗನುಗುಣವಾಗಿ ಯಾವಾಗ ಏನು ಬೇಕಾದರೂ ಓದಿ ತಿಳಿದುಕೊಳ್ಳಬಹುದು. ನಾನು ಮತ್ತು ನಿಮ್ಮ ಉಪನ್ಯಾಸಕರು ನಿಮ್ಮನ್ನು 'ರೆಡಿ ಫಾರ್ ಯೂಸ್' ಆಗಿ ಮಾಡಲು ಯಾರ್ಯಾರಿಗೋ ಬೇಕಾದ್ದನ್ನೆಲ್ಲ ಪಾಠದಲ್ಲಿ ತುಂಬಿದ್ದರಿಂದ ಅದನ್ನೆ ಕಲಿಸುತ್ತಿದ್ದೇವೆ. ನಿಮ್ಮನ್ನು ಲಭ್ಯ ಉದ್ಯೋಗವನ್ನು ಪಡೆದು ಇನ್ನೊಬ್ಬನ ಅಧೀನದಲ್ಲಿ ಕೆಲಸದವರನ್ನಾಗಿ ಮಾಡಲು ಕಲಿಸುತ್ತಿದ್ದೇವೆ ಹೊರತು ನೀವೇ ಉದ್ಯೋಗ ಸೃಷ್ಟಿ ಮಾಡಿ ನೀವೇ ಯಜಮಾನರಾಗುವುದನ್ನು ಕಲಿಸುತ್ತಿಲ್ಲ. ಆದರೆ ನಿಮ್ಮದೇ ಅಂಗ ಸಂಸ್ಥೆಯಾಗಿ ಇಲ್ಲಿ ' ರುಡ್ ಸೆಟ್' ಅಂತ ಇದೆ. ರುಡ್ ಸೆಟ್ ನಿಂದ ಎಷ್ಟೊಂದು ಉದ್ಯೋಗಗಳು ಸಿಕ್ಕಿಲ್ಲ. ಅದು ನಿಮ್ಮನ್ನು ಯಜಮಾನರನ್ನಾಗಿಸುವ ಸಂಸ್ಥೆ. ಇದು ಗಾಂಧಿ ತತ್ವದ ಮೇಲೆ ಇದೆ. ಇವತ್ತು ಕರಾವಳಿಯ ಹುಡುಗರೇ ಗಾಂಧಿಯ ನಿಂದಕರಲ್ಲಿ ಮೊದಲಿಗರು. ಆದರೆ ಕರಾವಳಿಯವನು ದುಡ್ಡು ಕೊಟ್ಟು ಉದ್ಯೋಗ ಪಡೆಯಲು ಹೋಗುವುದಿಲ್ಲ. ಬದಲು ಒಂದು ಹೊಟೇಲ್ ಮಾಡುತ್ತಾನೆ. ಬೀಡದಂಗಡಿ ಹಾಕುತ್ತಾನೆ. ಮರ ಹತ್ತುವ ಯಂತ್ರ ಕಂಡು ಹಿಡಿಯುತ್ತಾನೆ. ಇದು ಕಾರ್ನಾಡ್ ಸದಾಶಿವ ರಾಯರಂಥ ಗಾಂಧಿ ವಾದಿಗಳು ರೂಪಿಸಿಕೊಟ್ಟ ಪ್ರಜ್ಞೆಯಿಂದ ಸಾಧ್ಯ ಆಗಿದೆ ಎನ್ನುವುದು ಮಾತ್ರ ನಮ್ಮ ಅರಿವಿನಲ್ಲಿ ಇಲ್ಲ ಅಷ್ಟೆ. ಕಾರ್ನಾಡ್ ಸದಾಶಿವ ರಾಯರು ಸತ್ಯಾಗ್ರಹಕ್ಕೆ ಸಹಿ ಮಾಡಿದ ಮೊದಲ ದಕ್ಷಿಣ ಭಾರತೀಯರು. ಇಂಥವರು ಇಲ್ಲದಿದ್ದರೆ ಕರಾವಳಿಯಲ್ಲಿ ಕೂಲಿಯಾಳುಗಳನ್ನು ಮರಕ್ಕೆ ಕಟ್ಟಿ ಹಾಕಿ ಹೊಡೆಯುವಂಥ ಪರಿಸ್ಥಿತಿ ಇತ್ತು. ತನ್ನ ಉದ್ಯೋಗವನ್ನು ತಾನೇ ಕಂಡುಕೊಳ್ಳುವ ಶಕ್ತಿಯನ್ನು ಪಡೆದ ಮೇಲೆ ಈ ಟ್ರೆಂಡ್ ಹೊರಟುಹೋಯಿತು. ಅದಕ್ಕೆ ಕಾರಣ ಒಂದು ಕಾಲಮಾನದ ಗಾಂಧಿವಾದಿಗಳು ಹಾಕಿಕೊಟ್ಟ ಮಾರ್ಗದರ್ಶನ. ಗಾಂಧಿ ಸಹಕಾರಿ ಸಂಘ ಆಧಾರಿತ ಅಭಿವೃದ್ಧಿಯನ್ನು ಪ್ರತಿಪಾದಿಸಿದರು. ನೆನಪಿಡಿ, ಭಾರತದ ಪ್ರಥಮ ಸಹಕಾರಿ ಪ್ರಿಂಟಿಂಗ್ ಪ್ರೆಸ್ ಮೊಳಹಳ್ಳಿ ಶಿವರಾಯರ ನೇತೃತ್ವದಲ್ಲಿ ಪುತ್ತೂರಿನಲ್ಲಿ ಪ್ರಾರಂಭವಾಯಿತು. ಕರಾವಳಿಯಲ್ಲಿರುವಷ್ಟು ಹಣಕಾಸು ಸಂಸ್ಥೆಗಳು ಕರ್ನಾಟಕದ ಯಾವ ಭಾಗದಲ್ಲೂ ಇಲ್ಲ. ತತ್ಪರಿಣಾಮ ಇಲ್ಲಿ ರೈತರ ಆತ್ಮಹತ್ಯೆಯ ಪ್ರಕರಣಗಳಿಲ್ಲ. ಶಿಕ್ಷಣ ಮತ್ತು ಆರ್ಥಿಕತೆಯ ನಡುವೆ ಸಂಬಂಧ ಕಲ್ಪಿಸುವ ಗಾಂಧಿ ತತ್ವಗಳು ಕರಾವಳಿಯವರನ್ನು ಹೆಚ್ಚು ಸ್ವಾವಲಂಬಿಗಳಾಗಿ ಮಾಡಿದೆ.

ಅಹಿಂಸೆ ನಿಷ್ಪ್ರಯೋಜಕ ಎಂದು ಬಹಳ ಆರ್ಭಟಗಳಿವೆ. ಅಫ್ಕೋರ್ಸ್ ಪರಿಪೂರ್ಣ ಅಹಿಂಸೆ ಅಸಾಧ್ಯ. ಆದರೆ ಎಲ್ಲಿ? ಅಪರಾಧ ನಿಯಂತ್ರಣದಲ್ಲಿ ಮಾತ್ರ. ಉಳಿದಂತೆ ಎಲ್ಲರಿಗೂ ಅಹಿಂಸೆಯೇ ಬೇಕು. ನೀವೀಗ ಪಾಠವನ್ನು ಚೆನ್ನಾಗಿ ಓದದೆ ಇದ್ದಾಗ ನಿಮ್ಮ ಉಪನ್ಯಾಸಕರು ತಿಳಿ ಹೇಳುವ ಬದಲು ' ಅಹಿಂಸೆ ನಿಷ್ಪ್ರಯೋಜಕ' ನಿಮ್ಮ ಕೈಕಾಲು ಮುರಿದು ಹಾಕಿದರೆ ಹೇಗಾದೀತು? ಅಂದರೆ ಅಹಿಂಸೆ ನಮ್ಮೆಲ್ಲರ ಅಗತ್ಯವೂ ಹೌದು. 'ಶಾಂತಿಯ ತತ್ವ' ನಿಷ್ಪ್ರಯೋಜಕ ಎಂದು ನೀವು ಕಾಲೇಜು ಬಿಟ್ಟು ಮನೆಗೆ ಹೋಗುವಾಗ ನಿಮ್ಮ ತಂದೆ, ತಾಯಿ, ಅಜ್ಜ, ಅಜ್ಜಿಯೆಲ್ಲ ಪ್ರತಿನಿತ್ಯ ಮನೆಯಲ್ಲಿ ಗಲಾಟೆ ಮಾಡಿಕೊಂಡು ಪರಸ್ಪರ ಹೊಡೆದಾಡುತ್ತಾ ಚೀರಾಡುತ್ತಾ ಇದ್ದರೆ ನಿಮಗೆ ನೆಮ್ಮದಿಯಲ್ಲಿ ಓದಲು ಆಗುತ್ತದಾ? ಇಲ್ಲ. ಅಂದರೆ ಶಾಂತಿಯ ಅಗತ್ಯವೂ ಇದ್ದೇ ಇದೆ. ಗಾಂಧಿ ಹೇಳಿದ್ದೂ ಇದನ್ನೆ. ಗಾಂಧಿ ಮನುಷ್ಯನ ಮೂಲಭೂತ ಅಗತ್ಯಗಳ ಆಧಾರದಲ್ಲಿ ತಮ್ಮ ವಿಚಾರಗಳನ್ನು ಹೇಳಿದರು.

ಗಾಂಧಿಯವರ ಪ್ರತಿಯೊಂದು ಚಿಂತನೆಯೂ ಧರ್ಮದ ತಳಹದಿಯಲ್ಲಿದ್ದವು. ತಂದೆ ತಾಯಿ ಎಷ್ಟೇ ಹೊಡೆದರೂ ತಿರುಗೇಟು ಹೊಡೆಯದೆ ತನಗಾಗಬೇಕಾದ್ದನ್ನು ಸಾಧಿಸುವ ವರೆಗೆ ಪಟ್ಟು ಬಿಡದೆ ರಚ್ಚೆ ಹಿಡಿಯುವ ಮಕ್ಕಳು

ಇಲ್ಲವೆ, ಅದನ್ನೇ ದೊಡ್ಡ ವ್ಯಾಪ್ತಿಯಲ್ಲಿ ಮಾಡಿದರೆ ಸತ್ಯಾಗ್ರಹವಾಗುತ್ತದೆ. ಅದಕ್ಕೆ ಆಧಾರ ಉಪವಾಸ. ಹಿಂದೂ, ಇಸ್ಲಾಂ ಮತ್ತು ಜೈನ ಧರ್ಮಗಳಲ್ಲಿ ಉಪವಾಸಕ್ಕೆ ಧಾರ್ಮಿಕ ಮಹತ್ವವಿದೆ. ಧಾರ್ಮಿಕವಾಗಿ ಉಪವಾಸದ ಉದ್ದೇಶ ಆತ್ಮಶುದ್ಧಿ. ಅದೇ ಉಪವಾಸ ಸತ್ಯಾಗ್ರಹವಾದಾಗ ಆತ್ಮಶುದ್ಧಿಯ ಜೊತೆಗೆ ಹೋರಾಟದ ಅಸ್ತ್ರವೂ ಆಗುತ್ತದೆ. ಇವತ್ತು ಉಪವಾಸ ಸತ್ಯಾಗ್ರಹದ ಬಗ್ಗೆ ಗಾಂಧಿ ನಿಂದಕರ ಬಹಳ ಆಕ್ಷೇಪಗಳಿವೆ. ಸರಿಯಪ್ಪಾ ಉಪವಾಸ ಸತ್ಯಾಗ್ರಹದಿಂದ ಉಪಯೋಗವಿಲ್ಲ ಎಂದು ಹೇಳುವ ಎಲ್ಲರೂ ಹೋರಾಟಕ್ಕಿಳಿದಾಗ ಉಪವಾಸ ಸತ್ಯಾಗ್ರಹವನ್ನೇ ಮಾಡುತ್ತೀರಿ ಹೊರತು ಯಾರೂ ಬಂದೂಕು ತೆಗೆದುಕೊಂಡು ಹೋಗುವುದಿಲ್ಲ, ಹೋಗಲೂ ಬಾರದು. ಯಾಕೆ? ಅಂದರೆ ಉಪವಾಸ ಸತ್ಯಾಗ್ರಹ ಉಪಯೋಗ ಇಲ್ಲ ಎನ್ನುವವರೂ ನಂಬಿರುವುದು ಉಪವಾಸ ಸತ್ಯಾಗ್ರಹಗಳನ್ನೇ. ಹಿಂಸಾತ್ಮಕ ಹೋರಾಟ ಎದುರಾಳಿಯನ್ನು ನಾಶ ಮಾಡುತ್ತದಾದರೆ ಸತ್ಯಾಗ್ರಹ ಎದುರಾಳಿಯ ದುಷ್ಪವೃತ್ತಿಯನ್ನು ಮಾತ್ರ ನಾಶ ಮಾಡುತ್ತದೆ. ಹಸಿದವನ ಮುಂದೆ ನಾವು ಊಟ ಮಾಡ್ಲಿಕಾಗ್ತದಾ? ಆಗುವುದಿಲ್ಲ. ಆತ್ಮಸಾಕ್ಷಿ ಚುಚ್ಚುತ್ತದೆ. ಯಾವಾಗ ಆತ್ಮಸಾಕ್ಷಿ ಚುಚ್ಚಲ್ಪಡುತ್ತದೊ ಆಗ ಸತ್ಯಾಗ್ರಹ ಯಶಸ್ಸನ್ನು ಪಡೆಯುತ್ತದೆ. ಸತ್ಯಾಗ್ರಹಿಗೆ ಬೇಕಾದ್ದು ಅದಕ್ಕೆ ತನ್ನನ್ನು ತಾನು ಸಿದ್ಧಪಡಿಸಿಕೊಳ್ಳುವ ಮನಸ್ಥಿತಿ. ಯುವ ಜನತೆ ಹಿಂಸೆಗೆ ಮಣಿಯಬಾರದು. ಒಂದು ವೇಳೆ ಗಾಂಧಿ ಹಿಂಸೆಗೆ ಮಣಿದರೆ ಏನಾಗುತ್ತಿತ್ತು? ಬ್ರಿಟಿಷ್ ಸೈನ್ಯದಲ್ಲಿ ಸೈನಿಕರಾಗಿ ಇದ್ದವರು ಯಾರು ಯೋಚಿಸಿ. ಭಾರತೀಯರೇ. ಬ್ರಿಟಿಷರ ಪೊಲೀಸರು ಯಾರು? ಅವರೂ ಭಾರತೀಯರೇ. ಆಗ ಸ್ವಾತಂತ್ರ್ಯ ಹೋರಾಟಗಾರರು ಹಿಂಸೆಗಿಳಿದಿದ್ದರೆ ಆಕ್ರಮಣ ಮಾಡಬೇಕಾಗಿದ್ದದ್ದು ಯಾರ ಮೇಲೆ? ಭಾರತೀಯರ ಮೇಲೆಯೇ. ಭಾರತೀಯರು ಭಾರತೀಯರನ್ನೇ ಕೊಂದುಕೊಳ್ಳುವುದನ್ನು ಗಾಂಧಿ ತಪ್ಪಿಸಿದರು. ಗಾಂಧಿ ಬರುವುದಕ್ಕೆ ಮೊದಲು ಸಾಕಷ್ಟು ಬಂಡಾಯಗಳು ನಡೆದಿವೆ. ಈ ಬಂಡಾಯಗಳಲ್ಲೆಲ್ಲ ಬ್ರಿಟಿಷ್ ವಿರೋಧಿ ಬಂಡಾಯಗಾರರು ಬಹುತೇಕ ಅಟ್ಯಾಕ್ ಮಾಡಿದ್ದು ಬ್ರಿಟಿಷ್ ಸೇನೆಯಲ್ಲಿದ್ದ ಭಾರತೀಯರ ಮೇಲೆಯೆ. ಅದನ್ನು ನಾವು ಬ್ರಿಟಿಷ್ ಸೇನೆ ಎಂದು ನೋಡುವುದರಿಂದಾಗಿ ಸತ್ತದ್ದು ಭಾರತೀಯರೇ ಎಂಬುದನ್ನು ಗಮನಿಸಲು ಹೋಗುವುದಿಲ್ಲ ಅಷ್ಟೆ.


ಹೋರಾಟವನ್ನು ಗೆಲ್ಲುವುದು ಹೇಗೆ ಎಂದರೆ ಎದುರಾಳಿಯನ್ನು ಆರ್ಥಿಕವಾಗಿ ದುರ್ಬಲಗೊಳಿಸುವುದು. ತೆರಿಗೆ ನಿರಾಕರಣಾ ಚಳವಳಿ. ಸರಕಾರದ ಆದಾಯ ಕಮ್ಮಿಯಾಯಿತಾ. ಇನ್ನು ಆ ಕಾಲಕ್ಕೆ ಜವುಳಿ ಉದ್ಯಮ ಬ್ರಿಟಿಷರ ಅತಿದೊಡ್ಡ ಆದಾಯದ ಮೂಲವಾಗಿತ್ತು. ಚರಕ ಚಳವಳಿ. ನಮ್ಮ ಬಟ್ಟೆಯನ್ನು ನಾವೇ ಮಾಡಿಕೊಳ್ಳುವುದು. ಬ್ರಿಟಿಷರ ಬಟ್ಟೆಯನ್ನು ಕೊಂಡುಕೊಳ್ಳುವವರಿಲ್ಲ. ಅದರಿಂದಾಗಿ ಸರಕಾರದ ಆದಾಯದ ಕೊರತೆಯಾಗಿ ಗಾಂಧಿ ದುಂಡುಮೇಜಿನ ಪರಿಷತ್ತಿಗೆ ಇಂಗ್ಲೆಂಡಿಗೆ ಹೋದಾಗ ಮ್ಯಾಂಚೆಸ್ಟರ್ನ ಬಟ್ಟೆ ಗಿರಣಿ ಕಾರ್ಮಿಕರು," ನಮ್ಮ ಉದ್ಯೋಗವನ್ನು ತೆಗೆದವನು ಇವನು" ಎಂದು ಪ್ರತಿಭಟನೆ ಮಾಡಿದ್ದರು. ವೈಸರಾಯ್ ವವೆಲ್," ಭಾರತವನ್ನು ಇನ್ನು ನಮ್ಮ ನಿಯಂತ್ರಣದಲ್ಲಿಡಬೇಕಾದರೆ ಆಡಳಿತ ಮಾಡಲು ಇಂಗ್ಲೆಂಡಿನಿಂದ ಹಣ ತರಬೇಕಷ್ಟೆ" ಎಂದು ಬ್ರಿಟಿಷ್ ಸರಕಾರಕ್ಕೆ ಪತ್ರ ಬರೆಯುತ್ತಾರೆ. ಹೋರಾಟ ಎಂದರೆ ಬುದ್ಧಿ ಶಕ್ತಿಯಿಂದ ಎದುರಿಸುವುದು. ಅಬ್ಬರಿಸಿ ಬೊಬ್ಬಿರಿಯುವುದೂ ಅಲ್ಲ, ಪ್ರಾಣ ಕೊಡುತ್ತೇನೆ ಎಂದು ಸಾಯುವುದೂ ಅಲ್ಲ. ನಾವು ಬದುಕಲಿಕ್ಕೆ ಹುಟ್ಟಿದವರು. ಸಾಯಲಿಕ್ಕಲ್ಲ. ಈ ಆತ್ಮಹತ್ಯೆ ಮಾಡಿಕೊಳ್ಳುವವರ ಬಳಿ ಆತ್ಮಹತ್ಯೆಯಿಂದ ಸಮಸ್ಯೆ ಪರಿಹಾರವಾಗುತ್ತದೆ ಎಂಬ ಥಿಯರಿ ಇರುತ್ತದೆ. ಇವನೇ ಇಲ್ಲದ ಮೇಲೆ ಸಮಸ್ಯೆ ಪರಿಹಾರ ಆಗುವುದು ಹೇಗೆ? ಹುತಾತ್ಮರಾಗುವುದು ದೊಡ್ಡ ವಿಷಯವೇ. ಹುತಾತ್ಮರೆಲ್ಲರೂ ಆದರಣೀಯರೇ. ಆದರೆ ಹುತಾತ್ಮರಾಗಬೇಕಾದ ಅಗತ್ಯ ಉಂಟೊ? ಹುತಾತ್ಮರನ್ನು ವೈಭವೀಕರಿಸುವ ಯಾರೂ ಕೂಡ ತನ್ನ ಮಕ್ಕಳೇ ಹುತಾತ್ಮರಾಗಬೇಕೆಂದು ಬಯಸುವುದಿಲ್ಲ;ಆಚೆಯವನ ಮಕ್ಕಳು ಹುತಾತ್ಮರಾಗಬೇಕಾದ್ದು. ಹೋರಾಟದಿಂದ ಸಿಗುವ ಫಲ ಮರಣವೇ ಎಂದಾದರೆ ಅದಕ್ಕೆ ಜನ ಬರುವುದಿಲ್ಲ. ಗಾಂಧಿಯ ಜೊತೆ ಹೋದರೆ ಹೆಚ್ಚೆಂದರೆ ಆರು ತಿಂಗಳು ಜೈಲಾಗಬಹುದು. ಮರಣದಂಡನೆಯಂತೂ ಆಗುವುದಿಲ್ಲ ಎಂದು ಗ್ಯಾರಂಟಿ ಸಿಕ್ಕಿದ್ದರಿಂದ ಜಾಸ್ತಿ ಜನ ಗಾಂಧಿಯೊಂದಿಗೆ ಹೋದರು. ಹೋರಾಟಕ್ಕೆ ದೊಡ್ಡ ಸಂಖ್ಯೆಯಲ್ಲಿ ಜನ ಬರಬೇಕಾದರೆ ಹೋರಾಟದಿಂದ ಪ್ರಾಣವನ್ನೆ ಕಳೆದುಕೊಳ್ಳುವುದನ್ನು ತಪ್ಪಿಸಬೇಕು ಎಂಬುದನ್ನು ಗಾಂಧಿ ಮಾಡಿ ತೋರಿಸಿದರು.

ಒಂದು ಸಂಗತಿಯನ್ನು ನಾವು ಹೇಗೆ ಯೋಚಿಸಬೇಕು ಎಂದು ಗಾಂಧಿ ಕಲಿಸುತ್ತಾರೆ. ಒಮ್ಮೆ ಗಾಂಧಿಯ ಬಳಿ ಯಾರೊ ಹೂಗಳಲ್ಲಿ ಚಂದದ ಹೂವು ಯಾವುದು ಎಂದು ಕೇಳಿದರಂತೆ. ಗಾಂಧಿ ಹತ್ತಿಯ ಹೂವು ಎಂದು ಉತ್ತರಿಸಿದರು. ಹತ್ತಿಯಿಂದ ಮಾತ್ರ ಬಟ್ಟೆ ಮಾಡಲು ಆಗುವುದು. ಮಲ್ಲಿಗೆ ಸಂಪಿಗೆಯಿಂದೆಲ್ಲ ಬಟ್ಟೆ ಮಾಡ್ಲಿಕಾಗುವುದಿಲ್ಲ. ಯುವಕ ಯುವತಿಯರು ಸಕ್ಸಸ್ ಆಗಬೇಕಾದರೆ ಇರುವ ಸಂಗತಿಗಳನ್ನೆ ಹೊಸ ರೀತಿಯಲ್ಲಿ ಯೋಚಿಸುವುದನ್ನು ಕಲಿಯಬೇಕು.

ಒಬ್ಬ ಹೆಣ್ಣು ಮಧ್ಯ ರಾತ್ರಿಯಲ್ಲಿ ಓಡಾಡಬಲ್ಲ ಭಾರತದ ನಿರ್ಮಾಣ ಗಾಂಧಿಯ ಕಲ್ಪನೆ. ಆದರೆ ಇದು ಪೊಲೀಸರಿಂದ ನಿಯಂತ್ರಿತವಾದ ಭಾರತದಲ್ಲಿ ಆಗುವುದಿಲ್ಲ. ಯುವಕ ಯುವತಿಯರು ಸ್ವಯಂ ಶಿಸ್ತಿನಿಂದ ವರ್ತಿಸುವ ಗಾಂಧಿಯ ಸ್ವರಾಜ್ಯದಲ್ಲಿ ಮಾತ್ರ ಆಗುತ್ತದೆ. ಕೆಲವು ವರ್ಷಗಳ ಹಿಂದೆ ಕರಾವಳಿಯ ಒಂದು ಕಾಲೇಜಿನಲ್ಲಿ ಹುಡುಗಿ ತಾನು ಬಯಸಿದ್ದಕ್ಕೆ ಒಪ್ಪಲಿಲ್ಲ ಎಂದು ಹುಡುಗ ಕೊಲೆ ಮಾಡಿದ ಪ್ರಕರಣ ನಡೆಯಿತು. ಕೊಂದದ್ದು ಯಾರನ್ನು? ತಾನು ರಕ್ಷಿಸಬೇಕಾದ ತನ್ನ ಸಹಪಾಠಿಯನ್ನೆ! ಇಷ್ಟ ಆಗುವುದು ಬೇರೆ. ಯುವಕ ಯುವತಿಯರಲ್ಲಿ ಸ್ವಯಂ ಶಿಸ್ತು ಇಲ್ಲದಾಗ ಇಂತಾದ್ದು ನಡೆಯುತ್ತದೆ. ಅಪರಾಧದಲ್ಲಿ ಪ್ರಮುಖ ಪಾತ್ರ ಕರಾವಳಿಯಲ್ಲಿ ತುಂಬಿ ತುಳುಕಾಡುತ್ತಿರುವ ಮಾದಕ ದ್ರವ್ಯ ವ್ಯಸನ. ಮಾದಕ ದ್ರವ್ಯ ನಿಷೇಧ ಮತ್ತು ಸ್ವಯಂ ಶಿಸ್ತು ಗಾಂಧಿ ತತ್ವಗಳಾಗಿದ್ದವು. ನೈತಿಕತೆಯ ಎಚ್ಚರ ಮತ್ತು ಸಚ್ಚಾರಿತ್ರ್ಯದ ಪ್ರಜ್ಞೆ ಇಲ್ಲದೆ ವ್ಯಕ್ತಿತ್ವ ನಿರ್ಮಾಣ ಆಗುವುದಿಲ್ಲ. ಇದನ್ನೆ ವಿವೇಕಾನಂದರೂ ಹೇಳಿದ್ದು. ಏಕೆಂದರೆ ಇದರಿಂದ ವಿದ್ಯಾರ್ಥಿಗಳ ಅಭ್ಯುದಯವಾಗುತ್ತದೆ.

(ಎಸ್.ಡಿ.ಎಂ. ಕಾಲೇಜಿನಲ್ಲಿ ವಿದ್ಯಾರ್ಥಿಗಳೊಂದಿಗೆ ಮಾಡಿದ ಉಪನ್ಯಾಸ– ಸಂವಾದದ ಮುಖ್ಯಾಂಶಗಳು)

■



ಎಷ್ಟು ಸವಿದರೂ ಸವೆಯದ ಭಾಪೂ ಪೆಪ್ಪರಮೆಂಟ್...

– ಹುಲುಗಪ್ಪ ಕಟ್ಟೀಮನಿ.

ಇಂದಿಗೆ..... ಸರಿ ಸುಮಾರು ನೂರ ಐವತ್ತು ವರುಷಗಳ ಹಿಂದೆ ಬಾಲಕ ಮೋಹನದಾಸ ಕರಮಚಂದ ಗಾಂಧಿ ತಾನು ಆಟ ಆಡಿಕೊಂಡಿರಬೇಕಾಗಿದ್ದ ವಯಸ್ಸಿನಲ್ಲಿ, ಆತನ ಊರಿಗೆ ಆ ಒಂದು ವೇಷ ಕಟ್ಟುವವರ ತಂಡವು ಬರದೇ ಇದ್ದಿದ್ದರೆ? ಆ ತಂಡವು ಅಂದು "ಸತ್ಯ ಹರಿಶ್ಚಂದ್ರ" ಆಟ ಆಡದೇ ಇದ್ದಿದ್ದರೆ? ಅಂದು ಹರಿಶ್ಚಂದ್ರ ಪಾತ್ರಧಾರಿ ಸಾತ್ವಿಕದಲ್ಲಿ ಅಭಿನಯಿಸದೇ ಇದ್ದಿದ್ದರೆ ? ಅಥವಾ ಬಾಲಕ ಮೋಹನದಾಸ ಆ ಆಟವನ್ನೇ ನೋಡದೆ ಹೋಗಿದ್ದರೆ? ಈ ಲೋಕದ ಪಾಡು ಏನಾಗಬಹುದಿತ್ತು......?

ಕಲ್ಪಿತಕ್ಕೂ ಮನ ಒಪ್ಪಲಾರದು. ಅಂದು ಆ ಆಟ ನೋಡಲು ಬಾಲಕ ಗಾಂಧಿ ಒಬ್ಬನೇ ಹೋದನೆ? ಇರಲಿಕ್ಕಿಲ್ಲ. ನೂರಾರು ಮಂದಿ ಇದ್ದಿರ ಬಹುದು.ಅವರೊಟ್ಟಿಗೇ ಅವರ ವಾರಿಗೆಯರೂ ನೋಡಿರಬಹುದು. ಆದರೆ ಅಂದಿನ ಆಟದಲ್ಲಿ ವೇಶದ ಹರಿಶ್ಚಂದ್ರ ಕೇವಲ

ಈ ಬಾಲಕನ ಕಿವಿಯಲ್ಲಿ ಮಾತ್ರ "ಏ ಮೋಹನದಾಸ ನೀನು ಸತ್ಯ ಮಾರ್ಗದಲ್ಲೇ ನಡೆ" ಎಂದು ಪಿಸುಗುಟ್ಟಿದನೆ?. ಅಥವಾ ಆ ಮಾರ್ಗದ ಅನಾವರಣ ಮಾಡಿದನೆ? ಹಲವರು ಸಂತರು, ದಾಸರು ಈ ದಾರಿಯಲ್ಲಿ ನಡೆದಾಡಿದ ಮಾಸಿದ ಗುರುತುಗಳಿದ್ದವು. ಮೋ.ಕ.ಗಾಂಧಿ ಆ ಗುರುತಿನ ಹೆಜ್ಜೆಗಳಲ್ಲೇ ಹೆಜ್ಜೆ ಇಡುತ್ತ, ಅವರಂತೆಯೇ ಅದೇ ದಾರಿಯಲ್ಲಿ ಸರಳ ಬದುಕಿನ ಮರ್ಮವನ್ನರಿಯುವ ದಿಕ್ಕಿನಲ್ಲಿ 'ಅಹಿಂಸೆ'ಯ ಅಸ್ತ್ರವಿರಿಸಿಕೊಂಡು ಹರಿಶ್ಚಂದ್ರನ ಪಟ ತಲೆಮೇಲೆ ಹೊತ್ತುಕೊಂಡು ಕರಗುವ ಮರುಗುವ ತನಗಳನ್ನು ಮೈ ಗೂಡಿಸಿಕೊಂಡು, ಅನುಕರಿಸಲು ತೊಟ್ಟ ಸೂಟು ಬೂಟು ಕಿತ್ತೆಸೆದು ತನ್ನ ಬಡವರ ಮೈ ಮುಚ್ಚಲು ತಾನೂ ಅರೆಬೆತ್ತಲೆಯಾಗಿ ಹಠದ ಮಾರಿಯನ್ನು ಮೈಯೊಳಗಿಳಿಸಿಕೊಂಡು ಸತ್ಯವೆಂಬ ಆ ದಾರಿಯಲ್ಲಿ ನಡೆಯ ತೊಡಗಿದ.

ಹೆಂಡತಿ ಆದವಳು ಗಂಡನ ಹಿಂದೆ ನಡೆಯಲೇ ಬೇಕು. ಅದು ಅವಳ ಧರ್ಮ. ಅಂತಂತೆಯೇ ಕಸ್ತೂರ ಬಾ ಅವರ ಹಿಂದೆ ನಡೆದಳು. ಅದು ಅವಳಿಗೆ ಒಗ್ಗದ ದಾರಿಯಾಗಿತ್ತು. ಆದರೂ ನಡೆದಳು. ನಡೆ ನಡೆದು ಬೇಸತ್ತಳು. ತಂದೆ ತಾಯಿ ನಡೆಯುತ್ತ ಹೋದಂತೆ ಮಕ್ಕಳೂ ಆ ದಾರಿಯಲ್ಲಿ ಹೆಜ್ಜೆ ಇಟ್ಟರು.ನಡೆಯುವಾಗ ಎಡವಿ ಬಿದ್ದರು.

ಮಕ್ಕಳಿಗಾಗಿ ತಾಯಿ ಹಿಂದಿರುಗಿ ನಿಂತಳು. ತಮ್ಮೆಲ್ಲರನ್ನುಬಿಟ್ಟು ನಡೆಯುತ್ತಿದ್ದ ಗಂಡನೊಡನೆ ರೋದಿಸಿ ತಕರಾರು ಮಾಡಿದಳು. ಅತ್ತ ಹೆಂಡತಿ ಮಕ್ಕಳ ಮೋಹ ಕಡಿದುಕೊಂಡ ಮೋ.ಕ. ಗಾಂಧಿ, ಮಹಾತ್ಮನಾಗಿ ಆ ದಾರಿಯಲ್ಲಿ ದಾಪು ಗಾಲಿಡುತ್ತಿದ್ದರೆ ಇತ್ತ ಹೆಂಡತಿ ನಡೆಯಲಾರದ ಮಕ್ಕಳನ್ನು ನಡೆಸಿಕೊಂಡು ಕಲ್ಲು ಮುಳ್ಳುಗಳ ದಾರಿಯಲ್ಲಿ ರಕ್ತ ಸೋರುವ ಪಾದಗಳೊಂದಿಗೆ ಅಕ್ಷರ ಸಹಃ ಸತ್ಯವಾನ್ ಸಾವಿತ್ರಿಯಂತೆ ಗಂಡನ ಬೆನ್ನು ಹತ್ತಿದಳು.

ಅಷ್ಟೇ ಅಲ್ಲ ಅವರ ಸಮ ಸಮವಾಗಿ ತಾನೂ ನಡೆದು ಮಕ್ಕಳನ್ನೂ ನಡೆಸಿದಳು. ದಾಪುಗಾಲಿಟ್ಟ ಮಹಾತ್ಮನಿಗೋ ಮುಂದಿನ ದಾರಿ ತೋರದೆ ಹೋದಾಗ ಹೆಂಡತಿಯ ಮುಖ ನೋಡುವುದು ರೂಢಿಯಾಗಿತ್ತು. ತಣ್ಣಗೆ ಮುಂದಿನ ದಾರಿ ತೋರುವುದು ಕಸ್ತೂರ ಬಾ ಅವರಿಗೂ ರೂಢಿ ಆಗಿತ್ತು. ಅವರ ಮಕ್ಕಳಂತು ವಿಧೇಯರಾಗಿಯೇ ತಂದೆ ತಾಯಿಯರನ್ನು ಅನುಸರಿಸಿದರು. ಹಿರಿಯ ಮಗ ಮಾತ್ರ ವಿರುದ್ಧದ ದಾರಿಯನ್ನು ತುಳಿದು ಜೀವನದಲ್ಲಿ ಸೋತು ಕಪ್ಪು ಚುಕ್ಕೆಯಾದ. ಅವರ ಸತ್ಯಾನ್ವೇಷಣೆಯ ಪ್ರಯೋಗ ಶಾಲೆಯಲ್ಲಿ ಅವರಿಗೆ ಅವರ ಮಡದಿ ಮಕ್ಕಳು ಹಿತ್ತಲಿನ ತರಕಾರಿಗಳಾದರು.

ಮೋ.ಕ.ಗಾಂಧಿ ಮೊದಲಿಗೆ ತಮ್ಮನ್ನು ತಾವೇ ಸತ್ಯ ಶೋಧದ ಪ್ರಯೋಗಕ್ಕೆ ಒಳಪಡಿಸಿಕೊಂಡು ಆ ದಾರಿಯಲ್ಲಿ ಕೊಸರಿಲ್ಲ ವೆಂದು ಅರಿತ ಮೇಲೆ ಇತರರನ್ನು ಪ್ರೇರೇಪಿಸಿದರು. ಹೆಂಡತಿ ಮಕ್ಕಳಿಗೆ ಒತ್ತಾಯಿಸಿದರು. ಅವರಲ್ಲಿ ಮೊದಲಿಗರೇ ಕಸ್ತೂರ ಬಾ ಆಗಿರುತ್ತಿದ್ದರು. ಇದೆಲ್ಲವನ್ನೂ ಇವತ್ತಿನ ಕಾಲ ಘಟ್ಟದಲ್ಲಿ ನಿಂತು ನೋಡಿದರೆ .....

ದೇಶ ವಿಮೋಚನೆಗಾಗಿ ಅವರ ಹೋರಾಟ, ಅವರ ಉಪವಾಸ ಸತ್ಯಾಗ್ರಹ, ಅವರ ಅಹಿಂಸೆಯ ಜಪ, ವಿದೇಶಿ ವಸ್ತುಗಳ ಬಹಿಷ್ಕಾರ ಖಾದಿಪ್ರಚಾರಕ್ಕಾಗಿ,ಹರಿ ಜನರೋದ್ಧಾರಕ್ಕಾಗಿ ಇಡೀ ದೇಶದ ಹಳ್ಳಿ ಹಳ್ಳಿಗಳಿಗೂ ಇರುವೆಯಂತೆ ಅವರು ನಡೆದಾಡಿದ್ದಾಗಲೀ, ಅವರ ಸ್ವರಾಜ್ಯದ ಕನಸಾಗಲೀ, ಅದಕ್ಕಾಗಿ ನಿಧಿ ಸಂಗ್ರಹಿಸಿದ ಪರಿಯಾಗಲೀ ಎಲ್ಲವೂ ಊಹೆಗೂ ಮೀರಿದ ಸಂಗತಿಗಳಾಗಿ ನಿಲ್ಲುತ್ತವೆ.

ಹಠಮಾರಿ ಮುದುಕ ಮೋ.ಕ.ಗಾಂಧಿ ಯಾರಿಗೂ ನಿಲುಕದವರಾಗಿ, ಯಾರಿಗೂ ಗೋಚರಿಸದವರಾಗಿ, ಅಕ್ಷರಗಳಲ್ಲಿ,ಪದಗಳಲ್ಲಿ ಹಿಡಿದಿಡಲಾರದ ಸಂತನಾಗಿ, ಫಕೀರನಾಗಿ, ತಲೆತಿರುಕ ಮುದುಕನಾಗಿ ಬದುಕಿದ.

ಅಂದು ದೇಶವೇ ದಾಸ್ಯ ವಿಮೋಚನೆಯ ಸನ್ನಿವಾತಕ್ಕೆ ಒಳಗಾಗಿತ್ತು. ದೇಶದ ಉದ್ದಗಲಕ್ಕೂ ಸ್ವತಂತ್ರ ಚಳುವಳಿಗಾಗಿ "ಮಾಡು ಅಥವ ಮಡಿ" ಎನ್ನುವ ಘೋಶ ವಾಕ್ಯಕ್ಕೆ ಕಟ್ಟಿದ ಮನೆ, ಹುಟ್ಟಿದ ಮಕ್ಕಳು, ಕಟ್ಟಿಕೊಂಡ ಹೆಂಡತಿ, ಗೂಟಕ್ಕೆ ಕಟ್ಟಿದ ದನ ಕರುಗಳನ್ನು ಬಿಟ್ಟು ಯುವಕರು ಮುದುಕರೆನ್ನದೆ " ವಂದೇ ಮಾತರಂ " ಮಂತ್ರ ಪಠಿಸುತ್ತ ಗಾಂಧಿಯ ಕರೆ ಬಂದ ದಿಕ್ಕಿನತ್ತ ಓಡಿದ್ದರು.

ಮುಂದೆ,ದೇಶ ವಿಮೋಚನೆಯನ್ನು

ಕುರಿತು, ಅದಕ್ಕಾಗಿ ಬಳಸಿದ ಅಹಿಂಸೆಯ ಅಸ್ತ್ರವನ್ನು ಕುರಿತು,ಅರೆ ಹೊಟ್ಟೆ , ಅರೆ ಬಟ್ಟೆಯ ಈ ಫಕೀರನನ್ನು ಕುರಿತು,ಅವನೊಡನೆ ಏಗಲಾರದೆ ಗಂಡ ಮತ್ತು ತಂದೆಯಾದವನ ಜವಾಬ್ದಾರಿಗಳನ್ನು ಆಗಾಗ ತಿಳಿಸಿ ಹೇಳುವ ಕಸ್ತೂರ ಬಾ ಳ ಕುರಿತು, ಹಲವಾರು ದೇಶಗಳ, ಹಲವಾರು ಭಾಷೆಗಳಲ್ಲಿ ಬಂದ ಅನೇಕ ನಾಟಕಗಳನ್ನೂ ,ಸಿನೇಮಾಗಳನ್ನೂ ನಾವು ನೋಡಿದ್ದೇವೆ.

ನಮ್ಮ ಉತ್ತರ ಕರ್ನಾಟಕದಲ್ಲಿ ಜನ ಜಾಗೃತಿಗಾಗಿ ಹುಟ್ಟಿಕೊಂಡ ಕನ್ನಡದ ಲಾವಣಿಗಳಲ್ಲೂ ಈ ಗಾಂಧಿ ಎಂಬ ಫಕೀರ ಬಂದಿದ್ದಾನೆ, ಕಿಳ್ಳೇಕ್ಯಾತರ ಪರದೆಯಲ್ಲೂ ಗೊಂಬೆಯಾಗಿ ಈ ಮಹಾತ್ಮ ಬಂದಿದ್ದಾನೆ .

ಈಗ ಬಿ.ಆರ್ ಪೋಲೀಸ್ ಪಾಟೀಲ ಅವರ "ನಾನೆಂಬುದು ನಾನಲ್ಲ" ನಾಟಕದೊಳಗ ಸೂಟು ಬೂಟು ಧರಿಸಿದ ವಕೀಲರಾಗಿ, ದಕ್ಷಿಣ ಆಫ್ರಿಕೆಯಲ್ಲಿ ನೆಲೆಸಿದ ಭಾರತೀಯರ ಸಮಾನತೆಯ ಹಕ್ಕುಗಳಿಗಾಗಿ ಹೋರಾಟಕ್ಕಿಳಿದ ಬ್ಯಾರಿಸ್ಟರ್ ಗಾಂಧಿಯಾಗಿ ರೂಪ ಪಡೆದಿದ್ದಾರೆ. ಗುಜರಾತಿನ ಪೋರ್ ಬಂದರಿನಲ್ಲಿ ಹುಟ್ಟಿದರೂ "ಬನಹಟ್ಟಿ"ಯಲ್ಲಿ ಉಂಡು ಬೆಳೆದವರಂತೆ,

ಅಲ್ಲಿಯ ಮಣ್ಣಿಂದ ಎದ್ದು ಬಂದವರಂತೆ ಮೋ.ಕ.ಗಾಂಧಿ ಈ ನಾಟಕದಲ್ಲಿ ರೂಪ ಪಡೆದಿದ್ದಾರೆ. ಕಸ್ತೂರ ಬಾ ಕೂಡ ನಮ್ಮ ಹಳ್ಳಿಯ ಮಗಳಂತೆ, ಗಂಡನ ಜೊತೆ ಮಕ್ಕಳ ಭವಿಷ್ಯಕ್ಕಾಗಿ ಜಗಳ ಮಾಡಿ ಮಾಡಿ, ಕೊನೆ ಕೊನೆಗೆ ಗಂಡನ ಯಶಸ್ಸಿಗಾಗಿ ಸೋತು ಗೆಲ್ಲುವ ನಮ್ಮ ಮನೆ ಮಗಳಂತೆ ಕಾಣುತ್ತಾಳೆ.

ಅಷ್ಟೇ ಅಲ್ಲ ಕಷ್ಟ ಕಾರ್ಪಣ್ಯಗಳನ್ನು ಜೊತೆಯಲ್ಲೇ ಕಟ್ಟಿಕೊಂಡು, ಕೈಗೊಂದು,ಬಗಲಿಗೊಂದು ಮಕ್ಕಳನ್ನು ಸಿಕ್ಕಿಸಿ ಕೊಂಡು, ಅವಸರಿಸಿ ಹೋಗುವ ಗಂಡನನ್ನು ಎಳೆದು ನಿಲ್ಲಿಸಿಕೊಂಡು ಜಾತ್ರೆಯಲ್ಲಿ ಫೋಟೋ ಹೊಡೆಸಿಕೊಂಡ ಸಾಧ್ವಿಯಂತೆ ಕಾಣುತ್ತಾಳೆ ನಮ್ಮ ಕಸ್ತೂರ ಬಾ. ಅದಕ್ಕಾಗಿಯೇ ಇಂದಿನ ಭಾರತೀಯರ ಪಾಲಿಗೆ ಗಾಂಧಿ ಕುಟುಂಬವು ಬದುಕಿದ ಪರಿ ಸೀಮಾತೀತವಾದದ್ದು,ಭಾಷಾತೀತವಾದದ್ದು. ಅದೊಂದು ರೂಪಕವಾಗುತ್ತದೆ. ಅಜ್ಜಿ ಮೊಮ್ಮಕ್ಕಳಿಗೆ ಹೇಳುವ ಕಥೆಯಾಗುತ್ತದೆ.

(ಬಿ.ಆರ್. ಪೊಲೀಸ್ ಪಾಟೀಲರ ನಾನೆಂಬುದು ನಾನಲ್ಲ ನಾಟಕದ ಮುನ್ನುಡಿ) ■



An eight-foot-tall statue of Mahatma Gandhi has been unveiled at Tolstoy Farm, the commune that he had started during his tenure as a lawyer here in South Africa in the early 20th century.

The larger-than-life clay statue now joins large busts of Mahatma Gandhi and Nelson Mandela, both commissioned by sculptor Jalandharnath Rajaram Channole

High Commissioner of India to South Africa Prabhat Kumar during unveiling of a statue of Mahatma Gandhi in continuation with Gandhi Jayanti celebrations at the Tolstoy Farm, in South Africa





ಬೆಳಗಾವಿಯಲ್ಲಿ ನಡೆದ ಗುಲ್ಬರ್ಗಾ ಮತ್ತು ಬೆಳಗಾವಿ ವಿಭಾಗಗಳ ಗಾಂಧಿ ವಿಚಾರ ಸಂಸ್ಕಾರ್ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಸರ್ಟಿಫಿಕೇಟ್ ವಿತರಣೆ ಕಾರ್ಯಕ್ರಮ ..



ಯುವಜನರಿಗಾಗಿ ಗಾಂಧಿ ಪ್ರಣೀತ ಕಾರ್ಯಕ್ರಮಗಳು ವಿಚಾರ ಸಂಕಿರಣ




ಗಾಂಧಿ ಚಿಂತನೆಗಳ ಬಗ್ಗೆ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಂಸ್ಥೆಯ ಅಧ್ಯಕ್ಷರಾದ
ಡಾ. ವೂಡೇ ಪಿ ಕೃಷ್ಣ ಅವರಿಂದ ಬೃಂದಾವನ ಶಿಕ್ಷಣ ಸಂಸ್ಥೆಯಲ್ಲಿ ಉಪನ್ಯಾಸ ..





ಗಾಂಧಿವಾದಿ ಹಾಗೂ ಗಾಂಧಿ ಸ್ಮಾರಕ ನಿಧಿಯ ಸದಸ್ಯ ಪ್ರೊ . ಜಿ ಬಿ ಶಿವರಾಜ್ , ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಂಸ್ಥೆಯ ಅಧ್ಯಕ್ಷ ನಾಡೋಜ .ವೂಡೇ ಪಿ ಕೃಷ್ಣ , ಐ ಆರ್ ಎಸ್ ಅಧಿಕಾರಿ ಡಾ .ಜಯರಾಮ್ ರಾಯ್ ಪುರ , ಗಾಂಧಿ ಸ್ಮಾರಕ ನಿಧಿ ಸದಸ್ಯ ಎಂ ಸಿ ನರೇಂದ್ರ , ಕರ್ನಾಟಕ ಸಂಘದ ಅಧ್ಯಕ್ಷ ಜಯಪ್ರಕಾಶ್ ಗೌಡ ಸಮಾರೋಪ ಸಮಾರಂಭದಲ್ಲಿದ್ದಾರೆ .



ಬಾಪು ಪ್ರಪಂಚ (ಕನ್ನಡ–ಇಂಗ್ಲೀಷ್) ಮಾಸ ಪತ್ರಿಕೆ

RNI No. KARBIL/2019/77950 Regd No.KA/BGGPO/2589/2023-25

Published on 15th of every month and Posted on 20th of every month at Patrikachannel, Bangalore-560 026



Published by : Secretary, Karnataka Gandhi Smaraka Nidhi on behalf of Gandhi Bhavana, Kumarapark East, Bangalore - 560 001
Printed at : **Printastic,** 272, 2nd Main Road, 6th Cross, Lavakushanagar, Laggere Bangalore-58